ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫೦

**ಪಟ್ಟಿ – ೧೩**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೇಳನೇ ಅಧಿವೇಶನ

ಮುಂದುವರೆದ ಉಪವೇಶನ

**ಗುರುವಾರ, ದಿನಾಂಕ : ೧೯ನೇ ಮಾರ್ಚ್, ೨೦೧೫**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

F- 1-B/B

## ಆಭರಣಗಳ ತಯಾರಿಕರಿಂದ ತೆರಿಗೆ ವಂಚನೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :-**

೧೫೧೨ (೧೩೩೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿನ ಚಿನ್ನ-ಬೆಳ್ಳಿ ಆಭರಣಗಳ ತಯಾರಿಕರು ಮತ್ತು ವ್ಯಾಪಾರಗಾರರು ಪ್ರತಿ ದಿನ ಪ್ರತಿ ಮಾಹೆ ಅಥವಾ ಪ್ರತಿ ವರ್ಷ, ಎಷ್ಟು ಪ್ರಮಾಣದ ಚಿನ್ನ ಬೆಳ್ಳಿ ಗಟ್ಟಿಗಳನ್ನು ಅಥವಾ ಹಳೆಯ ಒಡವೆಗಳನ್ನು ಖರೀದಿಸುತ್ತಿದ್ದಾರೆ ಮತ್ತು ಎಷ್ಟು ಪ್ರಮಾಣದ ಆಭರಣಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ; (ಅಧಿಕೃತ ಮತ್ತು ಅನಧಿಕೃತ ವಹಿವಾಟಿನ ಅಂದಾಜು ವಿವರ ನೀಡುವುದು)

(ಆ) ಇವರು ಪಾವತಿಸಬೇಕಿರುವ ಮಾರಾಟ ತೆರಿಗೆಗಳನ್ನು ತಪ್ಪದೆ ಪಾವತಿಸುತ್ತಿದ್ದಾರೆಯೇ ; ಅಥವಾ ವಂಚನೆ ಮಾಡುತ್ತಿದ್ದಾರೆಯೇ ; ಇದನ್ನು ಖಾತರಿಪಡಿಸಿಕೊಳ್ಳಲು ಸರ್ಕಾರ ಯಾವ ವ್ಯವಸ್ಥೆಗಳನ್ನು ಹೊಂದಿದೆ ; ವಿವರಗಳನ್ನು ಒದಗಿಸುವುದು ;

(ಇ) ಇಲ್ಲದಿದ್ದಲ್ಲಿ ಈ ವಿಷಯಗಳ ನಿಯಂತ್ರಣ ಹಾಗೂ ಒಟ್ಟಾರೆ ವಹಿವಾಟುಗಳ ಪಾರದರ್ಶಕತೆ ಬಗ್ಗೆ ಸರ್ಕಾರ ಚಿಂತಿಸುವುದೇ ;

(ಈ) ರಾಜೇಶ್ ಎಕ್ಸ್‌ಪೋರ್ಟ್ ಲಿಮಿಟೆಡ್ ಸಂಸ್ಥೆಯು ತೆರಿಗೆ ವಂಚನೆ ಮಾಡಿರುವ ಆರೋಪಗಳಿರುವುದು ನಿಜವೇ ; ಇದ್ದಲ್ಲಿ ಪೂರ್ಣ ವಿವರ ಒದಗಿಸುವುದು ;

(ಉ) ತೆರಿಗೆ ವಂಚನೆ ಮಾಡಿರುವ ಚಿನ್ನ-ಬೆಳ್ಳಿ ಆಭರಣಗಳ ತಯಾರಕರು/ ವ್ಯಾಪಾರಗಾರರು ಎಷ್ಟಿದ್ದಾರೆ ; ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

## ಗಣಿ ಹಗರಣ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ) :-**

೧೫೧೩ (೧೩೧೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಲೋಕಾಯುಕ್ತ ವರದಿ ಆಧಾರದ ಮೇಲೆ ಗಣಿ ಹಗರಣಗಳಲ್ಲಿ ಭಾಗಿಯಾದ ಅಧಿಕಾರಿ, ಸಿಬ್ಬಂದಿ ಮತ್ತು ಸರ್ಕಾರೇತರ ವ್ಯಕ್ತಿಗಳು ಯಾರು ಯಾರು ; ಇವರ ವಿರುದ್ಧ ಈವರೆಗೆ ಯಾವ್ಯಾವ ಕ್ರಮಗಳನ್ನು ಸರ್ಕಾರ ಜರುಗಿಸಿದೆ, ಕ್ರಮಗಳ ಹಂತಗಳ ವಿವರಗಳನ್ನೊದಗಿಸುವುದು ;

(ಆ) ಗಣಿ ಲೂಟಿಯಿಂದ ಪರಿಸರದ ಮೇಲೆ ಆಗಿರುವ ನಷ್ಟವನ್ನು ಇವರಿಂದ ವಸೂಲ್ಮಾಡಲು ಸರ್ಕಾರ ಕ್ರಮಕೈಗೊಂಡಿದೆಯೇ, ಇಲ್ಲದಿದ್ದರೆ ಕಾರಣಗಳೇನು ?

## ಒಳಚರಂಡಿ ಕಾಮಗಾರಿಯ ಕುರಿತು

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೧೪ (೧೮೫೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಾಗಡಿ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಯು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಾಮಗಾರಿಯು ಪ್ರಾರಂಭಗೊಂಡಿದ್ದು ಯಾವಾಗ ; ಮುಕ್ತಾಯಗೊಳಿಸಲು ಇರುವ ಕಾಲಮಿತಿ ಏನು ;

(ಇ) ಒಳಚರಂಡಿ ಕಾಮಗಾರಿಯು ನೆನೆಗುದಿಗೆ ಬಿದ್ದಿರಲು ಇರುವ ಕಾರಣವೇನು ; (ವಿವರ ನೀಡುವುದು)

(ಈ) ಈ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ; ಈ ಕಾಮಗಾರಿಗೆ ಸಂಬಂಧಪಟ್ಟಂತೆ ಅವ್ಯವಹಾರ ನಡೆದಿದೆಯೇ ? (ಮಾಹಿತಿ ನೀಡುವುದು)

## ರೇಷ್ಮೆ ಹುರಿಗಾರರ ಸಮಸ್ಯೆ ಹಾಗೂ ಸಹಾಯಧನ ಕುರಿತು

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೧೫ (೧೮೨೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯವರು ಡೀಲರ್ಸ್‌ಗಳಿಂದ ರೇಷ್ಮೆಯನ್ನು ಖರೀದಿ ಮಾಡದಿರಲು ಇರುವ ಕಾರಣವೇನು ; ಇದರಿಂದ ರಾಜ್ಯದಲ್ಲಿ ಸಾಕಷ್ಟು ರೇಷ್ಮೆಹುರಿ ಮಾಡುವ ಹಾಗೂ ನೇಕಾರರಿಗೆ ಕೆಲಸವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರೇಷ್ಮೆ ಟ್ವಿಸ್ಟರ್ಸ್ ಹಾಗೂ ಕಾರ್ಮಿಕರು ಕೆಲಸವಿಲ್ಲದೆ ಪರದಾಡುತ್ತಿರುವ ಇವರಿಗೆ ಸಹಾಯ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ;

(ಇ) ರಾಜ್ಯದ ರೇಷ್ಮೆ ಬೆಳೆಗಾರರಿಗೆ ಬಯ್‌ಒಲ್ಟಿನ್ ಮತ್ತು ಮಲ್ಟಿಒಲ್ಟಿನ್ ರೇಷ್ಮೆ ಗೂಡುಗಳಿಗೆ ಸಹಾಯಧನ ನೀಡಲು ಉಳಿಸಿಕೊಂಡಿರುವ ಬಾಕಿ ಮೊತ್ತ ಎಷ್ಟು ; ಈ ಬಾಕಿ ಮೊತ್ತವನ್ನು ಯಾವಾಗ ಪಾವತಿ ಮಾಡಲಾಗುವುದು ? (ವಿವರ ನೀಡುವುದು)

**ಧಾರ್ಮಿಕ ದತ್ತಿ ಇಲಾಖೆಯ ಆಸ್ತಿಯನ್ನು ಒತ್ತುವರಿ ಮಾಡಿರುವುದು**

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೧೬ (೧೩೩೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರ್ಮಿಕ ದತ್ತಿ ಇಲಾಖೆಯ ಜಾಗಗಳನ್ನು ಖಾಸಗಿಯವರು ಒತ್ತುವರಿ ಮಾಡಿರುವ ವಿಷಯು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದರೆ ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ೧೯೮೭ರಲ್ಲಿ ಬೆಂಗಳೂರು ನಗರ ಜಿಲ್ಲೆಯಾಗಿ ಪ್ರತ್ಯೇಕಗೊಂಡಾಗ, ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಒಳಪಡುವ ದೇವಸ್ಥಾನಗಳ ಸಂಖ್ಯೆ ಎಷ್ಟು ; ಸದರಿ ದೇವಾಲಯಗಳ ಒಡೆತನದಲ್ಲಿ ಎಷ್ಟು ಎಕರೆ ಜಮೀನು ಇದೆ ; ಹಾಗೂ ಅವುಗಳ ವಿವರ ನೀಡುವುದು ;

(ಇ) ೨೦೧೫ರ ಪ್ರಸಕ್ತ ಸಾಲಿನ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಎಲ್ಲಾ ದೇವಾಲಯುಗಳು ಎಷ್ಟೆಷ್ಟು ಎಕರೆ ಜಮೀನು ಹೊಂದಿರುತ್ತವೆ ; ಸರ್ಕಾರದ ಆಸ್ತಿಯನ್ನು ಪರಭಾರೆ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ; ಹಾಗೂ ಎಷ್ಟು ದೇವಾಲಯಗಳಿಗೆ ಗುತ್ತಿಗೆಯನ್ನು ನವೀಕರಿಸಿ ನೀಡಲಾಗಿದೆ. ಇವುಗಳ ಅವಧಿ, ಜಾಗ ಮತ್ತು ಯಾವ ದೇವಸ್ಥಾನ ಎಷ್ಟು ಮೊತ್ತಕ್ಕೆ ನವೀಕರಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡುವುದು ?

## ಧಾರ್ಮಿಕ ದತ್ತಿ ಇಲಾಖೆಯ ಆಸ್ತಿಯನ್ನು ಒತ್ತುವರಿ ಮಾಡಿರುವ ಕುರಿತು

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೧೭ (೧೩೩೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ಯಡಿಯೂರು-ನಾಗಸಂದ್ರದ ಸರ್ವೆ ನಂಬರ್-೦೩ರಲ್ಲಿ ಲೋಕೋಪಯೋಗಿ ಇಲಾಖೆಯವರು ಮತ್ತು ಸಿ.ಐ.ಟಿ.ಬಿ.ಯವರು ಶ್ರೀ ಹನುಮಂತ ದೇವರ ದೇವಸ್ಥಾನಕ್ಕೆ ಸೇರಿದ ಜಮೀನನ್ನು ವಶಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದಾರೆ ; ವಿವರ ನೀಡುವುದು ;

(ಆ) ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಸೇರಿದ ಸಾರ್ವಜನಿಕ ಆಸ್ತಿಯನ್ನು ಖಾಸಗಿಯವರು ನಿವೇಶನ ಮಾಡಿಕೊಂಡು ಹಂಚಿಕೆ ಮಾಡಿರುವುದಕ್ಕೆ ಸರ್ಕಾರದ ಅನುಮತಿ ಪಡೆಯಲಾಗಿದೆಯೇ ; ಹಾಗಿದ್ದಲ್ಲಿ ಯಾವಾಗ ಅನುಮೋದನೆ ನೀಡಲಾಗಿದೆ ;

(ಇ) ಲೋಕೋಪಯೋಗಿ ಇಲಾಖೆಯವರು ಸಾರ್ವಜನಿಕ ರಸ್ತೆ ನಿರ್ಮಾಣಕ್ಕೆ ವಶಪಡಿಸಿಕೊಂಡಿರುವ ಜಾಗವನ್ನು ಬಿಟ್ಟು, ಉಳಿದ ಖಾಸಗಿಯವರಿಗೆ ಹಂಚಿಕೆ ಮಾಡಿರುವ ಜಾಗವನ್ನು ಧಾರ್ಮಿಕ ಮತ್ತು ದತ್ತಿ ಇಲಾಖೆಯು ವಶಪಡಿಸಿಕೊಳ್ಳಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

# ನೌಕರರಿಗೆ 'ಸಿ' ಮತ್ತು 'ಡಿ' ದರ್ಜೆಯ ವೇತನ ಶ್ರೇಣಿ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೧೮ (೧೩೮೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಮೂಹ 'ಎ' ಮತ್ತು 'ಬಿ' ದೇವಾಲಯಗಳಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡು ಅವಿರತ ೫ ವರ್ಷಗಳ ಸೇವೆಯನ್ನು ಪೂರೈಸಿದವರಿಗೆ ೧೯೯೭ ರಿಂದ ನೀಡುತ್ತಿದ್ದ 'ಸಿ' ಮತ್ತು 'ಡಿ' ದರ್ಜೆಯ ಸರ್ಕಾರಿ ಶ್ರೇಣಿಯನ್ನು ಮಂಜೂರಾತಿಯನ್ನು ೨೦೧೦ರಿಂದ ಸ್ಥಗಿತಗೊಳಿಸಿರಲು ಕಾರಣವೇನು ;

(ಆ) ಈಗಾಗಲೇ ೫ ವರ್ಷಗಳಿಗೂ ಮೇಲ್ಪಟ್ಟು ಹಲವಾರು ವರ್ಷಗಳ ಅವಿರತ ಸೇವೆಯನ್ನು ಸಲ್ಲಿಸಿರುವ ತಾತ್ಕಾಲಿಕ ನೌಕರರಿಗೆ ಸರ್ಕಾರಿ ವೇತನ ಶ್ರೇಣಿ ಮಂಜೂರು ಮಾಡುವ ಬಗ್ಗೆ ಕೈಗೊಳ್ಳುವ ಕ್ರಮಗಳೇನು ;

(ಇ) ಯಾವ ಕಾಲಮಿತಿಯೊಳಗೆ 'ಸಿ' ಮತ್ತು 'ಡಿ' ದರ್ಜೆಯ ಸರ್ಕಾರಿ ವೇತನ ಶ್ರೇಣಿ ನೀಡಲಾಗುವುದು ;

(ಈ) ಸದರಿ ನೌಕರರ ಕ್ಷೇಮಾಭಿವೃದ್ಧಿಗೆ ಇಲಾಖೆಯು ಕೈಗೊಂಡಿರುವ ತುರ್ತು ಕ್ರಮಗಳು ಯಾವುವು ; ವಿವರ ನೀಡುವುದು ?

## 'ಸಕಾಲ' ಯೋಜನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೧೯ (೧೩೮೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) 'ಸಕಾಲ' ಯೋಜನೆಯನ್ನು ಎಷ್ಟು ಇಲಾಖೆಯ, ಎಷ್ಟು ಸೇವೆಗಳಿಗೆ ವಿಸ್ತರಿಸಲಾಗಿದೆ ;

(ಆ) ಸಕಾಲ ಯೋಜನೆಯನ್ವಯ, ಕಾಲಮಿತಿಯೊಳಗೆ ಸೇವೆ ಸಲ್ಲಿಸಿದ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಇ) ಸಕಾಲ ಯೋಜನೆಯಡಿ ಸರ್ಕಾರ ಈವರೆಗೆ, ಕಾಲಮಿತಿಯೊಳಗೆ ಸೇವೆ ನೀಡದ ಅಧಿಕಾರಿಗಳಿಂದ ವಸೂಲಿ ಮಾಡಿದ ದಂಡ ಎಷ್ಟು ;

(ಈ) ಸಕಾಲ ಯೋಜನೆಯನ್ನು ರಾಜ್ಯದ ನಿರ್ದೇಶನಾಲಯ ಮತ್ತು ಸಚಿವಾಲಯಗಳಿಗೆ ವಿಸ್ತರಿಸಲಾಗುವುದು ಎನ್ನುವ ಮುಖ್ಯಮಂತ್ರಿಯವರ ಭರವಸೆಯನ್ನು ಯಾವಾಗ ಪೂರೈಸಲಾಗುವುದು ; (ದಿನಾಂಕ ನೀಡುವುದು) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೨೦ (೧೩೭೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾನಗರ ಪಾಲಿಕೆಗಳಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಈ ಕುರಿತು ಇರುವ ಮಾನದಂಡಗಳೇನು ;

(ಆ) ಅತ್ಯಂತ ಕೆಳಮಟ್ಟದಲ್ಲಿ ಜೀವನ ನಡೆಸುವ ಪೌರ ಕಾರ್ಮಿಕರಿಗೆ ಈಗಿರುವ ವೇತನ ಹೆಚ್ಚಿಸಿ, ಗರಿಷ್ಠ ವೇತನ ನೀಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ; (ಸಾಧಿಸಿದ ಪ್ರಗತಿಯ ವಿವರ ನೀಡುವುದು)

(ಇ) ಮಹಾನಗರ ಪಾಲಿಕೆಗಳಲ್ಲಿ ಕೆಲಸ ನಿರ್ವಹಿಸುವ ಖಾಯಂ/ತಾತ್ಕಾಲಿಕ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; ಯಾವ ಜಾತಿ–ಜನಾಂಗದವರು ಹೆಚ್ಚಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ; ಅವರ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ಕೈಗಾರಿಕಾ ಭೂ ಪರಿವರ್ತನೆಗೆ ಪರಿವರ್ತನೆ ಮತ್ತು ನೋಂದಣಿ ಶುಲ್ಕ ವಿನಾಯ್ತಿ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೨೧ (೧೩೮೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆ, ತಾಲ್ಲೂಕುಗಳಲ್ಲಿ ಕೈಗಾರಿಕಾ ವಲಯ ಸ್ಥಾಪಿಸಲಾಗಿದೆ ;

(ಆ) ಯಾವ ಯಾವ ಕೈಗಾರಿಕೆಗಳಿಗೆ ಸರ್ಕಾರ ಭೂಮಿಯನ್ನು ಉದ್ಯಮಿಗಳಿಗೆ ಒದಗಿಸುತ್ತಿದೆ ;

(ಇ) ಯಾವ ಮಾನದಂಡದಲ್ಲಿ ಕೈಗಾರಿಕೆಗಳಿಗೆ ಭೂಮಿಯನ್ನು ಒದಗಿಸುತ್ತಿದೆ ;

(ಈ) ರಾಜ್ಯ ಕೈಗಾರಿಕಾ ನೀತಿಯಲ್ಲಿರುವಂತೆ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಭೂ ಪರಿವರ್ತನೆ ಶುಲ್ಕ ಮರುಪಾವತಿ, ಸ್ಟ್ಯಾಂಪ್ ಮತ್ತು ನೋಂದಣಿ ಶುಲ್ಕ ವಿನಾಯಿತಿ ಸಂಬಂಧ ಆದೇಶವನ್ನು ಹೊರಡಿಸದೇ ಇರಲು ಕಾರಣವೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; ಸದರಿ ಆದೇಶವನ್ನು ಯಾವಾಗ ಹೊರಡಿಸಲಾಗುವುದು ? (ವಿವರ ನೀಡುವುದು)

## ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಿಂದ "ಬೋನಸ್" ಬಿಡುಗಡೆಯ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೨೨ (೧೩೪೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಿಂದ ಯಾವ ಯಾವ ವರ್ಷಗಳ ಹಾಗೂ ಎಷ್ಟು ವರ್ಷದಿಂದ ವಿಮಾ ಪಾಲಿಸಿಗಳ ಬೋನಸ್ ವಿತರಣೆ ಮಾಡದೆ ಬಾಕಿ ಇರುತ್ತದೆ ; (K.G.I.D. Bonus)

(ಆ) ವಿಮಾ ಪಾಲಿಸಿದಾರರಿಗೆ ಬಾಕಿ ಇರುವ ಎಷ್ಟು ಬೋನಸ್‌ನ್ನು ಯಾವಾಗ ವಿತರಣೆ ಮಾಡಲಾಗುವುದು ; ವಿವರ ಒದಗಿಸುವುದು ;

(ಇ) ಹಲವಾರು ವರ್ಷಗಳಿಂದ ಬೋನಸ್ ವಿತರಣೆ ಆಗದೆ ಇರುವುದರಿಂದ ನಿವೃತ್ತ ಸರ್ಕಾರಿ ನೌಕರರುಗಳು ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು ?

## ಕೆ.ಎ.ಟಿ. ಅಧ್ಯಕ್ಷರ ಹುದ್ದೆ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೨೩ (೧೫೩೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರಿ ನೌಕರರ ನೇಮಕ, ವೇತನ, ಬಡ್ತಿ, ಪಿಂಚಣಿ ಹಲವಾರು ವ್ಯಾಜ್ಯ ಪರಿಹರಿಸುವ ಕೆ.ಎ.ಟಿ.ಗೆ ಅಧ್ಯಕ್ಷರ ಹುದ್ದೆ ಇನ್ನು ಭರ್ತಿಯಾಗದಿರುವುದಕ್ಕೆ ಕಾರಣವೇನು ; (ವಿವರ ನೀಡುವುದು)

(ಆ) ಕೆ.ಎ.ಟಿ. ಅಧ್ಯಕ್ಷರ ಸದಸ್ಯರ ಹುದ್ದೆಗಳು ಸಕಾಲದಲ್ಲಿ ಭರ್ತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದ್ಯ ಒಂದೇ ಪೀಠ ಕಾರ್ಯನಿರ್ವಹಿಸುತ್ತಿರುವುದರಿಂದ ಅರ್ಜಿಗಳ ವಿಚಾರಣೆಗೆ ಅಡ್ಡಿಯಾಗಿರುವುದು ನಿಜವೇ ; (ವಿವರ ನೀಡುವುದು)

(ಈ) ಸರ್ಕಾರಿ ನೌಕರರು ಕೆ.ಎ.ಟಿ.ಗೆ ನ್ಯಾಯ ಕೋರಿ ಸಲ್ಲಿಸಿರುವ ಅರ್ಜಿ ಸಂಖ್ಯೆ ೨೯ ಸಾವಿರಗಳಿದ್ದು, ಅದರಲ್ಲಿ ೧೪ ವರ್ಷಗಳಷ್ಟು ಹಳೆಯದಾದ ೨೪೯ ಪ್ರಕರಣಗಳು ವಿಚಾರಣೆಗೆ ಬಾಕಿ ಇರುವ ನ್ಯಾಯದಾನದ ವಿಳಂಬವಲ್ಲವೇ ;

(ಉ) ಇದನ್ನು ತ್ವರಿತವಾಗಿ ಬಗೆಹರಿಸಲು ಸರ್ಕಾರದ ಮುಂದಿರುವ ಕ್ರಮವೇನು ? (ವಿವರ ನೀಡುವುದು)

## ಸಿಗ್ನಲ್ ಫ್ರೀ ಕಾರಿಡಾರ್ ರಸ್ತೆಗಳ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೨೪ (೧೮೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಹಾನಗರ ವ್ಯಾಪ್ತಿಯಲ್ಲಿರುವಂತಹ ಸಿಗ್ನಲ್ ಫ್ರೀ ಕಾರಿಡಾರ್ ರಸ್ತೆಗಳು ಯಾವುವು ; ಹಾಲಿ ಕಾರ್ಯ ನಿರ್ವಹಿಸುತ್ತಿರುವ ಇಂತಹ ರಸ್ತೆಗಳಾವುವು ;

(ಆ) ಇವುಗಳ ಜೊತೆಗೆ ಹೊಸದಾಗಿ ಸಿಗ್ನಲ್ ಫ್ರೀ ಕಾರಿಡಾರ್ ರಸ್ತೆಗಳ ನಿರ್ಮಾಣಕ್ಕೆ ಸರ್ಕಾರ ಉದ್ದೇಶಿಸಿದೆಯೇ ; (ಇದಕ್ಕೆ ಕಾರಣಗಳೇನು)

(ಇ) ಇದಕ್ಕಾಗಿ ಈಗ ಯಾವ ಯಾವ ರಸ್ತೆಗಳನ್ನು ಗುರುತಿಸಲಾಗಿದೆ ; (ಸದರಿ ರಸ್ತೆಗಳ ಉದ್ದ, ವಿಸ್ತೀರ್ಣ ಮತ್ತು ವ್ಯಾಪ್ತಿಯ ವಿವರ ಒದಗಿಸುವುದು) ಈ ಯೋಜನಾ ಅನುಷ್ಠಾನಕ್ಕಾಗಿ ವೆಚ್ಚವಾಗುವ ಕಾರಿಡಾರ್ ರಸ್ತೆಗಳವಾರು ಹಣ ಎಷ್ಟು ; (ಯೋಜನಾ ವೆಚ್ಚದ ವಿವರ ನೀಡುವುದು)

(ಈ) ಇವುಗಳ ಜೊತೆಗೆ ಹೊಸ ಉಕ್ಕಿನ ಮೇಲ್ಸೇತುವೆಗಳ ನಿರ್ಮಾಣಕ್ಕೆ ಪಾಲಿಕೆ ಹಾಗೂ ಬಿಡಿಎ ಮುಂದಾಗಿದೆಯೇ ; ಇದಕ್ಕೆ ಪರ್ಯಾಯವಾಗಿ ಎಲ್ಲೆಲ್ಲಿ ರಸ್ತೆ ಸಂಚಾರ ಮಾರ್ಗಗಳನ್ನು ನಿರ್ಮಿಸಲಾಗಿದೆ ;

(ಉ) ವಾಹನ ನಿಲುಗಡೆಗಾಗಿ ವಾಹನ ನಿಲುಗಡೆಯ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಲು ಮುಂದಾಗಿರುವುದು ನಿಜವೇ ? (ಪೂರ್ಣ ವಿವರ ನೀಡುವುದು)

## ಜಾನುವಾರುಗಳ ಮೇವು ಉತ್ಪಾದನೆ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೨೫ (೧೩೭೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮೀಣ ಪ್ರದೇಶ ರೈತರ ಆರ್ಥಿಕ ಅಭಿವೃದ್ಧಿಗೆ ಮತ್ತು ಜಾನುವಾರು ಮತ್ತು ಮೇವು ಉತ್ಪಾದನೆಗೆ ಸರ್ಕಾರ ಕೈಗೊಂಡ ಕ್ರಮವೇನು ; ವಿವರ ನೀಡುವುದು ;

(ಆ) ಭೂ ರಹಿತ ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತೀ ಸಣ್ಣ ರೈತರು ಜೀವನಾಧರಕ್ಕಾಗಿ ಹಸು ಸಾಕಾಣಿಕೆ ಮಾಡುತ್ತಿದ್ದು ಮೇವು ಪೂರೈಕೆಗೆ ಸರ್ಕಾರದಿಂದ ದೊರಕುವ ಸೌಲಭ್ಯವೇನು ;

(ಇ) ರೈತರ ಜಾನುವಾರುಗಳಿಗೆ ಚಿಕಿತ್ಸೆಗಾಗಿ ಲಸಿಕೆ, ಮೇವು ಪೂರೈಕೆಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು ; ವಿವರ ನೀಡುವುದು ?

## ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಪ.ಜಾತಿ/ಪ.ವರ್ಗದ ನಿರ್ದೇಶಕರ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೨೬ (೧೪೩೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳೆಷ್ಟು ; ಈ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಪ.ಜಾತಿ/ಪ.ಪಂಗಡಗಳ ನಿರ್ದೇಶಕರುಗಳು ಇದ್ದಾರೆಯೇ ;

(ಆ) ಯಾವ ಯಾವ ಸಂಘಗಳಲ್ಲಿ ಪ.ಜಾತಿ/ಪ.ವರ್ಗಗಳ ನಿರ್ದೇಶಕರುಗಳು ಇರುವುದಿಲ್ಲ ; ಈ ಸಂಘಗಳ ಹೆಸರು ಮತ್ತು ವಿವರ ನೀಡುವುದು ?

## ಕೆ.ಎಂ.ಎಫ್. ಮಂಡಳಿ ವತಿಯಿಂದ ಖಾಸಗಿಯವರಿಗೆ ನೀಡಲಾದ ಮಳಿಗೆಗಳ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೨೭ (೧೪೩೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಎಂ.ಎಫ್. ಮಂಡಳಿಯ ವತಿಯಿಂದ ಹಾಲು ಮಾರಾಟ ಮಾಡಲು ರಾಜ್ಯದಲ್ಲಿ ಖಾಸಗಿಯವರಿಗೆ ನೀಡಲಾಗಿರುವ ಒಟ್ಟು

ಮಳಿಗೆಗಳೆಷ್ಟು; ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಮಳಿಗೆ ನೀಡಲಾಗಿದೆ ;

(ಆ) ಸದರಿ ಮಳಿಗೆಗಳನ್ನು ನೀಡುವಾಗ ಮಂಡಳಿಯು ಅನುಸರಿಸುವ ಮಾನದಂಡ ಹಾಗೂ ನಿಬಂಧನೆಗಳೇನು ;

(ಇ) ಹೀಗೆ ಮಾರಾಟ ಮಳಿಗೆಗಳನ್ನು ನೀಡುವಾಗ ಪ.ಜಾತಿ/ಪ.ವರ್ಗಗಳಿಗೆ ಮೀಸಲಾತಿ ಪಾಲಿಸಲಾಗುತ್ತಿದೆಯೇ ; ಪಾಲಿಸಿದ್ದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಪ.ಜಾತಿ/ಪ.ವರ್ಗಗಳಿಗೆ ಮಳಿಗೆಗಳನ್ನು ನೀಡಲಾಗಿದೆ ಹೆಸರು ಮತ್ತು ವಿಳಾಸ ವಿವರ ನೀಡುವುದು ?

## ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಸಿ ಮತ್ತು ಆರ್ ನಿಯಮಗಳ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೨೮ (೧೪೩೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಕೇಡಲ್ ಲಿಂಟ್ ರೆಕ್ರೂಟ್‌ಮೆಂಟ್ ರೂಲ್ಸ್ ಇದೆಯೇ ; ಇದ್ದಲ್ಲಿ ಯಾವ ಸಾಲಿನಿಂದ ಸಿ ಮತ್ತು ಆರ್ ರೂಲ್ಸ್ ಅಳವಡಿಸಲಾಗಿದೆ ;

(ಆ) ಈ ನಿಗಮದ ಸಿ ಮತ್ತು ಆರ್ ರೂಲ್ಸ್ ನಿಯಮಗಳಲ್ಲಿ ಪ.ಜಾತಿ/ಪ.ಪಂಗಡ ಮೀಸಲಾತಿ ನಿಯಮವನ್ನು ಅಳವಡಿಸಲಾಗಿದೆಯೇ ; ಅಳವಡಿಸಿದ್ದಲ್ಲಿ ಯಾವ ಯಾವ ಹುದ್ದೆಗಳಲ್ಲಿ ಎಷ್ಟೆಷ್ಟು ಪ.ಜಾತಿ/ಪ.ಪಂಗಡ ನೌಕರರು ಇದ್ದಾರೆ ಮತ್ತು ಸಾಮಾನ್ಯ ವರ್ಗದವರಿದ್ದಾರೆ ?

## ರಾಜ್ಯದಲ್ಲಿರುವ ಹಾಲು ಒಕ್ಕೂಟಗಳ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೨೮ಎ (೧೪೩೬) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಹಾಲು ಒಕ್ಕೂಟಗಳ ಸಂಖ್ಯೆ ಎಷ್ಟು ; ಈ ಒಕ್ಕೂಟಗಳ ಹೆಸರು ಮತ್ತು ವಿಳಾಸ ನೀಡುವುದು ;

(ಆ) ಈ ಒಕ್ಕೂಟಗಳಲ್ಲಿ ಪ.ಜಾತಿ/ಪ.ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಮತ್ತು ಮಹಿಳಾ ನಿರ್ದೇಶಕರನ್ನು ನೇಮಿಸಬೇಕೆಂಬ ಕಾನೂನು ಇದೆಯೇ ; ಹಾಗಿದ್ದಲ್ಲಿ ಈ ಒಕ್ಕೂಟಗಳ ಹೆಸರು ಮತ್ತು ನೇಮಿಸಲಾಗಿರುವ ಪ.ಜಾತಿ/ಪ.ವರ್ಗಗಳ, ಹಿಂದುಳಿದ ವರ್ಗ ಹಾಗೂ ಮಹಿಳೆಯರ ವಿವರ ನೀಡುವುದು ?

## ಸೂರು ಯೋಜನೆ ಹೆಸರಿನಲ್ಲಿ ಸುಳ್ಳು ಬಿಲ್ಲುಗಳು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-**

೧೫೨೯ (೧೫೩೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಬಾಪೂಜಿನಗರ ೧೩೪ರ ವಾರ್ಡ್‌ನ ರಾಜಕಾಲುವೆ ಪಕ್ಕದ ೬ X ೭ ಅಡಿಗಳ ಉದ್ದ ಅಳತೆಯ ಜಾಗದಲ್ಲಿ 'ಸೂರು ಯೋಜನೆ' ಯಡಿ ೩೩ ನಿವೇಶನಗಳನ್ನು ವಿಂಗಡಿಸಲಾಗಿದೆಯೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಬಿಬಿಎಂಪಿ ವತಿಯಿಂದ

ಕೋಟ್ಯಾಂತರ ರೂಪಾಯಿಗಳನ್ನು ಲಪಟಾಯಿಸಲಾಗಿದೆ ಎಂಬ ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ; ಅವ್ಯವಹಾರದಲ್ಲಿ ಭಾಗಿಯಾದ ಅಧಿಕಾರಿಗಳು ಮತ್ತು ಖಾಸಗಿ ವ್ಯಕ್ತಿಗಳು ಯಾರು ?

## ಕೆ.ಎ.ಟಿ.ಯಲ್ಲಿ ಸಿಬ್ಬಂದಿಗಳ ಕೊರತೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೩೦ (೧೭೯೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಕೆ.ಎ.ಟಿ. ನ್ಯಾಯಾಲಯದಲ್ಲಿ ನ್ಯಾಯಾಧೀಶರಿಂದ-ಸಾಮಾನ್ಯ ಕಾರ್ಮಿಕರವರೆವಿಗೂ ಸಿಬ್ಬಂದಿ ಕೊರತೆಯಿಂದ ಮೊಕದ್ದಮೆಗಳು ಇತ್ಯರ್ಥವಾಗದೇ ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಬಿ.ಡಿ.ಎ. ವತಿಯಿಂದ ಸಾರ್ವಜನಿಕರಿಗೆ ಫ್ಲಾಟ್‌ಗಳ ಹಂಚಿಕೆ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೩೧ (೧೮೫೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩-೧೪ ರಿಂದ ಬಿ.ಡಿ.ಎ., ವತಿಯಿಂದ ಸಾರ್ವಜನಿಕರಿಗೆ ವಿತರಿಸಿದ ಫ್ಲಾಟ್ಸ್‌ಗಳೆಷ್ಟು ; ೨೦೧೪-೧೫ರಲ್ಲಿ ಇದುವರೆವಿಗೂ ಹಂಚಿರುವ ಫ್ಲಾಟ್ಸ್‌ಗಳೆಷ್ಟು ;

(ಆ) ಅರ್ಕಾವತಿ ಹಾಗೂ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಇದುವರೆವಿಗೂ ೨೦೧೩-೧೪ ಹಾಗೂ ೨೦೧೪-೧೫ರ ಸಾಲಿನಲ್ಲಿ ಸುಮಾರು ಎಷ್ಟು ಅರ್ಜಿಗಳನ್ನು ನಿವೇಶನಕ್ಕಾಗಿ ಆಹ್ವಾನಿಸಲಾಗಿದೆ ; ಅರ್ಜಿಗಳಿಂದ ಬಂದ ಹಣವೆಷ್ಟು ; ಸಲ್ಲಿಸಿದ ಅರ್ಜಿದಾರರಿಗೆ ಇದುವರೆವಿಗೂ ಎಷ್ಟು ನಿವೇಶನಗಳನ್ನು ಹಂಚಲಾಗಿದೆ ; (ವಿವರ ನೀಡುವುದು)

(ಇ) ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ೧೧೦ ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವಾಗಿರುವುದೇ ; ಸರಬರಾಜು ಮಾಡುತ್ತಿದ್ದರೆ ವಾರ್ಡ್‌ವಾರು ವಿವರ ನೀಡುವುದು ;

(ಈ) ಈ ಹಿಂದೆ ಸಿ.ಎಂ.ಸಿ., ಆಡಳಿತಾವಧಿಯಲ್ಲಿ ಕುಡಿಯುವ ನೀರಿಗಾಗಿ ಬಳಕೆದಾರರಿಂದ ಮುಂಗಡವಾಗಿ ರೂ. ೧೦,೦೦೦ ಗಳನ್ನು ಸಂಗ್ರಹ ಮಾಡಲಾಗಿತ್ತು ; ಇದರಿಂದ ಇಲಾಖೆಗೆ ಸಂಗ್ರಹವಾದ ಹಣವೆಷ್ಟು ? (ವಿವರ ನೀಡುವುದು)

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಮಾಲ್‌ಗಳ ಬಾಡಿಗೆ ನಿಯಮಗಳ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)** :-

೧೫೩೨ (೧೮೫೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಕಿಶೋರ್ ಬಿಯಾನಿ ಒಡೆತನದ ಫ್ಯೂಚರ್ ರಿಟೈಲ್ ಮಾಲ್‌ಗಳಾದ ಬಿಗ್ ಬಜಾರ್, ಸೆಂಟ್ರಲ್, ಈಝೋನ್, ಬ್ರಾಡ್ ಫ್ಯಾಕ್ಟರಿ, ಫುಡ್

ಬಜಾರ್, ಹೋಂಟೌನ್, ಫುಡ್‌ಹಾಲ್, ನೀಲ್‌ಗಿರೀಶ್, ಫ್ಯಾಶನ್ ಬಿಗ್‌ಬಜಾರ್ ಮಾರುಕಟ್ಟೆ ಸಂಸ್ಥೆಗಳು ಕಟ್ಟಡದ ಮಾಲೀಕರ ಜೊತೆ ಮಾಡಿಕೊಂಡಿರುವ ಕಟ್ಟಡದ ಅಗ್ರಿಮೆಂಟ್ ಬಾಡಿಗೆ ನಿಯಮವನ್ನು ಮೀರಿ ಅಂಗಡಿಗಳನ್ನು ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಪ್ರತಿ ಮಳಿಗೆಗಳಿಗೂ ಟ್ರೇಡ್ ಲೈಸೆನ್ಸ್ ಪಡೆದಿರುವರೆ ; ಮಾಲ್‌ಗಳ ಮುಂದೆ, ಐಸ್ ಕ್ರೀಂ ಪಾರ್ಲರ್, ಜಾಟ್ಸ್ ಅಂಗಡಿಗಳನ್ನು ತೆರೆದಿರುವುದಕ್ಕೆ ಲೈಸೆನ್ಸ್ ಪಡೆದಿರುತ್ತಾರೆಯೇ ;

(ಆ) ಸದರಿ ವ್ಯಾಪಾರ ಕಟ್ಟಡಗಳಿಗೆ ಯಾವ ಯಾವ ಮಾನದಂಡದ ಆಧಾರದ ಮೇಲೆ ತೆರಿಗೆ ವಿಧಿಸಲಾಗುತ್ತಿದೆ ; ಎಸ್.ಎ.ಎಸ್. ಆಧಾರದ ಮೇಲೋ ಅಥವಾ ಕಟ್ಟಡ ಬಾಡಿಗೆ ಮೌಲ್ಯದ ಆಧಾರದ ಮೇಲೋ ; ಇತರೆ ಯಾವ ಆಧಾರದ ಮೇಲೆ ವಿಧಿಸಲಾಗುತ್ತಿದೆ ;

(ಇ) ಸದರಿ ಮಳಿಗೆಗಳಲ್ಲಿ ವ್ಯಾಪಾರಸ್ಥರಿಂದ ಪ್ರತಿ ವರ್ಷ ಯಾವ ದಿನದಂದು ತೆರಿಗೆ ಪಾವತಿ ಮಾಡಲಾಗುತ್ತದೆ ;

(ಈ) ಎಲ್ಲಾ ಕಟ್ಟಡಗಳಿಗೂ ಅಗ್ನಿಶಾಮಕ, ಆರೋಗ್ಯ ಮತ್ತು ಪರಿಸರ ಮಾಲಿನ್ಯ ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೇ ; ಪಡೆದಿದ್ದರೆ, ಅದರ ಮಾಹಿತಿಯನ್ನು ನೀಡುವುದು ;

(ಉ) ಮಳಿಗೆಗಳ ಮುಂಭಾಗದಲ್ಲಿ ಮಳಿಗೆದಾರರು ಹಾಕಿರುವ ಜಾಹೀರಾತುಗಳಿಗೆ ಪರವಾನಗಿ ಪಡೆಯಲಾಗಿದೆಯೇ ?

## ಬಿಬಿಎಂಪಿಗೆ ಬಿಡುಗಡೆ ಮಾಡಿದ ಹಣ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೩೩ (೧೮೩೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದಿಂದ ೨೦೧೩–೧೪ ಹಾಗೂ ೨೦೧೪–೧೫ರಲ್ಲಿ ಅಭಿವೃದ್ಧಿಗಾಗಿ ಬಿ.ಬಿ.ಎಂ.ಪಿ.ಗೆ ಬಿಡುಗಡೆ ಮಾಡಿದ ಹಣವೆಷ್ಟು ;

(ಆ) ಬಿಡುಗಡೆ ಮಾಡಿದ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣ ಮಾಡಲಾಗಿದೆ ;

(ಇ) ಮೈಸೂರು ರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆ ಇರುವುದರಿಂದ ಸಿರಸಿ ವೃತ್ತದಿಂದ ಫ್ಲೈ ಓವರ್‌ನ್ನು ಕೆಂಗೇರಿ ಅಥವಾ ಬೆಂಗಳೂರು ವಿಶ್ವವಿದ್ಯಾಲಯ ವೃತ್ತದವರೆವಿಗೂ ಮುಂದುವರೆಸಲು ಸರ್ಕಾರ ಚಿಂತನೆ ಮಾಡಿದೆಯೇ ?

## ಬೆಂಗಳೂರಿಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೩೪ (೧೮೫೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರಾಜ್ಯ ಸರ್ಕಾರದ ನಗರೋತ್ಥಾನ ಯೋಜನೆ, ೧೩ನೇ ಹಣಕಾಸು ಯೋಜನೆ, ರಾಜ್ಯ ಹಣಕಾಸು ಯೋಜನೆ ಮತ್ತು ಮುಖ್ಯಮಂತ್ರಿಗಳ ವಿಶೇಷ

ಯೋಜನೆಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿದ ಹಣವೆಷ್ಟು ;

(ಆ) ೨೦೧೪-೧೫ರಲ್ಲಿ ಅಗಲೀಕರಣಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ; ಯಾವ ಯಾವ ರಸ್ತೆಗಳನ್ನು ಅಗಲೀಕರಣ ಮಾಡಲಾಗಿದೆ ;

(ಇ) Tender sure ಯೋಜನೆಯಲ್ಲಿ ಕೈಗೊಂಡಿರುವ ಜಂಕ್ಷನ್ ಅಭಿವೃದ್ಧಿ ಯಾವ ಯಾವ ಪ್ರಮುಖ ರಸ್ತೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; ಎಷ್ಟು ಕಿ.ಮೀ. ಅಭಿವೃದ್ಧಿಯಾಗಿದೆ ;

(ಈ) Level crossing, ROB-RUB ಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆಗೆದುಕೊಂಡ ಯೋಜನೆಗಳು ಯಾವುವು ; ROB-RUB ಗೆ ಬಿಡುಗಡೆ ಮಾಡಿದ ಹಣವೆಷ್ಟು ; (ವರ್ಷವಾರು ವಿವರ ನೀಡುವುದು)

(ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ೨೦೧೪-೧೫ರಲ್ಲಿ ಎಷ್ಟು ಕೆರೆಗಳ ಅಭಿವೃದ್ಧಿಯಾಗಿದೆ ; ಇದಕ್ಕಾಗಿ ಪ್ರತಿ ಕೆರೆಗೆ ಬಿಡುಗಡೆ ಮಾಡಿದ ಹಣವೆಷ್ಟು ;

(ಊ) ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿಗಾಗಿ ೨೦೧೪-೧೫ರಲ್ಲಿ ತೆಗೆದುಕೊಂಡ ಯೋಜನೆಗಳು ಯಾವುವು ; ಬಿಡುಗಡೆ ಮಾಡಿದ ಹಣವೆಷ್ಟು ; ಯಾವ ಯಾವ ಸ್ಥಳಗಳಲ್ಲಿ ಗ್ರೇಡ್ ಸಪರೇಟ್ ಕಾಮಗಾರಿ ಕೈಗೊಳ್ಳಲಾಗಿದೆ ;

(ಋ) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಉಪನೋಂದಣಾಧಿಕಾರಿಗಳ ಕಛೇರಿಗಳೆಷ್ಟು ? (ವಿಳಾಸಸಹಿತ ವಿವರ ನೀಡುವುದು)

## ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರಿನ ಉತ್ಪಾದನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೫೩೫ (೧೯೧೩) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿನ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರಿನ ವಾರ್ಷಿಕ ಉತ್ಪಾದನೆ ಎಷ್ಟು ;

(ಆ) ಈ ಅದಿರನ್ನು ಉಪಯೋಗಿಸುವಂತಹ ರಾಜ್ಯದಲ್ಲಿರುವ ಕಾರ್ಖಾನೆಗಳು ಯಾವುವು ;

(ಇ) ಈ ಗಣಿಗಾರಿಕೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ರಾಜಧನ ಎಷ್ಟು ;

(ಈ) ರಾಜ್ಯದಲ್ಲಿ ಕಟ್ಟಡಗಳಿಗೆ ಉಪಯೋಗಿಸುವ ಕಬ್ಬಿಣದ ಬೆಲೆ ಗಗನಕ್ಕೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಕಬ್ಬಿಣದ ಬೆಲೆ ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮಾನವ ಕಳ್ಳ ಸಾಗಾಣಿಕೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೫೩೬ (೧೯೧೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಮಾನವ ಕಳ್ಳ ಸಾಗಾಣಿಕೆಯ ಬೃಹತ್ ಜಾಲ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಎಷ್ಟು ಜನ ಅಮಾಯಕರು ಈ ಜಾಲಕ್ಕೆ ಬಲಿಯಾಗಿದ್ದಾರೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಜಾಲದಲ್ಲಿ ಸಿಲುಕಿ ಹಾಕಿಕೊಂಡಿರುವ ಪುರುಷರು, ಮಹಿಳೆಯರು, ಮಕ್ಕಳ ವಿವರ ನೀಡುವುದು ;

(ಇ) ಕಳೆದ ಮೂರು ವರ್ಷಗಳಿಂದ ಈ ಜಾಲಕ್ಕೆ ಬಲಿಯಾದ ಎಷ್ಟು ಜನ ಅಮಾಯಕರನ್ನು ರಕ್ಷಿಸಲಾಗಿದೆ ; ಹಾಗೂ ಇನ್ನೂ ಎಷ್ಟು ಜನ ಅಮಾಯಕರನ್ನು ಪತ್ತೆ ಹಚ್ಚಬೇಕಾಗಿದೆ ;

(ಈ) ಈ ಜಾಲವನ್ನು ಭೇದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ನಿವೃತ್ತ ಸಿಬ್ಬಂದಿಯವರ ಸೇವೆಯನ್ನು ಪಡೆಯುತ್ತಿರುವ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೫೩೭ (೧೭೬೮) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪೌರಾಡಳಿತ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ

ಕಾರ್ಯಾಲಯ/ಗೃಹ ಕಛೇರಿ ಮತ್ತು ಆಪ್ತ ಸಹಾಯಕರ ಹುದ್ದೆಯಲ್ಲಿ ಬಹುತೇಕ ನಿವೃತ್ತ ಸಿಬ್ಬಂದಿಯವರ ಸೇವೆಯನ್ನು ಪಡೆಯುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಬಂದಿದ್ದಲ್ಲಿ, ಸಿಬ್ಬಂದಿಗಳ ಸಂಪೂರ್ಣ ವಿವರಗಳನ್ನು ಒದಗಿಸುವುದು)

(ಆ) ಸದರಿ ನಿವೃತ್ತ ಸಿಬ್ಬಂದಿಯವರಿಗೆ ಸರ್ಕಾರದಿಂದ ಮಾಸಿಕವಾಗಿ ನೀಡುತ್ತಿರುವ ಪಿಂಚಣಿ ಎಷ್ಟು ; (ಸಿಬ್ಬಂದಿವಾರು ವಿವರ ಒದಗಿಸುವುದು)

(ಇ) ಸದರಿ ನಿವೃತ್ತ ಸಿಬ್ಬಂದಿಯವರು ನಿವೃತ್ತಿ ನಂತರ ಪ್ರಸ್ತುತ ನಿರ್ವಹಿಸುತ್ತಿರುವ ಕಾರ್ಯಸ್ವರೂಪ ಹಾಗೂ ಬಳಸಿಕೊಳ್ಳುತ್ತಿರುವ ಸೇವೆಗೆ ಸರ್ಕಾರದಿಂದ ಮಾಸಿಕವಾಗಿ ನಿಗಧಿಪಡಿಸಿರುವ ವೇತನ ಮತ್ತು ಇತರೆ ಭತ್ಯೆಗಳು ಎಷ್ಟು ; (ಸಿಬ್ಬಂದಿವಾರು ವಿವರವನ್ನು ಒದಗಿಸುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೫೩೮ (೧೯೧೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇದುವರೆಗೆ ಬಡಾವಣೆಗಳಿಗಾಗಿ ಸ್ವಾಧೀನ ಪಡಿಸಿಕೊಂಡ ಜಮೀನಿನ ವಿಸ್ತೀರ್ಣ ಎಷ್ಟು ;

(ಆ) ಈ ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ಮಾಡಿ ಹಂಚಲಾಗಿದೆ ; (ಬಡಾವಣೆವಾರು ವಿವರ ನೀಡುವುದು)

(ಇ) ಈ ಜಮೀನನ್ನೂ ಸ್ವಾಧೀನಪಡಿಸಿಕೊಂಡು ಇದುವರೆಗೂ ಉಪಯೋಗಿಸದೆ, ಬಡಾವಣೆ ನಿರ್ಮಿಸದೆ ಇರುವ ಜಮೀನಿನ ವಿಸ್ತೀರ್ಣ ಎಷ್ಟು ? (ಬಡಾವಣೆವಾರು ವಿವರ ನೀಡುವುದು)

## ಬೆಂಗಳೂರು ನಗರದ ಅಂಡರ್‌ಪಾಸ್‌ಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೫೩೯ (೧೯೧೪) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಅಂಡರ್‌ಪಾಸ್‌ಗಳ ಸಂಖ್ಯೆ ಎಷ್ಟು ;

(ಆ) ಬೆಂಗಳೂರಿನ ಯಾವ ಯಾವ ಸ್ಥಳದಲ್ಲಿ ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗಿದೆ ; ಈ ಅಂಡರ್‌ಪಾಸ್‌ಗಳು ಉಪಯೋಗಿಸುವ ರೀತಿಯಲ್ಲಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾರು ಹೊಣೆಗಾರರು ; ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಈ ಅಂಡರ್‌ಪಾಸ್‌ಗಳನ್ನು ಉಪಯೋಗಿಸುವ ರೀತಿಯಲ್ಲಿ ವ್ಯವಸ್ಥೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

## ಅನುಚ್ಛೇಧ ೩೭೧J ಅನ್ವಯ ಬಡ್ತಿ ನೀಡಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೪೦ (೧೮೦೨) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರದ ಲೋಕೋಪಯೋಗಿ ಹಾಗೆ ಇತರೆ ಇಲಾಖೆಯಲ್ಲಿ ಅನುಚ್ಛೇಧ ೩೭೧J ಅಡಿಯಲ್ಲಿನ ಅವಕಾಶದಂತೆ,

ಎಲ್ಲಾ ವೃಂದದ ನೌಕರರು ಮತ್ತು ಅಧಿಕಾರಿಗಳ ಲೋಕಲ್ ಕೇಡರ್ (HKRDB) ಮತ್ತು ರಾಜ್ಯ ವಲಯದಂತೆ ಮಾಡಿರುವ ಜ್ಯೇಷ್ಠತಾ ಪಟ್ಟಿಯ ಸಂಪೂರ್ಣ ವಿವರವಾದ ಮಾಹಿತಿ ಒದಗಿಸುವುದು ;

(ಆ) ಅನುಚ್ಛೇಧ ೩೭೧J ವಿಧಿ ಜಾರಿಯಾದ ನಂತರ ಈ ನಿಯಮಗಳ ಅಡಿಯಲ್ಲಿ ಯಾವ ಯಾವ ಹುದ್ದೆಗಳ ಮತ್ತು ಎಷ್ಟು ನೌಕರರು/ ಅಧಿಕಾರಿಗಳಿಗೆ ಪದೋನ್ನತಿ ಲಭ್ಯವಾಗಿದೆ ; (ವಿವರ ನೀಡುವುದು)

(ಇ) ಹಾಗೇ ೩೭೧J ಬಂದಾಗಿನಿಂದ ಇಲ್ಲಿಯವರೆಗೆ ವಿವಿಧ ಇಲಾಖೆಯಲ್ಲಿ ಯಾವ ಯಾವ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ ? (ವಿವರ ನೀಡುವುದು)

## ಕುಡಿಯುವ ನೀರಿನ ಯೋಜನೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೪೧ (೧೮೦೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ನಗರದ ವ್ಯಾಪ್ತಿಯಲ್ಲಿ ಶಾಶ್ವತ ಶುದ್ಧ ಕುಡಿಯುವ ನೀರನ್ನು ಪೂರೈಸಲು ಯಾವುದಾದರೂ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಕೈಗೊಂಡಿರುವ ಹೊಸ ಯೋಜನೆಗಳು ಯಾವುವು ;

(ಇ) ಈ ಯೋಜನೆಗಾಗಿ ಒದಗಿಸಲಾಗಿರುವ ಅನುದಾನ ಎಷ್ಟು ; ಬಿಡುಗಡೆ ಮಾಡಿರುವ ಅನುದಾನ ಎಷ್ಟು ; (ಯೋಜನಾವಾರು ವಿವರ ನೀಡುವುದು)

## ಗ್ರಾನೈಟ್ ಕಲ್ಲು ಗಣಿಗಾರಿಕೆಗೆ ಗುತ್ತಿಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೪೨ (೧೮೦೦) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಗ್ರಾನೈಟ್ ಕಲ್ಲು ಗಣಿಗಾರಿಕೆ ನಡೆಸಲು ಸರ್ಕಾರ ನೀಡಿರುವ ಗುತ್ತಿಗೆ ಪರವಾನಗಿಗಳ ಸಂಖ್ಯೆ ಎಷ್ಟು ; ಯಾವ ಯಾವ ಕಂಪನಿ/ ವ್ಯಕ್ತಿಗಳಿಗೆ ಎಷ್ಟು ಅವಧಿಯವರೆಗೆ ಗ್ರಾನೈಟ್ ಕಲ್ಲು ಗಣಿಕಾರಿಕೆಗೆ ಗುತ್ತಿಗೆ ನೀಡಲಾಗಿದೆ ; (ವಿವರ ನೀಡುವುದು)

(ಆ) ಗ್ರಾನೈಟ್ ಕಲ್ಲು ಗಣಿಗಾರಿಕೆ ಪರವಾನಗಿಗಳಿಂದ ಸರ್ಕಾರಕ್ಕೆ ಸಂದಾಯವಾಗಿರುವ ರಾಜ್ಯಸ್ವದ ಮೊತ್ತವೆಷ್ಟು ? (ವರ್ಷವಾರು, ಕಂಪನಿವಾರು, ವ್ಯಕ್ತಿವಾರು ಸರ್ಕಾರಕ್ಕೆ ಸಲ್ಲಿಕೆಯಾದ ರಾಜ್ಯಸ್ವದ ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೪೩ (೧೭೯೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಗೆ ಅವಶ್ಯಕವಿರುವ ಒಟ್ಟು ಪೊಲೀಸ್ ಹುದ್ದೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಆ ಪೈಕಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ; (ವಿವರ ಒದಗಿಸುವುದು)

(ಇ) ನಿರೀಕ್ಷಕರು, ವೃತ್ತ ನಿರೀಕ್ಷಕರು ಹಾಗೂ ಪೇದೆಗಳ ಹುದ್ದೆಗಳು ಹೆಚ್ಚಿನ ಪ್ರಮಾಣದಲ್ಲಿ ಖಾಲಿ ಇರುವುದರಿಂದ ಕಾನೂನು ಸುವ್ಯವಸ್ಥೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ತುಂಬಲು ಕ್ರಮ ಕೈಗೊಳ್ಳಲಾಗುವುದು ?

## ಜಿಲ್ಲೆಯಲ್ಲಿ ಕಳ್ಳತನದ ಪ್ರಕರಣ ತಡೆಗಟ್ಟುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೪೪ (೧೮೦೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಕಳ್ಳತನಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ಎರಡು ವರ್ಷದ ಅವಧಿಯಲ್ಲಿ ಎಷ್ಟು ಕಳ್ಳತನ ಪ್ರಕರಣಗಳು ದಾಖಲಾಗಿರುತ್ತದೆ ; ಆ ಪೈಕಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ; (ತಾಲ್ಲೂಕುವಾರು ಮತ್ತು ಠಾಣೆಗಳ ಮಾಹಿತಿ ನೀಡುವುದು)

(ಇ) ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಯಾವುದಾದರೂ ವಿಶೇಷ ಯೋಜನೆ ರೂಪಿಸಲಾಗಿದೆಯೇ ? (ವಿವರ ನೀಡುವುದು)

## ರಾಜ್ಯದ ನ್ಯಾಯಾಲಯಗಳಲ್ಲಿ ಎ.ಪಿ.ಪಿ. ಮತ್ತು ಪಿ.ಪಿ. ಹುದ್ದೆಗಳ ಕೊರತೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೪೫ (೧೮೬೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ದರ್ಜೆಯ ನ್ಯಾಯಾಲಯಗಳಿಗೆ ಮಂಜೂರಾಗಿರುವ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರ ಸಂಖ್ಯೆ ಎಷ್ಟು ; ಕೊರತೆ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರ ಕೊರತೆಯಿಂದ ನ್ಯಾಯಾಲಯದ ದೈನಂದಿನ ಕಾರ್ಯಕಲಾಪಗಳಿಗೆ ತೊಂದರೆಯಾಗುತ್ತಿರುವುದು ಮತ್ತು ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಅನಗತ್ಯ ವಿಳಂಬವಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ; ಗಮನಿಸಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಲೋಕಾಯುಕ್ತ ತನಿಖೆಗೆ ಒಳಪಟ್ಟ ಪ್ರಕರಣಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೪೬ (೧೮೬೪) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಎಷ್ಟು ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ಒಳಪಡಿಸಿದೆ ;

(ಆ) ಆ ಪೈಕಿ ಎಷ್ಟು ಪ್ರಕರಣಗಳಲ್ಲಿ ಲೋಕಾಯುಕ್ತ ತನಿಖೆ ಮುಕ್ತಾಯಗೊಂಡು ರಾಜ್ಯ ಸರ್ಕಾರಕ್ಕೆ ವರದಿ ಒಪ್ಪಿಸಿದೆ; ಲೋಕಾಯುಕ್ತ ವರದಿಯ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿದ ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಖಲಿಸಿದ ಪ್ರಕರಣಗಳು ಎಷ್ಟು ; ಅವು ಯಾವುವು ; ಸದರಿ ಪ್ರಕರಣಗಳಲ್ಲಿ ತೆಗೆದುಕೊಂಡ ಕ್ರಮಗಳೇನು ; (ವರ್ಷವಾರು ಪ್ರಕರಣವಾರು ವಿವರ ನೀಡುವುದು)

(ಈ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗದ ಕುರಿತು ಲೋಕಾಯುಕ್ತ ದಾಖಲಿಸಿದ ಪ್ರಕರಣಗಳೆಷ್ಟು ; ಅವು ಯಾವುವು ಮತ್ತು ತೆಗೆದುಕೊಂಡ ಕ್ರಮಗಳೇನು ? (ವರ್ಷವಾರು, ಪ್ರಕರಣವಾರು ವಿವರ ನೀಡುವುದು)

**ರಾಜ್ಯದಲ್ಲಿ ನ್ಯಾಯಾಧೀಶರುಗಳ ಹುದ್ದೆಯಲ್ಲಿನ ಕೊರತೆ ಕುರಿತು**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೪೭ (೧೮೦೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ದರ್ಜೆಯ ನ್ಯಾಯಾಲಯಗಳಿಗೆ ಮಂಜೂರಾಗಿರುವ ನ್ಯಾಯಾಧೀಶರುಗಳ ಸಂಖ್ಯೆ ಎಷ್ಟು ; ಕೊರತೆ ಇರುವ ನ್ಯಾಯಾಧೀಶರುಗಳ ಸಂಖ್ಯೆ ಎಷ್ಟು ; ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಜ್ಯದಲ್ಲಿ ವಿವಿಧ ದರ್ಜೆಯ ನ್ಯಾಯಾಲಯಗಳಲ್ಲಿನ ನ್ಯಾಯಾಧೀಶರುಗಳ ಹುದ್ದೆಯ ಕೊರತೆಯಿಂದ ಪ್ರಕರಣಗಳ ಇತ್ಯರ್ಥದಲ್ಲಿ ಹಾಗೂ ನ್ಯಾಯಧಾನದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಳ್ಳುವ ತುರ್ತು ಕ್ರಮಗಳೇನು ?

## ರಾಜ್ಯದಲ್ಲಿ ಹಂದಿ ಸಾಕಾಣಿಕೆ ನಿಷೇಧ ಮಾಡಿರುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೪೮ (೧೮೦೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಾರಣಾಂತಿಕವಾಗಿ ಕಾಡುತ್ತಿರುವ ಹೆಚ್೧ಎನ್೧ (ಹಂದಿ ಜ್ವರ) ಜ್ವರಕ್ಕೆ ಕಾರಣವಾದ ಬ್ಯಾಕ್ಟಿರಿಯಾಕ್ಕೆ ಹಂದಿಯೇ ಕಾರಣ ಎನ್ನುವ ಬಗ್ಗೆ ತಜ್ಞರ ವರದಿಯಿದೆಯೇ; (ಇದ್ದಲ್ಲಿ, ವರದಿಯ ಪ್ರತಿಯನ್ನು ಒದಗಿಸುವುದು)

(ಆ) ಹೆಚ್೧ಎನ್೧ ಜ್ವರಕ್ಕೆ ಹಂದಿಯೇ ಕಾರಣ ಎನ್ನುವ ನೆಲೆಯಲ್ಲಿ ಹಂದಿ ಸಾಕಾಣಿಕೆಯನ್ನು ರಾಜ್ಯದಲ್ಲಿ ನಿಷೇಧ ಮಾಡಿರುವುದು ನಿಜವೇ ; ನಿಜವಾದಲ್ಲಿ, ಹಂದಿ ಸಾಕಾಣಿಕೆದಾರರಿಗಾಗುವ ಆರ್ಥಿಕ ನಷ್ಟವನ್ನು ಸರ್ಕಾರದಿಂದ ಭರಿಸಲಾಗುವುದೇ ; ಇಲ್ಲವಾದಲ್ಲಿ, ಕಾರಣವೇನು ;

(ಇ) ಹಂದಿ ಸಾಕಾಣಿಕೆಗೆ ಪ್ರೋತ್ಸಾಹ ಧನವನ್ನು ನೀಡುವ ಸರ್ಕಾರ ಈಗ ಹೆಚ್೧ಎನ್೧ ಜ್ವರದ ಹೆಸರಿನಲ್ಲಿ ಹಂದಿ ಸಾಕಾಣಿಕೆಯನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದಕ್ಕಿಂತ ರೋಗದ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದೇ ; ಇಲ್ಲವಾದಲ್ಲಿ, ಕಾರಣವೇನು ?

## ಬಿ.ಬಿ.ಎಂ.ಪಿ.ಯಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳ ನೇಮಕಾತಿ ಬಗ್ಗೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೪೯ (೧೮೧೦) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ.ಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ಮಾಹಿತಿ ಒದಗಿಸುವುದು)

(ಆ) ಪ್ರಸ್ತುತ ಬಿ.ಬಿ.ಎಂ.ಪಿ.ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು ; ಇವರಲ್ಲಿ ಖಾಯಂ ಬಿ.ಬಿ.ಎಂ.ಪಿ. ನೌಕರರು ಮತ್ತು ಎರವಲು ಸೇವೆಯ ಸಿಬ್ಬಂದಿ, ಅಧಿಕಾರಿಗಳು ಮತ್ತು ನಿಯೋಜನೆಯಲ್ಲಿರುವ ವಿಭಾಗ ಸೇರಿದಂತೆ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಕೊರತೆಯಿರುವ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ನೇರ ನೇಮಕಾತಿ ಮಾಡುವಲ್ಲಿ ಸರ್ಕಾರವು ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ಒದಗಿಸುವುದು)

F- 3-B/B

## ರಾಜ್ಯದ ಸಾಲದ ಪ್ರಮಾಣ ಮತ್ತು ಯೋಜನಾ ವೆಚ್ಚ ಕುರಿತು

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೫೦ (೧೮೧೧) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿ ದೃಷ್ಟಿಯಿಂದ ಪಡೆಯಲಾದ ಸಾಲದ ಪ್ರಮಾಣ ಎಷ್ಟು ; (ಸಾಲ ಪಡೆದ ಮೂಲಗಳು, ಉದ್ದೇಶ, ಇದಕ್ಕೆ ವಿಧಿಸಲಾಗಿರುವ ಬಡ್ಡಿ ಕುರಿತ ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಪ್ರಸ್ತುತ ರಾಜ್ಯದ ಸಾಲದ ಹೊರೆ ಎಷ್ಟು ; ಸಾಲದ ಪ್ರಮಾಣ ಹೆಚ್ಚಳಕ್ಕೆ ಅನುಗುಣವಾಗಿ ಯೋಜನಾ ವೆಚ್ಚ ಏರಿಕೆಯಾಗಿದೆಯೇ ; (ಸಾಲದ ಪ್ರಮಾಣ ಮತ್ತು ಯೋಜನಾ ಹೆಚ್ಚಳ ಕುರಿತ ಪ್ರತ್ಯೇಕ ಮಾಹಿತಿ ಒದಗಿಸುವುದು)

## ನಿವೃತ್ತ ಸರ್ಕಾರಿ ನೌಕರರಿಗೂ ಹಣರಹಿತ ಚಿಕಿತ್ಸಾ ಸೌಲಭ್ಯ ವಿಸ್ತರಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೫೧ (೧೮೨೦) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸೇವೆಯಲ್ಲಿದ್ದಾಗ ಸರ್ಕಾರಕ್ಕೆ ತಮ್ಮ ಯೌವನದ ಅಮೂಲ್ಯ ಸೇವೆ ಸಲ್ಲಿಸಿ, ನಿವೃತ್ತರಾದ ಸರ್ಕಾರಿ ನೌಕರರು ವೃದ್ಧಾಪ್ಯದಲ್ಲಿ ರೋಗಗಳಿಂದ ನರಳುತ್ತಿದ್ದಾಗ ಚಿಕಿತ್ಸಾ ವೆಚ್ಚ ಭರಿಸಲಾಗದೇ ಹತಾಶರಾಗಿ ದಯನೀಯ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ನಿವೃತ್ತ ಸರ್ಕಾರಿ ನೌಕರರ ವೈದ್ಯಕೀಯ ಚಿಕಿತ್ಸೆಗಾಗಿ ಸರ್ಕಾರವು ಯಾವ ಸೌಲಭ್ಯಗಳನ್ನು ಒದಗಿಸುತ್ತಿದೆ ;

(ಇ) ಸೇವಾ ನಿರತ ನೌಕರರಿಗೆ ನೀಡುತ್ತಿರುವ ಸೌಲಭ್ಯಗಳನ್ನು ನಿವೃತ್ತ ಸರ್ಕಾರಿ ನೌಕರರಿಗೆ ಉಚಿತ ಚಿಕಿತ್ಸಾ ಸೌಲಭ್ಯಗಳನ್ನು ವಿಸ್ತರಿಸಲಾಗುವುದೇ ?

## ಸಾರ್ವಜನಿಕ ಉದ್ಯಾನವನಗಳಲ್ಲಿ ಸಾವಯವ ಗೊಬ್ಬರ ಘಟಕ ಸ್ಥಾಪಿಸುವ ಬಗ್ಗೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೫೨ (೧೮೬೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರದಲ್ಲಿನ ಸಾರ್ವಜನಿಕ ಉದ್ಯಾನವನಗಳಲ್ಲಿನ ಜೈವಿಕ ತ್ಯಾಜ್ಯವನ್ನು ವಿಲೇ ಮಾಡಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಆ) ಪ್ರತಿಯೊಂದು ಉದ್ಯಾನವನದಲ್ಲಿಯೇ ಅಲ್ಲಿನ ತ್ಯಾಜ್ಯದಿಂದ ಸಾವಯವ ಗೊಬ್ಬರವನ್ನು ತಯಾರಿಸಿ ಅದೇ ಉದ್ಯಾನದಲ್ಲಿ ಬಳಸಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ವಾಯು ವಿಹಾರಿಗಳ ಉದ್ಯಾನವನಗಳಲ್ಲಿ ಕುಡಿಯುವ ನೀರಿನ ಘಟಕ ಸೇರಿದಂತೆ ಬೇರೆ ಯಾವುದೇ ಕಟ್ಟಡಗಳ ನಿರ್ಮಾಣವನ್ನು ನಿಷೇಧಿಸಲಾಗುವುದೆ ?

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಫ್ಲೆಕ್ಸ್ ಹಾಗೂ ಹೋರ್ಡಿಂಗ್ಸ್ ಬಾಡಿಗೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೫೩ (೧೮೧೬) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸರ್ಕಾರದ/ಪಾಲಿಕೆಯಿಂದ ಅನುಮತಿ ಪಡೆದಿರುವ ಫ್ಲೆಕ್ಸ್ ಹಾಗೂ ಹೋರ್ಡಿಂಗ್ಸ್ ಡಿಸ್‌ಪ್ಲೇ ಸ್ಥಳಗಳು ಯಾವುವು ; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

(ಆ) ಈ ಫ್ಲೆಕ್ಸ್ ಹಾಗೂ ಹೋರ್ಡಿಂಗ್ಸ್ ಡಿಸ್‌ಪ್ಲೇಗಳಿಗೆ ನಿಗದಿಪಡಿಸಿರುವ ಬಾಡಿಗೆ ಎಷ್ಟು ; ಇವುಗಳಿಂದ ಪಾಲಿಕೆಗೆ ಪ್ರತಿ ತಿಂಗಳು ಬರುತ್ತಿರುವ ಒಟ್ಟು ಆದಾಯ ಎಷ್ಟು ; ಕಳೆದ ಮೂರು ವರ್ಷಗಳಿಂದ ಬಂದಿರುವ ಆದಾಯ ಎಷ್ಟು ;

(ಇ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಅನಧಿಕೃತ ಫ್ಲೆಕ್ಸ್/ಹೋರ್ಡಿಂಗ್ಸ್ ಡಿಸ್‌ಪ್ಲೇಗಳೆಷ್ಟು ; ಅವು ಯಾವುವು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಈ) ಈ ಅನಧಿಕೃತ ಫ್ಲೆಕ್ಸ್/ಹೋರ್ಡಿಂಗ್ಸ್ ಡಿಸ್‌ಪ್ಲೇಗಳನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು ?

## ಬೆಂಗಳೂರು ನಗರದಲ್ಲಿ ಪ್ಲಾಸ್ಟಿಕ್ ಮತ್ತು ಫ್ಲೆಕ್ಸ್ ಮುಕ್ತಗೊಳಿಸುವ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೫೪ (೧೮೧೭) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರವನ್ನು ಪ್ಲಾಸ್ಟಿಕ್ ಫ್ಲೆಕ್ಸ್ ಮುಕ್ತ ನಗರವನ್ನಾಗಿ ಪರಿವರ್ತಿಸಲು ಸರ್ಕಾರ ಚಿಂತಿಸಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ;

(ಆ) ಈಗಾಗಲೇ ಪ್ಲಾಸ್ಟಿಕ್ ಚೀಲಗಳ ಬಳಕೆ ನಿಷೇಧಿಸಿದ್ದರೂ ಕೂಡಾ ಸಮರ್ಪಕವಾಗಿ ಅನುಷ್ಠಾನಗೊಳ್ಳದ ಬಗ್ಗೆ ಸರ್ಕಾರದ ನಿಲುವೇನು;

(ಇ) ಪ್ಲಾಸ್ಟಿಕ್ ತಡೆಗೆ ಹಾಗೂ ಜನರಲ್ಲಿ ಜಾಗೃತಿ ಮೂಡಿಸಲು ಅನುಸರಿಸಿದ ಕ್ರಮಗಳೇನು ;

(ಈ) ಸಂಪೂರ್ಣ ಪ್ಲಾಸ್ಟಿಕ್ ಫ್ಲೆಕ್ಸ್ ನಿಷೇಧಕ್ಕೆ ಇರುವ ತೊಂದರೆಗಳೇನು, ಯಾವಾಗ ಪ್ಲಾಸ್ಟಿಕ್ ನಿಷೇಧ ಮಾಡಲಾಗುವುದು ;

(ಉ) ಪ್ಲಾಸ್ಟಿಕ್ ಮತ್ತು ಫ್ಲೆಕ್ಸ್ ಮುಕ್ತಗೊಳಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಹಾಗೂ ಮುಮದೆ ಕೈಗೊಳ್ಳಲಿರುವ ಕ್ರಮಗಳಾವುವು? (ವಿವರ ಒದಗಿಸುವುದು)

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಪಾಲಿಕೆಗೆ ಸೇರಿದ ಖಾಲಿ ನಿವೇಶನಗಳ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೫೫ (೧೮೧೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾಲಿಕೆಗೆ ಸೇರಿದ ನಿವೇಶನಗಳು ಎಷ್ಟಿವೆ ; (ವಿಧಾನಸಭಾ ಕ್ಷೇತ್ರವಾರು ಖಾಲಿ ಇರುವ ನಿವೇಶನದ ವಿಸ್ತೀರ್ಣವಾರು ವಿವರ ಒದಗಿಸುವುದು)

(ಆ) ಯಾವ ಉದ್ದೇಶಕ್ಕೆ ಈ ನಿವೇಶನಗಳನ್ನು ಮೀಸಲಿಡಲಾಗಿದೆ ;

(ಇ) ಈ ಪೈಕಿ ಎಷ್ಟು ನಿವೇಶನಗಳನ್ನು ಯಾವ್ಯಾವ ಉದ್ದೇಶಕ್ಕೆ ಯಾರ್ಯಾರಿಗೆ ನೀಡಲಾಗಿದೆ ; ಎಷ್ಟು ವರ್ಷಗಳಿಗೆ ಗುತ್ತಿಗೆ

ನೀಡಲಾಗಿದೆ ; ಗುತ್ತಿಗೆಯ ಮೊತ್ತ ಎಷ್ಟು ; ಗುತ್ತಿಗೆಯ ಕರಾರುಗಳೇನು; (ನಿವೇಶನಗಳನ್ನು ಪಡೆದಿರುವವರ ವಿವರಗಳನ್ನು ವಿಳಾಸವಾರು ನೀಡುವುದು)

(ಈ) ಬಿ.ಬಿ.ಎಂ.ಪಿ.ಯ ಈ ಖಾಲಿ ನಿವೇಶನಗಳಲ್ಲಿ ವಿಧಾನಸಭಾ ಕ್ಷೇತ್ರಕ್ಕೊಂದು ಕಸ ಸಂಸ್ಕರಣಾ ಘಟಕವನ್ನು ತೆರೆಯುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ?

**ಬಿ.ಬಿ.ಎಂ.ಪಿ. ವಿಭಜನೆ ಕುರಿತು**

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೫೬ (೧೮೧೩) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; ಮುಂದಿದ್ದಲ್ಲಿ, ಎಷ್ಟು ಭಾಗಗಳಾಗಿ ಪಾಲಿಕೆ ರಚನೆ ಮಾಡಲಾಗುವುದು ; (ವಿವರ ಒದಗಿಸುವುದು)

(ಆ) ಇದಕ್ಕಾಗಿ ನೇಮಕ ಮಾಡಿದ್ದ ಸಮಿತಿಯು ಸರ್ಕಾರಕ್ಕೆ ಅಂತಿಮ ವರದಿ ನೀಡಿದೆಯೇ ; ಸದರಿ ವರದಿಯ ಮುಖ್ಯಾಂಶಗಳೇನು ;

(ಇ) ಪಾಲಿಕೆಯನ್ನು ವಿಭಜಿಸುವ ತಂತ್ರಗಾರಿಕೆಯಿಂದ ಚುನಾವಣೆಯನ್ನು ಮುಂದೂಡಲು ಸರ್ಕಾರ ಯೋಚಿಸಿದೆಯೇ ; (ವಿವರ ನೀಡುವುದು)

(ಈ) ಎಷ್ಟು ಭಾಗಗಳೊಂದಿಗೆ ಪಾಲಿಕೆ ರಚಿಸುವುದಲ್ಲದೇ ಪಾಲಿಕೆಯ ಸದಸ್ಯರ ಸಂಖ್ಯೆಯನ್ನು ಎಷ್ಟಕ್ಕೆ ನಿಗಧಿಪಡಿಸಲಾಗುವುದು ;

ಮೇಯರ್ ಆಯ್ಕೆಗೆ ಮಾನದಂಡಗಳೇನು ; ಇದಕ್ಕಾಗಿ ಎಷ್ಟು ಅನುದಾನದ ಅವಶ್ಯಕತೆಯಿದೆ ;

(ಉ) ಮೂರು ಪಾಲಿಕೆಗಳಾಗಿ ಮಾರ್ಪಟ್ಟಲ್ಲಿ ಮೂರಕ್ಕೂ ಒಬ್ಬೊಬ್ಬರು ಮೇಯರ್‌ಗಳನ್ನು ರೂಪಿಸಲಾಗುವುದೇ ಅಥವಾ ಮೂರು ಪಾಲಿಕೆಗೂ ಒಬ್ಬರೇ ಮೇಯರ್ ಇರುವರೇ ಹೇಗೆ ; ಇದಕ್ಕಾಗಿ ತಗಲುವ ವೆಚ್ಚದ ವಿವರ ನೀಡುವುದು ;

(ಊ) ಅದೇ ರೀತಿ ಮೇಯರ್ ಆಯ್ಕೆಯನ್ನು ನೇರವಾಗಿ ಚುನಾಯಿಸುವ ಕ್ರಮದ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ?

## ರಾಜಕಾಲುವೆ ಒತ್ತುವರಿ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೫೭ (೧೮೧೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಒತ್ತುವರಿಯ ವಿವರವನ್ನು ವಿಧಾನಸಭಾ ಕ್ಷೇತ್ರವಾರು ನೀಡುವುದು ;

(ಆ) ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆರವುಗೊಳಿಸಲಾದ ರಾಜಕಾಲುವೆಗಳ ಸಂಖ್ಯೆ ಎಷ್ಟು ; (ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಒದಗಿಸುವುದು)

(ಇ) ರಾಜಕಾಲುವೆಗಳ ಒತ್ತುವರಿದಾರರ ಹೆಸರು ಮತ್ತು ವಿಳಾಸದೊಂದಿಗೆ ವಿವರ ನೀಡುವುದು ; ಈ ಒತ್ತುವರಿದಾರರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ;

(ಈ) ಒತ್ತುವರಿ ತೆರವುಗೊಳಿಸುವ ವಿಚಾರದಲ್ಲಿ ರಾಜ್ಯ ಉಚ್ಚ ನ್ಯಾಯಾಲಯ ನೀಡಿರುವ ಸೂಚನೆ ಏನು ; ನ್ಯಾಯಾಲಯದ ಸೂಚನೆಯ ನಂತರ ತೆಗೆದುಕೊಂಡಿರುವ ಕ್ರಮಗಳೇನು ?

## ಪಶು ವೈದ್ಯರ ಕೊರತೆ ನೀಗಿಸುವ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೫೮ (೧೮೧೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪಶು ವೈದ್ಯರ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ೨೫೦ ಪಶು ವೈದ್ಯಕೀಯ ಪದವೀಧರರನ್ನು ನೇರವಾಗಿ ಮತ್ತು ೨೫೦ ನಿವೃತ್ತ ಪಶು ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿರುವುದು ನಿಜವೇ ;

(ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಪಶು ವೈದ್ಯರ ಹುದ್ದೆಗಳು ಖಾಲಿ ಇವೆ ; ಅವುಗಳಲ್ಲಿ ಈಗಾಗಲೆ ಭರ್ತಿ ಮಾಡಿದ ಪಶು ವೈದ್ಯರ ಹುದ್ದೆಗಳು ಎಷ್ಟು ; ಬಾಕಿ ಉಳಿದಿರುವ ಪಶು ವೈದ್ಯರ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ನೇಮಕ ಮಾಡಿಕೊಳ್ಳಲಾಗುವುದು ?

## ಪಶು ಚಿಕಿತ್ಸಾ ಕೇಂದ್ರಗಳ ಕೊರತೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೫೫ (೧೮೮೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪಶು ಚಿಕಿತ್ಸಾ ಕೇಂದ್ರಗಳ ಕೊರತೆಗಳಿಂದ ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸುವಲ್ಲಿ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಹೊಸ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆಯೇ ; ಅದಕ್ಕಾಗಿ ೨೦೧೪-೧೫ನೇ ಸಾಲಿನಲ್ಲಿ ಮೀಸಲಿಟ್ಟ ಅನುದಾನವೆಷ್ಟು ;

(ಇ) ಬೆಳಗಾವಿ ಜಿಲ್ಲೆಯಲ್ಲಿ ೨೦೧೪-೧೫ನೇ ಸಾಲಿನಲ್ಲಿ ಎಷ್ಟು ಹೊಸ ಪಶು ಚಿಕಿತ್ಸಾ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ ; ಅವು ಯಾವುವು ; (ತಾಲ್ಲೂಕುವಾರು, ಕೇಂದ್ರವಾರು ವಿವರ ನೀಡುವುದು)

(ಈ) ಸದರಿ ಹೊಸ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಬಿಡುಗಡೆ ಮಾಡಿದ ಅನುದಾನವೆಷ್ಟು ; ಅದರಲ್ಲಿ ಖರ್ಚು ಮಾಡಲಾದ ಅನುದಾನವೆಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಕೈಗಾರಿಕಾ ಟೌನ್‌ಷಿಪ್‌ಗಳ ಸ್ಥಾಪನೆ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೬೦ (೧೮೫೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೈಗಾರಿಕಾ ಟೌನ್‌ಷಿಪ್‌ಗಳ ಸ್ಥಾಪನೆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ೨೦೧೪–೧೫ನೇ ಸಾಲಿನಲ್ಲಿ ೨ ಕೈಗಾರಿಕಾ ಟೌನ್‌ಷಿಪ್‌ಗಳಿಗೆ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗಿದೆಯೇ ; (ವಿವರ ಒದಗಿಸುವುದು)

(ಇ) ರಾಜ್ಯದ ಯಾವ ಯಾವ ನಗರಗಳಲ್ಲಿ ಕೈಗಾರಿಕಾ ಟೌನ್‌ಷಿಪ್‌ಗಳ ಸ್ಥಾಪನೆ ಮಾಡಲಾಗಿದೆ; ಸ್ಥಾಪಿಸಲಾದ ಕೈಗಾರಿಕಾ ಟೌನ್‌ಷಿಪ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ;

(ಈ) ಕೈಗಾರಿಕಾ ಟೌನ್‌ಷಿಪ್‌ಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು; ಇದಕ್ಕಾಗಿ ತಗಲುವ ವೆಚ್ಚವೆಷ್ಟು ?

## ನೂತನ ಸಿದ್ದ ಉಡುಪು ನೀತಿಯ ಕುರಿತು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೬೧ (೧೮೫೫) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಸಾಲಿನ ಆಯವ್ಯಯದಲ್ಲಿ ನೂತನ ಸಿದ್ದ ಉಡುಪು ನೀತಿಯ ಅನುಷ್ಠಾನಕ್ಕಾಗಿ ೭೫ ಕೋಟಿ ರೂ ಒದಗಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ರಾಜ್ಯದಲ್ಲಿ ಇಂತಹ ಒಟ್ಟು ಎಷ್ಟು ಸಿದ್ದ ಉಡುಪು ಘಟಕಗಳಿಗೆ ಅನುದಾನ ನೀಡಲಾಗಿದೆ; ಇದಕ್ಕೆ ಇರುವ ಮಾನದಂಡಗಳೇನು ;

(ಈ) ಇದಕ್ಕಾಗಿ ಬಿಡುಗಡೆ ಮಾಡಿದ ಅನುದಾನ ಸದ್ಬಳಕೆಯಾಗಿದೆಯೇ ? (ವಿವರ ನೀಡುವುದು)

## ಕೆ.ಎಸ್.ಎಫ್.ಸಿ. ಮೂಲಕ ಹೊಸ ಉದ್ದಿಮೆಗಳ ಸ್ಥಾಪನೆಗೆ ಸಹಾಯಧನ ನೀಡುವ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೬೨ (೧೮೫೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನ ಆಯವ್ಯಯದಲ್ಲಿ ೭೫ ಕೋಟಿ ರೂ.ಗಳ ಪರಿಮಿತಿಯಲ್ಲಿ ಹೊಸ ಉದ್ದಿಮೆಗಳ ಸ್ಥಾಪನೆಗಾಗಿ ಶೇ. ೬% ಬಡ್ಡಿ ಸಹಾಯಧನವನ್ನು ಕೆ.ಎಸ್.ಎಫ್.ಸಿ. ಮೂಲಕ ಮಂಜೂರು ಮಾಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ರಾಜ್ಯದ ಎಷ್ಟು ಉದ್ದಿಮೆಗಳ ಸ್ಥಾಪನೆಗಾಗಿ ಸಹಾಯಧನ ನೀಡಲಾಗಿದೆ ; (ವಿವರ ಒದಗಿಸುವುದು)

(ಇ) ಸಹಾಯಧನ ಕೋರಿ ಎಷ್ಟು ಉದ್ದಿಮೆಗಳಿಂದ ಅರ್ಜಿಗಳು ಬಂದಿವೆ; ಬಾಕಿ ಇರುವ ಅರ್ಜಿಗಳಿಗೆ ಯಾವ ಕಾಲಮಿತಿಯಲ್ಲಿ ಸಹಾಯಧನವನ್ನು ಒದಗಿಸಲಾಗುವುದು ;

(ಈ) ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಸದ್ಬಳಕೆಯಾಗಿದೆಯೇ ? (ವಿವರ ನೀಡುವುದು)

## ರಾಜ್ಯದಲ್ಲಿರುವ ಜಾನುವಾರುಗಳ ಸಮೀಕ್ಷೆ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ) :-**

೧೫೬೩ (೧೮೨೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಜಾನುವಾರುಗಳ ಸಮೀಕ್ಷೆ ನಡೆದಿದ್ದು ಯಾವಾಗ; ರಾಜ್ಯದಲ್ಲಿ ಎಷ್ಟು ವಿಧದ ಜಾನುವಾರುಗಳು ಇವೆ ; (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು)

(ಆ) ಈ ಜಾನುವಾರುಗಳ ಪಾಲನೆ-ಪೋಷಣೆಗಾಗಿ ಯಾವ ಯಾವ ಗ್ರಾಮಪಂಚಾಯಿತಿಯಲ್ಲಿ ಎಷ್ಟೆಷ್ಟು ಗೋಮಾಳ, ವನ, ಈಚಲ ವನ, ಖರಾಬು ಮುಂತಾದ ಜಮೀನುಗಳನ್ನು ಮೀಸಲಿಡಲಾಗಿದೆ ; (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು)

(ಇ) ಜಾನುವಾರುಗಳ ಪೋಷಣೆಗೆ ಕೊರತೆ ಇರುವ ಜಮೀನನ್ನು ವೃದ್ಧಿಸಿಕೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ) :-**

೧೫೬೪ (೧೮೨೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಇಲಾಖೆಗಳು ಎಷ್ಟು; ಅವು ಯಾವುವು ;

(ಆ) ಸಿಬ್ಬಂದಿ ಮಂಜೂರಾತಿ (Staff Sanction ) ಪ್ರಕಾರ ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಅಧಿಕಾರಿಗಳು/ ಸಿಬ್ಬಂದಿಗಳ ನೇಮಕಾತಿಗಾಗಿ ಅವಕಾಶವಿದೆ ;

(ಇ) ಆ ನೇಮಕಾತಿಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ; ಆ ಪೈಕಿ ಖಾಲಿ ಇರುವ SC/ST ಹುದ್ದೆಗಳ ಸಂಖ್ಯೆ ಎಷ್ಟು ; (ಇಲಾಖಾವಾರು ವಿವರ ನೀಡುವುದು)

(ಈ) ಖಾಲಿ ಇರುವ Back Log ಹಾಗೂ ಇನ್ನಿತರೆ ಹುದ್ದೆಗಳನ್ನು ತುಂಬಿಕೊಳ್ಳಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗೆ Back Log ಹುದ್ದೆಗಳನ್ನು ತುಂಬಲಾಗುವುದು ?

## ಪಶು ವೈದ್ಯ ಆಸ್ಪತ್ರೆ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ) :-**

೧೫೬೫ (೧೮೨೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಪಶು ವೈದ್ಯ ಆಸ್ಪತ್ರೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಆ ಆಸ್ಪತ್ರೆಗಳಲ್ಲಿ ಲಭ್ಯವಾಗುವ ಸೌಲಭ್ಯಗಳು ಮತ್ತು ಔಷಧೋಪಚಾರಗಳು ಯಾವುವು ; (ವಿವರ ನೀಡುವುದು)

(ಇ) ಕಾಲು ಬಾಯಿ ಜ್ವರದ ಖಾಯಿಲೆಯಿಂದ ೨೦೧೨-೧೩, ೨೦೧೩-೧೪ ಮತ್ತು ೨೦೧೪-೧೫ರ ಸಾಲಿನಲ್ಲಿ ಸಾವಿಗೀಡಾದ ಜಾನುವಾರುಗಳ ಸಂಖ್ಯೆ ಎಷ್ಟು; ಈ ರೋಗ ತಡೆಯಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ಜಿಲ್ಲಾವಾರು ವಿವರ ನೀಡುವುದು)

## ಬಿ.ಬಿ.ಎಂ.ಪಿ. ವಾರ್ಡ್ ವ್ಯಾಪ್ತಿಯ ತ್ಯಾಜ್ಯ ವಿಲೇವಾರಿ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ) :-**

೧೫೬೬ (೧೮೨೩) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ.ಯಲ್ಲಿ ಇರುವ ವಾರ್ಡ್‌ಗಳ ಸಂಖ್ಯೆ ಎಷ್ಟು; ಅವು ಯಾವುವು ;

(ಆ) ಯಾವ ಯಾವ ವಾರ್ಡ್‌ನಲ್ಲಿ ಪ್ರತಿದಿನ ಎಷ್ಟೆಷ್ಟು ತ್ಯಾಜ್ಯ ಉತ್ಪಾದನೆಯಾಗುತ್ತಿದೆ; ಇದನ್ನು ವಿಲೇವಾರಿ ಮಾಡಲು ಇರುವ

ವ್ಯವಸ್ಥೆ ಏನು; ಗುತ್ತಿಗೆದಾರರು ವಿಲೇವಾರಿ ಮಾಡುತ್ತಿದ್ದಾರೆಯೇ ; (ಪೂರ್ಣ ವಿವರ ನೀಡುವುದು)

(ಇ) ೨೦೧೨-೨೦೧೩, ೨೦೧೩-೨೦೧೪, ೨೦೧೪-೨೦೧೫ನೇ ಸಾಲಿನಲ್ಲಿ ಯಾವ ಯಾವ ಗುತ್ತಿಗೆದಾರರಿಗೆ ಯಾವ ಯಾವ ವಾರ್ಡ್‌ನ ಎಷ್ಟೆಷ್ಟು ತ್ಯಾಜ್ಯ ವಿಲೇವಾರಿ ಮಾಡಲು ಎಷ್ಟೆಷ್ಟು ಹಣ ಪಾವತಿ ಮಾಡಲಾಗಿದೆ ; (ವಾರ್ಡ್‌ವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ತ್ಯಾಜ್ಯ ವಿಲೇವಾರಿ ಮಾಡಲು ಬಿ.ಬಿ.ಎಂ.ಪಿ.ಯಲ್ಲಿ ಎಷ್ಟು ಜನ ನೌಕರರು ಇದ್ದಾರೆ; ಆ ಪೈಕಿ ಖಾಯಂ ನೌಕರರ ಸಂಖ್ಯೆ ಎಷ್ಟು; ಗುತ್ತಿಗೆ ನೌಕರರ ಸಂಖ್ಯೆ ಎಷ್ಟು; (ಅವರ ಹೆಸರು, ವಿಳಾಸದ ಪೂರ್ಣ ಮಾಹಿತಿ ನೀಡುವುದು)

(ಉ) ತ್ಯಾಜ್ಯ ವಿಲೇವಾರಿ ಗುತ್ತಿಗೆದಾರರಿಗೆ ನೀಡಬೇಕಾಗಿರುವ ಬಿಲ್ಲಿನ ಮೊತ್ತ ಎಷ್ಟು; ನೀಡಲು ಬಾಕಿ ಇರುವ ಮೊತ್ತ ಎಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿರುವ ದೇವಸ್ಥಾನಗಳ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ) :-**

೧೫೬೭ (೧೮೨೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಮುಜರಾಯಿ ಮತ್ತು ಮುಜರಾಯೇತರ ದೇವಸ್ಥಾನಗಳ ಸಂಖ್ಯೆ ಎಷ್ಟು; ಅವು ಯಾವುವು ; (ವಿವರ ನೀಡುವುದು)

(ಆ) ಯಾವ ಯಾವ ದೇವಸ್ಥಾನದಿಂದ ಎಷ್ಟೆಷ್ಟು ವಾರ್ಷಿಕ ಆದಾಯವಿದೆ ; (ದೇವಸ್ಥಾನವಾರು ವಿವರ ನೀಡುವುದು)

(ಇ) ಹಾಗೆ ಲಭ್ಯವಾಗುವ ಆದಾಯವನ್ನು ಆಯಾಯ ದೇವಸ್ಥಾನದಲ್ಲಿ ಯಾವ ಉದ್ದೇಶಕ್ಕೆ ಬಳಸಲಾಗುತ್ತಿದೆ ;

(ಈ) ಆಡಳಿತ ಮಂಡಳಿಯಲ್ಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ? (ದೇವಸ್ಥಾನವಾರು ಹುದ್ದೆವಾರು ವಿವರ ನೀಡುವುದು ಹಾಗೂ ಅವರುಗಳಿಗೆ ನೀಡುವ ಸಂಬಳ ಮತ್ತು ಭತ್ಯೆಯ ಪೂರ್ಣ ವಿವರ ನೀಡುವುದು)

## ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೬೮ (೧೮೨೮) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ತ್ಯಾಜ್ಯದ ಪ್ರಮಾಣವೆಷ್ಟು ಹಾಗೂ ವಿಲೇವಾರಿ ಮಾಡಲು ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)

(ಆ) ತ್ಯಾಜ್ಯ ವಿಲೇವಾರಿಯನ್ನು ಖಾಸಗಿಯವರಿಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಮೊತ್ತಕ್ಕೆ ಎಷ್ಟು ವರ್ಷಗಳಿಗೆ ಗುತ್ತಿಗೆ ನೀಡಲಾಗಿದೆ; ಗುತ್ತಿಗೆಯ ಮೊತ್ತ ಎಷ್ಟು ; (ಗುತ್ತಿಗೆದಾರರ ವಿಳಾಸ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

(ಇ) ತ್ಯಾಜ್ಯ ವಿಲೇವಾರಿಯನ್ನು ಗುತ್ತಿಗೆಗೆ ನೀಡುವಾಗ ಅನುಸರಿಸಲಾಗಿರುವ ಮಾನದಂಡಗಳಾವುವು ; (ವಿವರ ನೀಡುವುದು)

(ಈ) ತ್ಯಾಜ್ಯದಿಂದ ಸಾವಯುವ ಗೊಬ್ಬರ ಉತ್ಪಾದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಉ) ತ್ಯಾಜ್ಯ ವಿಲೇವಾರಿಗೆ ಬಿಬಿಎಂಪಿ ಪ್ರತಿ ವರ್ಷ ವೆಚ್ಚ ಮಾಡುತ್ತಿರುವ ಹಣವೆಷ್ಟು; ತೆರಿಗೆದಾರರಿಂದ ಪಡೆಯುತ್ತಿರುವ ಹಣವೆಷ್ಟು ? (ವಲಯವಾರು ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದ ಪ್ರತಿ ಪ್ರಜೆಯ ಮೇಲಿರುವ ಸಾಲ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೬೯ (೧೮೨೭) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಪ್ರತಿ ಪ್ರಜೆಗೆ ರೂ.೨೬,೦೦೦ ರೂ.ಗಳ ಸಾಲದ ಹೊರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಜೆಯ ಮೇಲಿರುವ ಸಾಲದ ಹೊರೆಯಿಂದ ಮುಕ್ತಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಕಾಮಗಾರಿಗೆ ಮಂಜೂರು ಮಾಡಿರುವ ಹಣ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೭೦ (೧೮೪೮) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಟೆಂಡರ್ ಶೂರ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳು ಯಾವುವು ;

(ಆ) ಪ್ರತಿ ಕಾಮಗಾರಿಗೆ ಮಂಜೂರು ಮಾಡಿರುವ ಹಣವೆಷ್ಟು; ಇವುಗಳಲ್ಲಿ ಯಾವ ಯಾವ ಕಾಮಗಾರಿ ಮುಕ್ತಾಯವಾಗಿದೆ ಹಾಗೂ ಅಪೂರ್ಣವಾಗಿರುವ ಕಾಮಗಾರಿಗಳು ಯಾವುವು ; (ಮಾಹಿತಿ ಒದಗಿಸುವುದು) ;

(ಇ) ಈ ಕಾಮಗಾರಿಗಳಲ್ಲಿ ಪಾದಚಾರಿಗಳ ಮಾರ್ಗವನ್ನು ಅಗಲ ಮಾಡಿ, ರಸ್ತೆಯನ್ನು ಕಿರಿದು ಮಾಡಿರುವುದರಿಂದ, ವಾಹನ ದಟ್ಟಣೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಮಹಾನಗರ ಪಾಲಿಕೆ ವ್ಯಾಪ್ತಿಯ ಅಕ್ರಮ-ಸಕ್ರಮ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೭೧ (೧೮೪೯) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿಸ್ತೀರ್ಣವೆಷ್ಟು ;

(ಆ) ಈ ವ್ಯಾಪ್ತಿಯಲ್ಲಿ ಅಕ್ರಮ-ಸಕ್ರಮದಡಿ ಕಟ್ಟಡಗಳನ್ನು ಸಕ್ರಮಗೊಳಿಸಲಾಗುತ್ತಿದೆಯೇ ;

(ಇ) ಹಾಗಿದ್ದಲ್ಲಿ, ನಿವೇಶನಗಳ ಅಳತೆ, ವಿಸ್ತೀರ್ಣವನ್ನು ಗುರುತಿಸಲಾಗಿದೆಯೇ ;

(ಈ) ಗುರುತಿಸಿದ್ದಲ್ಲಿ, ವಿಸ್ತೀರ್ಣಗಳ ಬಗ್ಗೆ ವಿವರ ನೀಡುವುದು ಮತ್ತು ಇವುಗಳಿಗೆ ನಿಗಧಿಪಡಿಸುವ ದಂಡದ ಮೊತ್ತವೆಷ್ಟು ; (ಮಾಹಿತಿ ನೀಡುವುದು)

(ಉ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಕ್ರಮ–ಸಕ್ರಮ ಕಟ್ಟಡಗಳಿಗೆ ಮತ್ತು ಕಂದಾಯ ನಿವೇಶನಗಳಿಗೆ ಅವಕಾಶವಿದೆಯೇ ; (ವಿವರ ನೀಡುವುದು)

(ಊ) ಈ ಅಕ್ರಮ–ಸಕ್ರಮದ ಬಗ್ಗೆ ಸರ್ಕಾರ ಅನುಸರಿಸಲಿರುವ ಮಾನದಂಡಗಳಾವುವು ? (ಆದೇಶವಿದ್ದರೆ ಸರ್ಕಾರಿ ಆದೇಶದ ಪ್ರತಿ ನೀಡುವುದು)

## ರಾಜ್ಯದಲ್ಲಿ ತೆರಿಗೆ ಪ್ರಕರಣಗಳಿಂದ ನಷ್ಟ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೭೨ (೧೮೭೩) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ತೆರಿಗೆ ವಂಚನೆ ಪ್ರಕರಣಗಳು ದಾಖಲಾಗಿವೆಯೇ; ತೆರಿಗೆ ವಂಚಿಸಿರುವ ಸಂಸ್ಥೆಗಳ ಜಿಲ್ಲಾವಾರು ವಿವರಗಳನ್ನು ನೀಡುವುದು;

(ಆ) ಹಾಗಿದ್ದಲ್ಲಿ, ತೆರಿಗೆ ವಂಚಿಸಿ ನ್ಯಾಯಾಲಯಗಳಲ್ಲಿ ಪ್ರಕರಣ ಎದುರಿಸುತ್ತಿರುವ ವರ್ತಕರು/ಸಂಸ್ಥೆಗಳಾವುವು; ಸಂಸ್ಥೆಗಳವಾರು ಜಿಲ್ಲಾವಾರು ಮಾಹಿತಿ ನೀಡುವುದು ;

(ಇ) ಹಾಗಿದ್ದಲ್ಲಿ, ತೆರಿಗೆ ವಂಚನೆಯಿಂದಾಗಿ ರಾಜ್ಯ ಸರ್ಕಾರಕ್ಕೆ ಉಂಟಾಗಿರುವ ನಷ್ಟವೆಷ್ಟು ಮಾಹಿತಿ ನೀಡುವುದು ;

(ಈ) ಕಳೆದ ೨ ವರ್ಷಗಳಲ್ಲಿ ರಾಜ್ಯ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬಂದಿರುವ ಆದಾಯದ ಮೊತ್ತವೆಷ್ಟು ; ಜಿಲ್ಲಾವಾರು ಮಾಹಿತಿ ನೀಡುವುದು ?

## ಬಿ.ಬಿ.ಎಂ.ಪಿ.ಯ ಗ್ರಂಥಾಲಯಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೫೭೩ (೧೮೩೧) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಾರ್ವಜನಿಕರಿಂದ ಗ್ರಂಥಾಲಯ ಕರ ಸಂಗ್ರಹಿಸುತ್ತಿದೆಯೇ; ಹೌದಾದಲ್ಲಿ, ಕಳೆದ ಐದು ವರ್ಷಗಳಲ್ಲಿ ಸಂಗ್ರಹವಾಗಿರುವ ಗ್ರಂಥಾಲಯ ಕರದ ಅಂದಾಜು ಮೊತ್ತವೆಷ್ಟು ;

(ಆ) ಸಂಗ್ರಹವಾಗಿರುವ ಹಣದಲ್ಲಿ ಬಿಬಿಎಂಪಿಯ ಗ್ರಂಥಾಲಯಗಳಿಗೆ ವಿನಿಯೋಗವಾಗಿರುವ ಒಟ್ಟು ಹಣವೆಷ್ಟು; ಸದರಿ ಹಣವನ್ನು ಗ್ರಂಥಾಲಯದ ಅಭಿವೃದ್ಧಿಗಾಗಿ ಮಾತ್ರ ವಿನಿಯೋಗಿಸಬೇಕೆಂಬ ನಿಯಮವಿದೆಯೇ; ಗ್ರಂಥಾಲಯಕ್ಕೆ ಮೀಸಲಿಟ್ಟ ಹಣವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಿರುವುದು ನಿಜವೇ; ನಿಜವಾದಲ್ಲಿ ಎಷ್ಟು ಹಣವನ್ನು ಯಾವುದಕ್ಕೆ ಬಳಕೆ ಮಾಡಲಾಗಿದೆ; ಈ ರೀತಿ ಬಳಕೆ ಮಾಡಲು ಅವಕಾಶವಿದೆಯೇ ;

(ಇ) ಪ್ರಸ್ತುತ ಬಿಬಿಎಂಪಿಯ ಗ್ರಂಥಾಲಯಗಳಲ್ಲಿ ದಿನಪತ್ರಿಕೆ ತರಿಸಲು ಹಣದ ಕೊರತೆ ಎದುರಾಗಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ; ಈ ಸಂಬಂಧ ಜರೂರು ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ಸ್ಕೈವಾಕ್‌ಗಳಿಗೆ ಲಿಫ್ಟ್‌ಗಳ ಅಳವಡಿಕೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೫೭೪ (೧೮೩೨) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಪಾದಚಾರಿಗಳು ರಸ್ತೆದಾಟುವ ಸಂಬಂಧ ಎಷ್ಟು ಕಡೆ ಎತ್ತರಿಸಿದ ಪಾದಚಾರಿ ಮಾರ್ಗಗಳನ್ನು (ಸ್ಕೈವಾಕ್) ನಿರ್ಮಿಸಲು ಯೋಜಿಸಲಾಗಿದೆ ; (ವಿವರ ನೀಡುವುದು)

(ಆ) ಸ್ಕೈವಾಕ್ ಮೆಟ್ಟಿಲುಗಳನ್ನು ಏರಲಾಗದ ವಯೋವೃದ್ಧರು, ಅಂಗವಿಕಲರು, ರೋಗಿಗಳು ಮತ್ತು ಇತರೆ ಅಶಕ್ತರಿಗೆ ರಸ್ತೆ ದಾಟಲು ಕಲ್ಪಿಸಬಹುದಾದ ಅನುಕೂಲತೆ ಬಗ್ಗೆ ಚಿಂತನೆ ನಡೆಸಲಾಗಿದೆಯೇ ;

(ಇ) ಈಗಾಗಲೇ ನಿರ್ಮಿಸಿರುವ ಸ್ಕೈವಾಕ್‌ಗಳಲ್ಲಿ ಲಿಫ್ಟ್‌ಗಳನ್ನು ಅಳವಡಿಸಿರುವ ಸ್ಕೈವಾಕ್‌ಗಳು ಯಾವುವು; ಹಾಗೂ ಲಿಫ್ಟ್ ಅಳವಡಿಸಲು ಕಾರಣವೇನು ;

(ಈ) ಅದೇ ರೀತಿಯ ಕಾರಣಗಳನ್ನು ಹೊಂದಿರುವಂತಹ ಪ್ರಸ್ತುತ ನಿರ್ಮಿಸಲು ಉದ್ದೇಶಿಸಿರುವ ಸ್ಕೈವಾಕ್‌ಗಳಿಗೂ ಸಹ ಲಿಫ್ಟ್‌ಗಳನ್ನು ಅಳವಡಿಸಲಾಗುವುದೇ; ಹೌದಾದಲ್ಲಿ ಅವುಗಳು ಯಾವುವು; ಇಲ್ಲವಾದರೆ ಕಾರಣವೇನು ಮತ್ತು ಲಿಫ್ಟ್ ಅಳವಡಿಸುವ ಕುರಿತು ಮರು ಪರಿಶೀಲಿಸಲಾಗುವುದೇ ?

## ಪೌರ ಕಾರ್ಮಿಕರ ವೇತನ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೫೭೫ (೧೮೩೪) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಸ ವಿಲೇವಾರಿಯಲ್ಲಿ ತೊಡಗಿಸಿಕೊಂಡಿರುವ ಪೌರ ಕಾರ್ಮಿಕರಿಗೆ ಕಳೆದ ಐದು ತಿಂಗಳಿನಿಂದ ವೇತನ ನೀಡದಿರುವುದು ನಿಜವೇ ;

(ಆ) ಈ ಸಂಬಂಧ ಹೈಕೋರ್ಟಿನ ವಿಭಾಗೀಯ ಪೀಠವು ಏನಾದರೂ ಸೂಚನೆ ನೀಡಿದೆಯೇ; ನೀಡಿದ್ದಲ್ಲಿ, ವಿವರ ನೀಡುವುದು ;

(ಇ) ಇವರುಗಳಿಗೆ ವೇತನ ನೀಡಲು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು ?

## ಗುತ್ತಿಗೆದಾರರಿಗೆ ಹಣ ಬಿಡುಗಡೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೫೭೬ (೧೮೩೫) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಬಿಎಂಪಿ ವ್ಯಾಪ್ತಿಯಲ್ಲಿ ಏಪ್ರಿಲ್ ೨೦೧೩ರಿಂದ ನಿರ್ಮಾಣ ಕಾಮಗಾರಿಗಳನ್ನು ಮುಗಿಸಿರುವ ಗುತ್ತಿಗೆದಾರರಿಗೆ ಇದುವರೆವಿಗೂ ಹಣ ಬಿಡುಗಡೆ ಮಾಡದಿರುವುದು ನಿಜವೇ ;

(ಆ) ನಿಜವಾಗಿದ್ದಲ್ಲಿ, ಇಲ್ಲಿಯವರೆಗೆ ನೀಡಬೇಕಾಗಿರುವ ಒಟ್ಟು ಅಂದಾಜು ಮೊತ್ತವೇನು; ಸದರಿ LOC ಹಣ ಬಿಡುಗಡೆಗೆ ಸರ್ಕಾರ

ಮುಂದಾಗುವುದೇ; ಇದಕ್ಕೆ ಬೇಕಾಗುವ ಕಾಲಮಿತಿ ಏನು ? (ವಿವರ ನೀಡುವುದು)

## ರಸ್ತೆ ನಿರ್ಮಾಣ ಯೋಜನೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೫೭೭ (೧೮೩೩) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ತುಮಕೂರು, ಬಳ್ಳಾರಿ, ಹಳೇ ಮದ್ರಾಸ್, ಸರ್ಜಾಪುರ, ಬನ್ನೇರುಘಟ್ಟ, ಹೊಸೂರು, ಕನಕಪುರ, ಮೈಸೂರು ಹಾಗೂ ಮಾಗಡಿ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ೧೧೬ ಕಿ.ಮೀ. ರಸ್ತೆ ನಿರ್ಮಾಣ ಯೋಜನೆ ಘೋಷಣೆಯಾಗಿ ಚಾಲನೆಯಾಗಿದ್ದು ಯಾವಾಗ ; (ವಿವರ ನೀಡುವುದು)

(ಆ) ಸದರಿ ರಸ್ತೆ ನಿರ್ಮಾಣ ಕಾಮಗಾರಿಗೊಳಿಸಲು ನಿಗದಿಪಡಿಸಲಾಗಿದ್ದ ಕಾಲಮಿತಿ ಏನು; ಇಲ್ಲಿಯವರೆಗೆ ಸದರಿ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಯಾವ ರೀತಿಯ ಪ್ರಗತಿ ಸಾಧಿಸಲಾಗಿದೆ; ಕಾಮಗಾರಿ ಪ್ರಕ್ರಿಯೆಯಲ್ಲಿ ವಿಳಂಬವಾಗಲು ಕಾರಣವೇನು ? (ಕಾಮಗಾರಿವಾರು ಮಾಹಿತಿ ನೀಡುವುದು)

## ರಾಜ್ಯದಲ್ಲಿರುವ ಸಿಮೆಂಟ್ ಕಾರ್ಖಾನೆಗಳ ವಾರ್ಷಿಕ ಉತ್ಪಾದನಾ ಪ್ರಮಾಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೭೭೮ (೧೮೪೧) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸಣ್ಣ ಮತ್ತು ದೊಡ್ಡ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಕಾರ್ಖಾನೆಗಳು ರಾಜ್ಯ ಅಥವಾ ಕೇಂದ್ರ ಸರ್ಕಾರಗಳಿಗೆ ಒಳಪಟ್ಟಿವೆಯೇ ;

(ಇ) ಇವುಗಳಿಂದ ಬರುವ ವಾರ್ಷಿಕ ಉತ್ಪಾದನಾ ಪ್ರಮಾಣ ಎಷ್ಟು ;

(ಈ) ಕಾರ್ಖಾನೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ; ಕಲ್ಪಿಸಲಾಗಿದ್ದರೆ, ಏನೇನು ಸೌಲಭ್ಯಗಳನ್ನು ಕಲ್ಪಿಸಲಾಗಿದೆ ; (ಪೂರ್ಣ ಮಾಹಿತಿ ನೀಡುವುದು)

(ಉ) ಇತ್ತೀಚಿನ ದಿನಗಳಲ್ಲಿ ಸಿಮೆಂಟ್ ದರವು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ದರವನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಪ್ರಸ್ತುತ ಒಂದು ಸಿಮೆಂಟ್ ಬ್ಯಾಗಿನ ದರ ಎಷ್ಟು; ಕಳೆದ ವರ್ಷದಿಂದ ಇಲ್ಲಿಯವರೆಗೆ ಹೆಚ್ಚಾಗಿರುವ ದರದ ವಿವರ ನೀಡುವುದು;

(ಋ) ತಮಿಳುನಾಡಿನಲ್ಲಿ ಅಮ್ಮ ಸಿಮೆಂಟ್‌ನ್ನು ಕಡಿಮೆ ದರದಲ್ಲಿ ನೀಡುತ್ತಿರುವಂತೆ ಕರ್ನಾಟಕದಲ್ಲೂ ಅಣ್ಣ ಸಿಮೆಂಟ್‌ನ್ನು ನೀಡುವ

ಅಥವಾ ಬೇರೆ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಅಣ್ಣ ಸಿಮೆಂಟ್‌ನ್ನು ನೀಡಲಾಗುವುದು ?

## ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಕೊರತೆ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೭೭ (೧೮೪೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಪಶು ಚಿಕಿತ್ಸಾ ಕೇಂದ್ರ ಮತ್ತು ಗರ್ಭಧಾರಣಾ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶು ವೈದ್ಯಾಧಿಕಾರಿಗಳ ಮತ್ತು ಪಶು ಸಹಾಯಕರುಗಳ ಸಂಖ್ಯೆ ಎಷ್ಟು ;

(ಇ) ಖಾಲಿ ಇರುವ ಕೇಂದ್ರಗಳಿಗೆ ಪಶು ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ನೇಮಕ ಮಾಡುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ಪಶು ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದಲ್ಲಿ, ಪಶು ಔಷಧಿಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಈಗ ಬೇಸಿಗೆ ಪ್ರಾರಂಭವಾಗುತ್ತಿದ್ದು ಕಾಲುಬಾಯಿ ರೋಗ ಹಾಗೂ ಇನ್ನೂ ಇತರೆ ರೋಗಗಳು ಹರಡದಿರಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಬೆಂಗಳೂರು ನಗರದ ಕಸ ವಿಲೇವಾರಿ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೮೦ (೧೮೪೬) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ಕಸ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಹಾಗಿದ್ದಲ್ಲಿ, ಸ್ಥಳ ಗುರುತಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ; (ಇದಕ್ಕೆ ಸಂಬಂಧಿಸಿದ ಪೂರ್ಣ ಮಾಹಿತಿ ನೀಡುವುದು)

(ಇ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಒತ್ತುವರಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು ;

(ಈ) ಒತ್ತುವರಿಯಾಗಿರುವ ಕೆರೆಗಳನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಪೂರ್ಣ ಮಾಹಿತಿ ನೀಡುವುದು)

## ಮಹಿಳಾ ಗೃಹ ರಕ್ಷಕ ದಳ ಸಿಬ್ಬಂದಿಗಳ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೮೧ (೧೮೪೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಮತ್ತು ಪುರುಷ ಗೃಹ ರಕ್ಷಕ ದಳ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ನೌಕರರುಗಳಿಗೆ ಪ್ರಸ್ತುತ ನೀಡಲಾಗುತ್ತಿರುವ ವೇತನ ಮತ್ತು ಇತರೆ ಸವಲತ್ತುಗಳೇನು ; (ವಿವರ ನೀಡುವುದು)

(ಇ) ಈ ನೌಕರರುಗಳಿಗೆ ವೇತನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು; ಯಾವಾಗಿನಿಂದ ಜಾರಿಗೆ ತರಲಾಗುವುದು ;

(ಈ) ಈ ನೌಕರರುಗಳಿಗೆ ಸೇವಾ ಭದ್ರತೆಯನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ ಸರ್ಕಾರದ ಕ್ರಮಗಳೇನು ;

(ಉ) ಸ್ಥಳೀಯ ಹಿರಿಯ ಪೊಲೀಸ್ ಅಧಿಕಾರಿಗಳು ಮಹಿಳಾ ಗೃಹ ರಕ್ಷಕ ದಳ ಸಿಬ್ಬಂದಿಗಳಿಗೆ ರಾತ್ರಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಹಾಗಿದ್ದಲ್ಲಿ, ಮಹಿಳಾ ಗೃಹ ರಕ್ಷಕ ದಳ ಸಿಬ್ಬಂದಿಗಳ ರಕ್ಷಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ಪಶು ಚಿಕಿತ್ಸಾ ಕೇಂದ್ರ ಕಟ್ಟಡಗಳ ನಿರ್ಮಾಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೮೨ (೧೮೬೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಪಶು ಚಿಕಿತ್ಸಾ ಕೇಂದ್ರ ಮತ್ತು ಗರ್ಭಧಾರಣ ಘಟಕಗಳ ಸಂಖ್ಯೆ ಎಷ್ಟು ;

(ಆ) ಅವುಗಳಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಮತ್ತು ಹೊಂದಿಲ್ಲದ ಕೇಂದ್ರಗಳ ಸಂಖ್ಯೆ ಎಷ್ಟು ;

(ಇ) ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಕೇಂದ್ರಗಳ ಸಂಖ್ಯೆ ಎಷ್ಟು;

(ಈ) ಪ್ರತಿ ಕೇಂದ್ರಗಳಿಗೂ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಕಾರ್ಖಾನೆಗಳಿಗಾಗಿ ಭೂಸ್ವಾಧೀನ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ) :-**

೧೫೮೩ (೧೯೦೨) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪಿಸಲಾದ ಒಟ್ಟು ಸಿಮೆಂಟ್ ಕಾರ್ಖಾನೆಗಳು ಹಾಗೂ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯಲ್ಲಿ

ಸ್ಥಾಪಿಸಲಾದ ಉಕ್ಕಿನ ಕಾರ್ಖಾನೆಗಳೆಷ್ಟು; ಈ ಕಾರ್ಖಾನೆಗಳ ಉತ್ಪಾದನೆ ಮತ್ತು ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿ ಹಾಗೂ ಸ್ವಾಧೀನ ಪಡಿಸಿಕೊಂಡ ಜಮೀನುಗಳ ವಿವರ ನೀಡುವುದು ;

(ಆ) ಕಲಬುರಗಿ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಗಳು ಹಾಗೂ ಬಳ್ಳಾರಿ, ಕೊಪ್ಪಳ ಜಿಲ್ಲೆಯಲ್ಲಿ ಉಕ್ಕು ಕಾರ್ಖಾನೆಗಳು ಸ್ಥಾಪಿಸುವ ಉದ್ದೇಶಕ್ಕಾಗಿ ಜಮೀನು ಕಳೆದುಕೊಂಡ ರೈತರ ಸಂಖ್ಯೆ ಎಷ್ಟು ; (ಕಾರ್ಖಾನೆವಾರು, ಗ್ರಾಮ ಪಂಚಾಯತ್‌ವಾರು, ಎಕರೆವಾರು ಮಾಹಿತಿ ನೀಡುವುದು)

(ಇ) ಸದರಿ ಕಾರ್ಖಾನೆಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಜಮೀನು ಕಳೆದುಕೊಂಡ ಕುಟುಂಬದಿಂದ ಸ್ಥಳೀಯರಿಗೆ ಸರೋಜಿನಿ ಮಹಿಷಿ ವರದಿ ಪ್ರಕಾರ ಎಷ್ಟು ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ ; (ಮಾಹಿತಿ ನೀಡುವುದು)

(ಈ) ಸದರಿ ಕಾರ್ಖಾನೆಗಳಲ್ಲಿ ಜಮೀನು ಕಳೆದುಕೊಂಡ ಕುಟುಂಬದಿಂದ ಸ್ಥಳೀಯರಿಗೆ ಹಾಗೂ ಸರೋಜಿನಿ ಮಹಿಷಿ ವರದಿ ಪ್ರಕಾರ ಉದ್ಯೋಗ ಕಲ್ಪಿಸದೇ ಇದ್ದಲ್ಲಿ, ಸರ್ಕಾರ ಉದ್ದಿಮೆದಾರರ ಮೇಲೆ ಕೈಗೊಳ್ಳುವ ಕ್ರಮವೇನು ? (ಮಾಹಿತಿ ನೀಡುವುದು)

## ಕಲಬುರಗಿ ನಗರದ ಕುಡಿಯುವ ನೀರಿನ ಶುದ್ಧೀಕರಣ ಘಟಕ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೫೮೪ (೧೯೦೧) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮಹಾನಗರಕ್ಕೆ ಕುಡಿಯುವ ನೀರಿನ ಮೂಲಗಳು ಯಾವುವು; ನೀರಿನ ಎಷ್ಟು ಬೇಡಿಕೆ ಇದೆ; ಎಷ್ಟು ಪೂರೈಕೆಯಾಗುತ್ತಿದೆ ; (ಮಾಹಿತಿ ನೀಡುವುದು)

(ಆ) ಕಲಬುರಗಿ ಮಹಾನಗರಕ್ಕೆ ಶುದ್ಧ ಕುಡಿಯುವ ನೀರಿಗಾಗಿ ಎಷ್ಟು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದೆ; ಸದರಿ ಘಟಕಗಳ ನಿರ್ವಹಣೆ, ರಾಸಾಯನಿಕಗಳು, ಸಂಬಳ, ಇತರೆ ವೆಚ್ಚಗಳ ೨೦೧೨-೨೦೧೩ ರಿಂದ ಈವರೆಗಿನ ಸಮಗ್ರ ಪ್ರತ್ಯೇಕ ವಿವರ ನೀಡುವುದು ;

(ಇ) ಸದರಿ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳು ಸಂಪೂರ್ಣವಾಗಿ ಸ್ಥಗಿತಗೊಂಡು ನೀರು ಶುದ್ಧೀಕರಣ ಪ್ರಕ್ರಿಯೆ ನಡೆಯದೇ ನೀರು ಸರಬರಾಜು ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ ;

(ಈ) ಅಶುದ್ಧ ನೀರು ಸರಬರಾಜಿನಿಂದ ಕಲಬುರಗಿ ಜನತೆ ರೋಗಗಳಿಂದ ಬಳಲುತ್ತಿದ್ದು, ಇದಕ್ಕೆ ಕಾರಣರಾದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಉ) ಸರ್ಕಾರ ಈಗಲಾದರೂ ಸದರಿ ಶುದ್ಧೀಕರಣ ಘಟಕವನ್ನು ದುರಸ್ತಿಗೊಳಿಸಿ ಕಲಬುರಗಿ ಮಹಾಜನತೆಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಮುಂದಾಗುವುದೇ ? (ವಿವರ ನೀಡುವುದು)

## ಹೈದರಾಬಾದ್–ಕರ್ನಾಟಕ ಪ್ರದೇಶದ ಇಲಾಖೆಗಳಿಗೆ ಪ್ರತ್ಯೇಕ ಕಾರ್ಯನೀತಿ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

**೧೫೮೫** (೧೯೦೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅನುಚ್ಛೇದ ೩೭೧(ಜೆ) ಪ್ರಕಾರ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಕುರಿತು ರಾಜ್ಯ ಸರ್ಕಾರ ಎಲ್ಲಾ ಇಲಾಖೆಗಳಿಗೆ ಪ್ರತ್ಯೇಕ ಕಾರ್ಯನೀತಿ ಹಾಗೂ ನಿಯಮಾವಳಿಗಳನ್ನು ರೂಪಿಸಲಾಗುತ್ತಿದೆಯೇ ; ಹಾಗಿದ್ದಲ್ಲಿ, ಸಿ.ಆ.ಸು.ಇ ಇಲಾಖೆಯ ಆದೇಶ/ದಿನಾಂಕ, ಇಲಾಖಾವಾರು ಪ್ರತ್ಯೇಕ ಪ್ರತಿಗಳನ್ನು ಒದಗಿಸುವುದು ;

(ಆ) ಯಾವ ಇಲಾಖೆಗಳು "ಕಾರ್ಯನೀತಿ" ಹಾಗೂ "ನಿಯಮಾವಳಿಗಳು" ಪೂರ್ಣ ಪ್ರಮಾಣದಲ್ಲಿ ರಚಿಸಲಾಗಿದೆ ; ಇನ್ನೂ ಎಷ್ಟು ಇಲಾಖೆಗಳಿಂದ ರಚಿಸಲಾಗಿಲ್ಲ ; ಇಲಾಖಾವಾರು ಮಾಹಿತಿ ನೀಡುವುದು ;

(ಇ) ಸದರಿ ಪ್ರಸ್ತಾವನೆಗಳು ಪೂರ್ಣ ಪ್ರಮಾಣದಲ್ಲಿ ರಚಿಸಿ ಸಂಪುಟದ ಅನುಮೋದನೆಗಾಗಿ ಮಂಡಿಸಲಾಗಿದೆಯೇ ; ಎಷ್ಟು ಪ್ರಸ್ತಾವನೆಗಳು

ಅನುಮೋದನೆಯಾಗಿವೆ ಹಾಗೂ ಎಷ್ಟು ಪ್ರಸ್ತಾವನೆಗಳು ತಿರಸ್ಕರಿಸಲಾಗಿವೆ ? (ವಿವರ ನೀಡುವುದು)

## ಕಲಬುರಗಿ ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಭೂಸ್ವಾಧೀನ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

**೧೫೮೬** (೧೯೦೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ತಾಲ್ಲೂಕಿನಲ್ಲಿ ಅಧಿಸೂಚನೆಯನ್ನು ಹೊರಡಿಸಿ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆಯೇ ; (ಅಧಿಸೂಚನೆ ದಿನಾಂಕ, ಸ್ವಾಧೀನ ಉದ್ದೇಶ, ಸ್ವಾಧೀನಪಡಿಸಿದ ಜಮೀನಿನ ವಿವರ, ಪ್ರತಿ ಎಕರೆಗೆ ಕೊಟ್ಟ ಪರಿಹಾರದ ಮೊತ್ತದ ವಿವರಗಳನ್ನು ನೀಡುವುದು)

(ಆ) ರೈತರು ತಮ್ಮ ಫಲವತ್ತಾದ ಭೂಮಿಯನ್ನು ಕಳೆದುಕೊಂಡು ಯೋಗ್ಯ ಪರಿಹಾರ ದೊರೆಯದೆ ಜಮೀನು ಅಭಿವೃದ್ಧಿ ಹಾಗೂ ಕುಟುಂಬದ ಅಗತ್ಯಗಳಿಗಾಗಿ ಮಾರಾಟ ಮಾಡಲಿಕ್ಕೂ ಆಗದೇ ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ರೈತರ ಕಂಗೆಟ್ಟ ಪರಿಸ್ಥಿತಿಯನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು ; (ವಿವರ ನೀಡುವುದು)

(ಇ) ಸ್ವಾಧೀನ ಪಡಿಸಿಕೊಂಡ ಸಾವಿರಾರು ಎಕರೆ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ಕೈಗಾರಿಕೆ ಪ್ರದೇಶಗಳು ಅಭಿವೃದ್ಧಿ ಆಗದೇ

ಯಾವುದೇ ಕೈಗಾರಿಕೆ ಸ್ಥಾಪಿಸದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು ? (ಮಾಹಿತಿ ನೀಡುವುದು)

## ಚಾಮರಾಜನಗರ ಒಳಚರಂಡಿ ವ್ಯವಸ್ಥೆ ಕಾಮಗಾರಿಗಳು

ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–

೧೫೮೭ (೧೮೫೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳನ್ನು ಯಾವಾಗಿನಿಂದ ಪ್ರಾರಂಭಿಸಲಾಯಿತು ; ಪ್ರಾರಂಭ ಮಾಡಿದಾಗ ಇದಕ್ಕೆ ನಿಗದಿಪಡಿಸಿದ್ದ ಅಂದಾಜು ಮೊತ್ತ ಎಷ್ಟು ; ಈಗ ಪರಿಷ್ಕರಣೆಯಾಗಿರುವ ಅಂದಾಜು ಮೊತ್ತ ಎಷ್ಟು ; ಯಾವ ಸಂಸ್ಥೆಗೆ ಇದನ್ನು ಗುತ್ತಿಗೆ ನೀಡಲಾಗಿದೆ ;

(ಆ) ಈವರೆಗೆ ಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು ; ಇದಕ್ಕೆ ತಗುಲಿದ ವೆಚ್ಚ ಎಷ್ಟು ; (ವಿವರ ನೀಡುವುದು)

(ಇ) ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವುವು ; ಸದರಿ ಕಾಮಗಾರಿಗಳಿಗೆ ಖರ್ಚಾಗಿರುವ ಮೊತ್ತ ಎಷ್ಟು ; ಇನ್ನೂ ಎಷ್ಟು ಹಣ ಬೇಕಾಗುತ್ತದೆ ; ಯಾವ ಕಾಲಮಿತಿಯೊಳಗೆ ಕಾಮಗಾರಿಯನ್ನು ಮುಕ್ತಾಯಗೊಳಿಸಲಾಗುವುದು ;

(ಈ) ಈ ಕಾಮಗಾರಿಯು ಅತ್ಯಂತ ನಿಧಾನ ಗತಿಯಲ್ಲಿ ನಡೆಯಲು ಕಾರಣಗಳೇನು ; ಈ ಕಾಮಗಾರಿಗಳಿಂದ ನಗರದ ಜನತೆಗೆ ಬಹಳ ತೊಂದರೆ ಆಗಿದ್ದು, ಈ ಕಾಮಗಾರಿಯನ್ನು ಬರುವ ಮಳೆಗಾಲದ ಒಳಗಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೮೮ (೧೮೬೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪೊಲೀಸ್ ಇಲಾಖೆಯಲ್ಲಿ ಮಂಜೂರಾಗಿರುವ ಮತ್ತು ಖಾಲಿ ಇರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ಲಿಪಿಕ ಸಿಬ್ಬಂದಿ ವರ್ಗದವರು (ಗ್ರೂಪ್ 'ಡಿ' ಸೇರಿ), ತಾಂತ್ರಿಕ ಸಿಬ್ಬಂದಿ (ಟೆಕ್ನಿಕಲ್ ಸ್ಟಾಫ್) ಮತ್ತು ವೈಜ್ಞಾನಿಕ ಸಿಬ್ಬಂದಿ (ಬೆರಳಚ್ಚು ತಜ್ಞರು ಇತ್ಯಾದಿ) ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಪ್ರಸ್ತುತ ಯಾವ ಯಾವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ ; (ಹುದ್ದೆಗಳ ಸಂಖ್ಯೆ ಇತ್ಯಾದಿ ವಿವರಗಳನ್ನು ಒದಗಿಸುವುದು)

(ಇ) ರಾಜ್ಯದಲ್ಲಿರುವ ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ; ಅವು ಎಲ್ಲೆಲ್ಲಿವೆ ; ಜಿಲ್ಲೆಗೊಂದರಂತೆ ಮಹಿಳಾ ಪೊಲೀಸ್

ಠಾಣೆಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗುವುದೇ ; ಮಹಿಳಾ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಖ್ಯೆ ಎಷ್ಟು ?

## ಮೈಸೂರು ಚಾಮರಾಜನಗರ ಜಿಲ್ಲೆಯಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳು.

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೮೯ (೧೮೬೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯುಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ; ಈ ಜಿಲ್ಲೆಗಳಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು ಕೇಂದ್ರಗಳ ಸಂಖ್ಯೆ ಎಷ್ಟು ; ಈ ಜಿಲ್ಲೆಗಳಲ್ಲಿ ಹೊಸದಾಗಿ ಪಶುವೈದ್ಯಕೀಯ ಆಸ್ಪತ್ರೆ ಮತ್ತು ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಈ ಎರಡೂ ಜಿಲ್ಲೆಗಳಿಗೆ ಮಂಜೂರಾಗಿರುವ ಪಶುವೈದ್ಯಾಧಿಕಾರಿಗಳು ಮತ್ತು ಇತರೆ ಸಹಾಯಕ ಪಶುವೈದ್ಯಕೀಯ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ; ಇವುಗಳ ಪೈಕಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಈ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು ;

(ಇ) ಈ ಜಿಲ್ಲೆಗಳಲ್ಲಿ ಚಪ್ಪೆರೋಗದ ಪ್ರಕರಣಗಳು ವರದಿಯಾಗಿವೆಯೇ ; ಎಷ್ಟು ಜಾನುವಾರುಗಳಿಗೆ ಈ ರೋಗ ತಗುಲಿದ ಈ ಬಗ್ಗೆ ಕೈಗೊಂಡಿರುವ ನಿವಾರಣೋಪಾಯಗಳೇನು ?

**ಬಿ.ಬಿ.ಎಂ.ಪಿ. ವ್ಯಾಪ್ತಿಯ ಬಡಾವಣೆಗಳಲ್ಲಿ ನೀರಿನ ಸಂಪರ್ಕ**

**ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೯೦(೧೮೬೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ ಮತ್ತು ಮೊದಲಿನಿಂದಲೂ ಸ್ವಯಂಪೂರಿತ ನೀರು ಸರಬರಾಜು ಸೌಕರ್ಯ ಹೊಂದಿದ್ದ ಗೃಹ ನಿರ್ಮಾಣ ಸಹಕಾರ ಸಂಘಗಳ ಬಡಾವಣೆಗಳ ನಿವಾಸಿಗಳು, ಈ ಸಂಪರ್ಕಗಳನ್ನು ಅಧಿಕೃತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳೇನು ; ತಾವು ಹೊಂದಿರುವ ಸಂಪರ್ಕದ ಬಗ್ಗೆ ಯಾರಿಗೆ ಅರ್ಜಿ ಸಲ್ಲಿಸಬೇಕು ; ಈ ಸಂಪರ್ಕವನ್ನು ಅಧಿಕೃತ ಗೊಳಿಸಲು ನಿಗದಿಪಡಿಸಿರುವ ಶುಲ್ಕ ಎಷ್ಟು ; ಈ ಬಗ್ಗೆ ಅನುಸರಿಸಬೇಕಾದ ವಿಧಿ ವಿಧಾನಗಳೇನು ; (ವಿವರ ಒದಗಿಸುವುದು)

(ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರಿದ ಈಗಾಗಲೇ ಒಳಚರಂಡಿ ವ್ಯವಸ್ಥೆ ಹೊಂದಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಒಳಚರಂಡಿ ವ್ಯವಸ್ಥೆಯನ್ನು

ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ; ಇವುಗಳನ್ನು ದುರಸ್ತಿ ಮಾಡಲು ಯಾರಿಗೆ ಅರ್ಜಿ ಸಲ್ಲಿಸಬೇಕು ;

(ಇ) ಮೇಲ್ಕಂಡ ವಿಚಾರಗಳ ಬಗ್ಗೆ ಸಾರ್ವಜನಿಕರ ಮಾಹಿತಿಗಾಗಿ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸುತ್ತೋಲೆ ಆದೇಶಗಳನ್ನು ಹೊರಡಿಸಲಾಗಿದೆಯೇ ? (ಹೊರಡಿಸಿದ್ದರೆ ಅವುಗಳ ಪ್ರತಿಯನ್ನು ಒದಗಿಸುವುದು)

**ಬಿಬಿಎಂಪಿಯ ವಾರ್ಡ್ ನಂ;೧೯೯ರ ರಸ್ತೆಗೆ ಬೇರೆ ಹೆಸರಿಡುವುದು.**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೫೯೧ (೧೮೮೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ವಾರ್ಡ್ ನಂ;೧೯೯ಕ್ಕೆ ಹಲವಾರು ವರ್ಷಗಳಿಂದ ಆ ಭಾಗದ ನೇಕಾರರು ಶ್ರೀ ದೇವರದಾಸಿಮಯ್ಯನವರ ಹೆಸರು ಇಡಲು ಬೇಡಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಲವಾರು ವರ್ಷಗಳಿಂದ ಆ ಭಾಗದಲ್ಲಿ ವಾಸ ಮಾಡುತ್ತಿರುವ ನೇಕಾರರ ಬೇಡಿಕೆ ತಿರಸ್ಕರಿಸಲು ಕಾರಣವೇನು ;

(ಇ) ಆದ್ಯವಚನಕಾರರಾದ ಶ್ರೀ ದೇವರ ದಾಸಿಮಯ್ಯನವರ ಜಯಂತಿಯನ್ನು ಸರ್ಕಾರಿ ಜಯಂತಿ ಮಾಡುವ ದಿನ ಈ ರಸ್ತೆಗೆ ಮರುನಾಮಕರಣ ಮಾಡಲು ಸರ್ಕಾರ ಆದೇಶ ಮಾಡಲಾಗುವುದೇ ;

(ಈ) ಆ ಭಾಗದ ಬೇಡಿಕೆಗೆ ಕೂಡಲೇ ಸ್ಪಂದಿಸಿ ಮರುನಾಮಕರಣ ಮಾಡಿ ನೇಕಾರರ ಕನಸು ನನಸು ಮಾಡಲಾಗುವುದೇ ?

## ವಿಧಾನಸೌಧದ ಆವರಣದಲ್ಲಿರುವ ಪ್ರತಿಮೆಗಳು .

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-

೧೫೯೨ (೧೮೮೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಧಾನಸೌಧದ ಆವರಣದಲ್ಲಿ ಜೀವಂತ ಇರುವಾಗ ಸಾಧನೆ ಮಾಡಿದ್ದ, ಮಹಾನ್ ವ್ಯಕ್ತಿಗಳ ಪ್ರತಿಮೆಗಳು ಯಾವುವು ;

(ಆ) ಸಾಧನೆ ಮಾಡಿದ ವ್ಯಕ್ತಿಗಳ ಪ್ರತಿಮೆಗಳನ್ನು ಯಾವ ಯಾವ ಇಸವಿಯಲ್ಲಿ ಸ್ಥಾಪನೆ ಮಾಡಲಾಗಿದೆ ;

(ಇ) ಮುಂದಿನ ದಿನಗಳಲ್ಲಿ ಪ್ರಥಮ ಆದ್ಯವಚನಕಾರರಾದ ಶ್ರೀ ದೇವರದಾಸಿಮಯ್ಯನವರ ಪುತ್ತಳಿ ಸ್ಥಾಪಿಸಲು ಸರ್ಕಾರ ನಿರ್ಧಾರ ಮಾಡಲಾಗಿದೆಯೇ ?

(ಈ) ಸರ್ಕಾರಿ ಜಯಂತಿ ಘೋಷಣೆ ಮಾಡಿರುವ ಈ ವರ್ಷದಲ್ಲಿ ಶ್ರೀ ದೇವರದಾಸಿಮಯ್ಯನವರ ಪ್ರತಿಮೆ ಅನಾವರಣ ಮಾಡಲಾಗುವುದೇ ;

(ಉ) ಇಲ್ಲದಿದ್ದಲ್ಲಿ ಯಾವ ವರ್ಷದಲ್ಲಿ ಮಾಡಲಾಗುವುದು ?

## ಬೆಂಗಳೂರು ನಗರದಲ್ಲಿ ಅಂಡರ್‌ಪಾಸ್ ಹಾಗೂ ಸ್ಕೈವಾಕ್‌ಗಳು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-

೧೫೫೩ (೧೬೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಇತ್ತೀಚೆಗೆ ವಾಹನ ಹೆಚ್ಚಾಗಿ ಇರುವ ಹಾಗೂ ಪಾದಚಾರಿಗಳಿಗೆ ಸಮಸ್ಯೆ ಇರುವ ಕಡೆ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಹಲವಾರು ವರ್ಷಗಳಿಂದ ಅಂಡರ್‌ಪಾಸ್ ಹಾಗೂ ಸ್ಕೈವಾಕ್ ಮಾಡಲು ತೀರ್ಮಾನಿಸಿದ್ದರೂ, ಕಾಮಗಾರಿ ಮಾಡದೇ ಸಾರ್ವಜನಿಕರಿಗೆ ತೊಂದರೆ ಕೊಡುವ ಉದ್ದೇಶಗಳೇನು ;

(ಇ) ಈ ವರ್ಷದಲ್ಲಿ ಹೊಸದಾಗಿ ಅಂಡರ್‌ಪಾಸ್ ಹಾಗೂ ಸ್ಕೈವಾಕ್‌ನ್ನು ಎಲ್ಲೆಲ್ಲಿ ನಿರ್ಮಿಸಲು ತೀರ್ಮಾನಿಸಲಾಗಿದೆ ; (ವಿವರ ನೀಡುವುದು)

(ಈ) ಈ ವರ್ಷದಲ್ಲಿ ಉಳಿದಿರುವ ಎಲ್ಲಾ ಕಾಮಗಾರಿ ಮುಗಿಸಲಾಗುವುದೆ ;

(ಉ) ಮಳೆಗಾಲದಲ್ಲಿ ಅಂಡರ್‌ಪಾಸ್‌ಗಳಲ್ಲಿ ಮಳೆನೀರು ನಿಲ್ಲುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಯಾವಾಗ ಸರಿಮಾಡಲಾಗುವುದು ?

## ಹೈಟೆಕ್ ವೀವ್ವಿಂಗ್ ಪಾರ್ಕ್ ಮಾಡಲು ಜಮೀನು ಮಂಜೂರು.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೫೯೪ (೧೮೯೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆಐಎಡಿಬಿಯಿಂದ ಆನೇಕಲ್ ಸಿಲ್ಕ್ ಹೈಟೆಕ್ ವೀವ್ವಿಂಗ್ ಪಾರ್ಕ್ ಸ್ಥಾಪನೆಗೆ ೨೦೦೪-೦೫ರಲ್ಲಿ ಜಮೀನು ಮಂಜೂರು ಮಾಡಲು ಜವಳಿ ಇಲಾಖೆಯಿಂದ ಎಷ್ಟು ಹಣ ಪಾವತಿಸಲಾಗಿದೆ ;

(ಆ) ೭೫ ಎಕರೆ ಮಂಜೂರು ಮಾಡಲು ಕಳೆದ ೧೦ ವರ್ಷದಲ್ಲಿ ಹಣ ಪಡೆದು ಇದುವರೆಗೂ ಮಂಜೂರು ಮಾಡದಿರಲು ಕಾರಣವೇನು ;

(ಇ) ಈ ಜವಳಿ ಪಾರ್ಕ್ ಬಗ್ಗೆ ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ೭೫ ಎಕರೆ ಜಮೀನನ್ನು ಯಾವಾಗ ಕೈಮಗ್ಗ ಮತ್ತು ಜವಳಿ ಇಲಾಖೆಯ ಸ್ವಾಧೀನಕ್ಕೆ ನೀಡಲು ಮಂಜೂರಾತಿ ಕೊಡಲಾಗುವುದು ?

## ನಿವೃತ್ತ ಸಿಬ್ಬಂದಿಯವರ ಸೇವೆಯನ್ನು ಪಡೆಯುತ್ತಿರುವ ಬಗ್ಗೆ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೫೯೫ (೧೮೯೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ

ಕಾರ್ಯಾಲಯ/ ಗೃಹ ಕಛೇರಿಯಲ್ಲಿ ಮತ್ತು ಆಪ್ತ ಸಹಾಯಕರ ಹುದ್ದೆಯಲ್ಲಿ ಐಹುತೇಕ ನಿವೃತ್ತ ಸಿಬ್ಬಂದಿಯವರ ಸೇವೆಯನ್ನು ಪಡೆಯುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅಂತಹ ಸಿಬ್ಬಂದಿಯವರ ಸಂಪೂರ್ಣ ವಿವರಗಳನ್ನು ಒದಗಿಸುವುದು ;

(ಆ) ಸದರಿ ನಿವೃತ್ತ ಸಿಬ್ಬಂದಿಯವರಿಗೆ ಸರ್ಕಾರದಿಂದ ಮಾಸಿಕವಾಗಿ ನೀಡುತ್ತಿರುವ ಪಿಂಚಣಿಯ ವಿವರಗಳನ್ನು ಸಿಬ್ಬಂದಿವಾರು ಒದಗಿಸುವುದು ;

(ಇ) ಸದರಿ ನಿವೃತ್ತ ಸಿಬ್ಬಂದಿಯವರು ನಿವೃತ್ತಿ ನಂತರ ಪ್ರಸ್ತುತ ನಿರ್ವಹಿಸುತ್ತಿರುವ ಕಾರ್ಯಸ್ವರೂಪ ಹಾಗೂ ಬಳಸಿಕೊಳ್ಳುತ್ತಿರುವ ಸೇವೆಗೆ ಸರ್ಕಾರದಿಂದ ಮಾಸಿಕವಾಗಿ ನಿಗದಿಪಡಿಸಿರುವ ವೇತನ ಮತ್ತು ಇತರೆ ಭತ್ಯೆಗಳ ವಿವರಗಳನ್ನು ಸಿಬ್ಬಂದಿವಾರು ಒದಗಿಸುವುದು ;

(ಈ) ಸದರಿ ನಿವೃತ್ತ ಸಿಬ್ಬಂದಿಯವರಿಗೆ ಸರ್ಕಾರಿ/ಇಲಾಖೆಯಿಂದ ವಾಹನಗಳನ್ನು ಒದಗಿಸಲಾಗಿದೆಯೇ ; ಇದಕ್ಕೆ ಇವರು ಅರ್ಹರಿದ್ದಾರೆಯೇ ; ಹಾಗಿದ್ದಲ್ಲಿ ವಾಹನಗಳ, ಚಾಲಕರ ಮತ್ತು ಅದಕ್ಕೆ ಮಾಹೆಯಾನ ತಗಲುತ್ತಿರುವ ವೆಚ್ಚದ ಸಂಪೂರ್ಣ ಮಾಹಿತಿಗಳನ್ನು ಒದಗಿಸುವುದು ?

## ಹೊರ ರಾಜ್ಯದ ಹಣಕಾಸು ಕಂಪನಿಗಳಿಂದ ರಾಜ್ಯದ ಜನತೆಗೆ ವಂಚನೆ.

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು)** :-

೧೫೯೬ (೧೮೮೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಫೈನಾನ್ಸ್, ಚಿಟ್‌ಫಂಡ್ ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ರಾಜ್ಯದ ಜನತೆ ವಂಚನೆಗೊಳಗಾದ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇದುವರೆವಿಗೂ ಎಷ್ಟು ಪ್ರಕರಣಗಳಲ್ಲಿ ಸಾರ್ವಜನಿಕರ ಹಣ ವಾಪಸ್ಸು ಕೊಡಿಸಲಾಗಿದೆ ; ಎಷ್ಟು ಜನರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ ;

(ಇ) ಆಂಧ್ರಪ್ರದೇಶದ ಓಂಗೋಲ್ ಮೂಲದ ಮೈತ್ರಿ ಪ್ಲಾಂಟೇಷನ್ ಮತ್ತು ಹಾರ್ಟಿಕಲ್ಚರ್ ಪ್ರೈವೇಟ್(ಲಿಮಿಟೆಡ್) ಎಂಬ ಕಂಪನಿ ರಾಜ್ಯದ ಜನತೆಗೆ ದುಡ್ಡಿನ ಆಮಿಷ ಓಡ್ಡಿ ಕೋಟ್ಯಾಂತರ ರೂ.ಗಳನ್ನು ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಇದುವರೆವಿಗೂ ಸದರಿ ಕಂಪನಿಯ ವಿರುದ್ಧ ರಾಜ್ಯದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ; ಇದಕ್ಕೆ ಸಂಬಂಧಪಟ್ಟ ಎಷ್ಟು ಜನರನ್ನು ಬಂಧಿಸಲಾಗಿದೆ ; ಎಷ್ಟು ಪ್ರಮಾಣದ ಹಣವನ್ನು ಈ ಕಂಪನಿ ವಂಚನೆ ಮಾಡಿರುವುದಾಗಿ ಅಂದಾಜಿಸಲಾಗಿದೆ ;

(ದೂರು ನೀಡಿದವರ ವಿವರ ಮತ್ತು ದೂರು ಪಡೆದ ಠಾಣೆಯ ವಿವರ ಮತ್ತು FIR ಪ್ರತಿ ಒದಗಿಸುವುದು).

(ಉ) ಸದರಿ ಕಂಪನಿ ನಮ್ಮ ರಾಜ್ಯದಲ್ಲಿ ತನ್ನ ವಹಿವಾಟನ್ನು ನಡೆಸಲು ರಾಜ್ಯ ಸರ್ಕಾರದ ವತಿಯಿಂದ ಯಾವುದಾದರೂ ಪರವಾನಗಿಯನ್ನು ಪಡೆದಿತ್ತೆ ;

(ಊ) ಹಾಗಿದ್ದಲ್ಲಿ, ಯಾವ ವರ್ಷದಲ್ಲಿ ಯಾವ ರೀತಿಯ ಮಾನದಂಡಗಳ ಮೇಲೆ ಪರವಾನಗಿಯನ್ನು ನೀಡಲಾಗಿತ್ತು ;

(ಋ) ಸದರಿ ಕಂಪನಿಯಿಂದ ರಾಜ್ಯದ ಜನತೆಗೆ ಕೋಟ್ಯಾಂತರ ರೂ.ಗಳ ವಂಚನೆಯಾಗಿರುವುದರಿಂದ ತನಿಖೆಯನ್ನು ಸಿ.ಓ.ಡಿ. ಯಿಂದ ಮುಂದುವರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ವಿವರ ನೀಡುವುದು)

## ಕೆ.ಐ.ಎ.ಡಿ.ಬಿ., ಯಿಂದ ಭೂಸ್ವಾಧೀನ ಪಡಿಸಿಕೊಂಡ ಭೂಮಿಯ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು)** :–

೧೫೫೭ (೧೮೬೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–:–

(ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಕೆ.ಐ.ಎ.ಡಿ.ಬಿ., ವತಿಯಿಂದ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಶಪಡಿಸಿಕೊಂಡಿರುವ ಭೂಮಿಗೆ ಯಾವ ಮಾನದಂಡ ಅನುಸರಿಸಿ, ಪ್ರತಿ ಎಕರೆಗೆ ಎಷ್ಟು ಬೆಲೆ ನಿಗದಿಪಡಿಸಲಾಗಿದೆ ; ಹೊಸದಾಗಿ ಭೂಸ್ವಾಧೀನಕ್ಕೆ ಯೋಜನೆ ರೂಪಿಸಿರುವ ಭೂಮಿಗೆ ಯಾವ ಮಾನದಂಡದ ಮೇಲೆ ಬೆಲೆ ನಿಗದಿಪಡಿಸಲಾಗಿದೆ ;

(ಇ) ಭೂಸ್ವಾಧೀನ ಪಡಿಸಿಕೊಂಡಿರುವ ಭೂಮಿಯನ್ನು ಯಾವ ಕೈಗಾರಿಕೆಗಳಿಗೆ ಮಂಜೂರಾತಿ ನೀಡಲಾಗಿದೆ ; ಎಷ್ಟು ಎಕರೆ ಪ್ರದೇಶ ನೀಡಲಾಗಿದೆ ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಸರ್ಕಾರಿ ನೌಕರರ ವೇತನ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೬೮ (೧೮೮೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ನೌಕರರುಗಳ ಸಂಖ್ಯೆ ಎಷ್ಟು ; ಪ್ರತಿ ತಿಂಗಳೂ ಅವರಿಗೆ ನೀಡುತ್ತಿರುವ ಸಂಬಳ ಹಾಗೂ ಇತರೆ ಭತ್ಯೆ ಎಷ್ಟು ;

(ಆ) ರಾಜ್ಯದಲ್ಲಿ ಯಾವ ಯಾವ ದರ್ಜೆಯ ಅಧಿಕಾರಿಗಳಿಗೆ ಸರ್ಕಾರಿ ವಾಹನ ಉಪಯೋಗಿಸುವ ಸೌಲಭ್ಯಗಳನ್ನು ಒದಗಿಸಲಾಗಿದೆ ; ಪ್ರತಿ ತಿಂಗಳು ಸದರಿ ವಾಹನಗಳಿಗೆ ತಗಲುವ ವೆಚ್ಚವೆಷ್ಟು ; ವಾಹನ ನೀಡುತ್ತಿರುವ ಪ್ರತಿ ಅಧಿಕಾರಿಯ ಹೆಸರು, ಇಲಾಖೆ, ದರ್ಜೆ, ಇತ್ಯಾದಿ ಪೂರ್ಣ ಮಾಹಿತಿ ಒದಗಿಸುವುದು ;

(ಇ) ಸದರಿ ಮೊತ್ತವನ್ನು ಯಾವ ಖಾತೆಯಿಂದ ಜಮಾ ಮಾಡಲಾಗುವುದು ? (ವಿವರ ನೀಡುವುದು)

## ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೯೯ (೧೮೮೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ನಡೆದ ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಜನರ ವಿರುದ್ಧ ಕಾನೂನು ಕ್ರಮ ಜರುಗಿಸಿದೆ ;

(ಇ) ಹೊರ ರಾಜ್ಯಗಳಂತೆ ರಾಜ್ಯದಲ್ಲಿಯೂ ಅತ್ಯಾಚಾರಕ್ಕೊಳಗಾದ ಯುವತಿಗೆ ಬೆಂಬಲ ನೀಡುವುದರ ಜೊತೆಗೆ ಆರ್ಥಿಕ ನೆರವು ನೀಡಲು ಸರ್ಕಾರ ಯೋಜನೆ ರೂಪಿಸಿದೆಯೇ ;

(ಈ) ಹಾಗಿದ್ದಲ್ಲಿ, ಅಂತಹ ಯೋಜನೆಗಳಾವುವು ; ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಎಷ್ಟು ಪ್ರಮಾಣದಲ್ಲಿ ಆರ್ಥಿಕ ನೆರವು ನೀಡಲಾಗುವುದು ? (ವಿವರ ನೀಡುವುದು)

## ಭ್ರಷ್ಟಾಚಾರ ಅಧಿಕಾರಿ/ನೌಕರರು ಸೇವೆಯಲ್ಲಿ ಮುಂದುವರೆಯುತ್ತಿರುವುದು.

**ಶ್ರೀಮತಿ ವಿಮಲಾಗೌಡ(ವಿಧಾನಸಭೆಯಿಂದ ಚುನಾಯಿತರಾದವರು) :-**

೧೬೦೦ (೧೮೮೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಭ್ರಷ್ಟಾಚಾರ ಸಂಬಂಧ ಲೋಕಾಯುಕ್ತರ ಬಲೆಗೆ ಬಿದ್ದಿದ್ದ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಇಲಾಖಾ ತನಿಖೆ ಹಾಗೂ ಲೋಕಾಯುಕ್ತರ ನಿರಾಕ್ಷೇಪಣಾ ಪತ್ರವಿಲ್ಲದೆ ಸೇವೆಗೆ ಹಿಂತಿರುಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅಂತಹ ಅಧಿಕಾರಿ/ನೌಕರರು ಯಾರು ; ಯಾರು, ಯಾವ ಪ್ರಕರಣಗಳಲ್ಲಿ ಇವರು ಭಾಗಿಯಾಗಿ ಶಿಕ್ಷೆಗೆ ಒಳಗಾಗಿರುತ್ತಾರೆ ? (ಸಂಪೂರ್ಣ ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆ ಕೈಗಾರಿಕಾ ಪ್ರದೇಶದ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೦೧ (೧೮೬೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕೈಗಾರಿಕಾ ಸ್ಥಾಪನೆಗಾಗಿ ವಶಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಎಷ್ಟು ;

(ಆ) ಕಳೆದ ३ ವರ್ಷಗಳಲ್ಲಿ ಈ ಎರಡು ಜಿಲ್ಲೆಗಳ ಕೈಗಾರಿಕಾ ಸ್ಥಾಪನೆಗಾಗಿ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಈ ಕೈಗಾರಿಕೆ ಸ್ಥಾಪನೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು ?

## ಕಲಬುರಗಿ ಮತ್ತು ಯಾದಗಿರಿ ನಗರ ಅಭಿವೃದ್ಧಿ ಕಾರ್ಯಗಳು.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೦೨ (೧೯೨೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ನಗರ ಅಭಿವೃದ್ಧಿ ಕಾರ್ಯಗಳ ಸಂಬಂಧ ಕಳೆದ ಎರಡು ವರ್ಷಗಳಲ್ಲಿ ನೀಡಿರುವ ಅನುದಾನ ಹಾಗೂ ವಿಶೇಷ ಅನುದಾನದ ಮೊತ್ತವೆಷ್ಟು ;

(ಆ) ಸದರಿ ಅನುಧಾನದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ ಅವುಗಳ ಅಂದಾಜು ಮೊತ್ತವೆಷ್ಟು ; (ವಿವರ ನೀಡುವುದು)

(ಇ) ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿವೆ, ಇದುವರೆಗೂ ಈ ಸಂಬಂಧ ಬಿಡುಗಡೆಯಾಗಿರುವ ಮೊತ್ತವೆಷ್ಟು ;

(ಈ) ಯಾವ ಕಾಲಮಿತಿಯಲ್ಲಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ?

## ರಾಜ್ಯದಲ್ಲಿನ ಮುಜರಾಯಿ ಇಲಾಖೆಯ ದೇವಸ್ಥಾನಗಳು

**ಶ್ರೀ ಕೆ. ಗೋವಿಂದರಾ[illegible] (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೦೩ (೧೮೬೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳ ಸಂಖ್ಯೆ ಎಷ್ಟು : ಅವುಗಳಿಗೆ ಸೇರಿದ ಆಸ್ತಿ ಪ್ರಮಾಣ ಎಷ್ಟು ; ಭೂಮಿ, ಒಡವೆ ಮತ್ತು ಇನ್ನಿತರ ವಿವರಗಳನ್ನೊಳಗೊಂಡ ದೇವಾಲಯವಾರು ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಈ ದೇವಾಲಯಗಳ ಅರ್ಚಕರಿಗೆ ನೀಡುತ್ತಿರುವ ಸಂಭಾವನೆ/ವೇತನದ ವಿವರಗಳನ್ನು ನೀಡುವುದು ;

(ಇ) ಮುಜರಾಯಿ ದೇವಾಲಯಗಳಿಗೆ ಸೇರಿದ ಎಷ್ಟು ಪ್ರಮಾಣದ ಭೂಮಿಯನ್ನು ಅತಿಕ್ರಮಿಸಲಾಗಿದೆ ; ಈ ದೇವಾಲಯಗಳಲ್ಲಿ ಇದುವರೆವಿಗೆ ಆಗಿರುವ ಹಣದ ಅವ್ಯವಹಾರ, ಕಳುವಾದ ಆಭರಣಗಳ ಕುರಿತಾಗಿ ಪ್ರತ್ಯೇಕವಾದ ಮಾಹಿತಿ ನೀಡುವುದು ;

(ಈ) ದೇವಾಲಯಗಳ ಆಸ್ತಿ, ಆಭರಣಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ? (ಈ ಕುರಿತಾಗಿ ಇದುವರೆಗಿನ ಪ್ರಗತಿ ಬಗ್ಗೆ ವಿವರ ನೀಡುವುದು)

## ಬೆಂಗಳೂರು ನಗರದಲ್ಲಿ ಟೆಂಡರ್ ಶ್ಯೂರ್ ಕಾಮಗಾರಿಗಳ ಲೋಪ

**ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೦೪(೧೮೭೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯ ಯಾವ ಯಾವ ಪ್ರದೇಶ, ರಸ್ತೆಗಳಲ್ಲಿ ಟೆಂಡರ್ ಶ್ಯೂರ್ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ; ರಸ್ತೆವಾರು, ಕೈಗೊಂಡ ಕಾಮಗಾರಿ, ಅಂದಾಜು ಮೊತ್ತ, ಉದ್ದೇಶ ಕುರಿತಂತೆ ಪ್ರತ್ಯೇಕವಾದ ಮಾಹಿತಿಯನ್ನು ಒದಗಿಸುವುದು ;

(ಆ) ಟೆಂಡರ್ ಶ್ಯೂರ್ ಕಾಮಗಾರಿಗಳನ್ನು ಕೈಗೊಳ್ಳುವ ರಸ್ತೆಗಳ ಅಗಲ ಎಷ್ಟು ; ಇವುಗಳಲ್ಲಿ ವಾಹನ ಸಂಚಾರಕ್ಕೆ ಮತ್ತು ಪಾದಚಾರಿಗಳ ಓಡಾಟಕ್ಕೆ ಪ್ರತ್ಯೇಕಿಸಲಾದ ವಿಸ್ತೀರ್ಣವೆಷ್ಟು ; ರಸ್ತೆವಾರು ಮಾಹಿತಿ ಒದಗಿಸುವುದು ;

(ಇ) ಈ ರಸ್ತೆಗಳಲ್ಲಿನ ವಾಹನ ಸಂಚಾರ ದಟ್ಟಣೆ ಮತ್ತು ಪಾದಚಾರಿಗಳ ಸಂಖ್ಯೆಯ ಅಂದಾಜು ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, ಯಾವ ಆಧಾರ ಮತ್ತು ಮಾಹಿತಿಯಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ; (ವಿವರ ಒದಗಿಸುವುದು)

(ಈ) ಈ ಟೆಂಡರ್ ಶ್ಯೂರ್ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಸಂಸ್ಥೆಗಳು ಯಾವುವು ; ಕಾಮಗಾರಿ ನಿರ್ವಹಣೆಗಾಗಿ ಅನುಸರಿಸಲಾಗುತ್ತಿರುವ ಮಾನದಂಡ ಕುರಿತಾಗಿ ವಿವರ ಒದಗಿಸುವುದು ;

(ಉ) ಈ ಕಾಮಗಾರಿಗಳು ಸರ್ಕಾರಕ್ಕೆ ಅಧಿಕ ವೆಚ್ಚ, ತಾಂತ್ರಿಕವಾಗಿ ಅಪೂರ್ಣ ವಾಹನಗಳ ಓಡಾಟಕ್ಕೆ ಕಿರಿದಾಗುತ್ತಿರುವ ರಸ್ತೆ, ಇದರಿಂದಾಗಿ ಉದ್ಭವಿಸುತ್ತಿರುವ ಸಮಸ್ಯೆಗಳ ಕುರಿತಾಗಿ ಸರ್ಕಾರವು ಕೈಗೊಂಡ ಕ್ರಮಗಳು ಏನು ? (ವಿವರ ನೀಡುವುದು)

## ರಾಜ್ಯದಲ್ಲಿರುವ ಜಾನುವಾರು ಸಂವರ್ಧನಾ ಕೇಂದ್ರಗಳಲ್ಲಿನ ಅವ್ಯವಸ್ಥೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೦೫ (೧೮೭೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಾನುವಾರು ಸಂವರ್ಧನಾ ಕೇಂದ್ರಗಳೆಷ್ಟು ; ಜಿಲ್ಲಾವಾರು, ತಳಿಗಳವಾರು ವಿವರ ನೀಡುವುದು ;

(ಆ) ಈ ಜಾನುವಾರು ಸಂವರ್ಧನಾ ಕೇಂದ್ರಗಳ ಕಾರ್ಯಗಳೇನು ; (ವಿವರ ನೀಡುವುದು)

(ಇ) ದೇಶೀಯ ಜಾನುವಾರುಗಳ ಸಾಕಾಣಿಕೆಗೆ ಸರ್ಕಾರ ಕೈಗೊಂಡಿರುವ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು ಯಾವುವು ; (ವಿವರ ಒದಗಿಸುವುದು)

(ಈ) ಈ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು ; ಖಾಲಿ ಇರುವ ಸಿಬ್ಬಂದಿಗಳನ್ನು ನೇಮಕ ಮಾಡಲು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಬೆಂಗಳೂರು ನಗರದ ಭದ್ರತೆಯ ದೃಷ್ಟಿಯಿಂದ ಬಹುಮಹಡಿ ಕಟ್ಟಡಗಳ ನಿರ್ಮಾಣ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೬೦೬ (೧೮೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಭದ್ರತೆಯ ಹಿತದೃಷ್ಟಿಯಿಂದ ಎತ್ತರದ/ ಬಹುಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಯಾವುದಾದರೂ ನಿಬಂಧನೆಗಳು ಇವೆಯೇ ; ಹಾಗಿದ್ದಲ್ಲಿ, ಯಾವ ಯಾವ ಪ್ರದೇಶ ವ್ಯಾಪ್ತಿಯನ್ನು ಈ ನಿಟ್ಟಿನಲ್ಲಿ ಗುರುತಿಸಲಾಗಿದೆ ; ಪ್ರತ್ಯೇಕವಾದ ಮಾಹಿತಿಯನ್ನು ಒದಗಿಸುವುದು ;

(ಆ) ವಿಧಾನಸೌಧ, ರಾಜಭವನ, ಶಾಸಕರ ಭವನದ ಸುತ್ತಮುತ್ತಲಿನ ಎಷ್ಟು ಪರಿಧಿಯಲ್ಲಿ (ವ್ಯಾಪ್ತಿ) ಇಂತಹ ನಿರ್ಬಂಧ ವಿಧಿಸಲಾಗಿದೆ ; ನಿರ್ಮಾಣಕ್ಕೆ ಅನುಮತಿಸುವ ನಿಟ್ಟಿನಲ್ಲಿ ಅನುಸರಿಸಲಾಗುತ್ತಿರುವ ಮಾನದಂಡ ಏನು ; ವಿವರ ಒದಗಿಸುವುದು ;

(ಇ) ರಾಜಭವನ ರಸ್ತೆಯಲ್ಲಿ ಆಕಾಶವಾಣಿ ನಿಲಯದ ಸಮೀಪ ನಿರ್ಮಾಣವಾಗಿರುವ ಬೃಹತ್ ಕಟ್ಟಡದ ಒಡೆತನವು ಯಾರಿಗೆ ಸೇರಿದೆ ; ಇಲ್ಲಿ ಯಾವ ರೀತಿಯ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿವೆ ; (ಮಾಹಿತಿ ಒದಗಿಸುವುದು)

(ಈ) ಈ ಕಟ್ಟಡದ ನಿರ್ಮಾಣಕ್ಕೆ (Prestige-Khoday's) ಅನುಮತಿಸುವಲ್ಲಿ ಯಾವ ನಿಯಮಾವಳಿಯನ್ನು

ಅನುಸರಿಸಲಾಗಿದೆ ; ಈ ಕಟ್ಟಡ ನಿರ್ಮಾಣದಿಂದಾಗಿ ಭದ್ರತೆ ದೃಷ್ಟಿಯಿಂದ ಆಗಿರುವ ಲೋಪವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಇದುವರೆವಿಗೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ?

## ಮಹಿಳಾ ಪೊಲೀಸ್ ಠಾಣೆಗಳು.

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೬೦೭ (೧೮೭೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹೆಚ್ಚುವರಿಯಾಗಿ ಎಷ್ಟು ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಮತ್ತು ಎಷ್ಟು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಬೇಡಿಕೆಯಿದೆ ;

(ಆ) ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯ ಇತ್ಯಾದಿ ಮಹಿಳಾ ಪ್ರಕರಣಗಳನ್ನು ತುರ್ತಾಗಿ ನಿರ್ವಹಿಸಲು ಅಗತ್ಯವಿರುವ ಮಹಿಳಾ ಪೊಲೀಸ್ ಠಾಣೆಗಳನ್ನು ತೆರೆಯಲು ಮತ್ತು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಇ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು ?

## ಜ್ಞಾನಭಾರತಿ ಸರ್ವೆ ೭೬-೭೭ರಲ್ಲಿ ಸ್ವಾಧೀನ ಮಾಡಿರುವುದು.

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೬೦೮ (೧೮೭೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜ್ಞಾನಭಾರತಿ ಸರ್ವೆ ನಂಬರ್ ೭೬-೭೭ರ ಬಿ.ಡಿ.ಎ. ಸ್ವಾಧೀನ ಮಾಡಿದ ಭೂಮಿ ಎಷ್ಟು ;

(ಆ) ಈ ಸರ್ವೆ ನಂಬರಿನ ಭೂಮಿ ಮುಫ್ತಲ್ ಕಾವಲ್ ಆಗಿದ್ದು, ಇದನ್ನು ಯಾರ ಹೆಸರಿಗೆ ಮತ್ತು ಯಾವ ದಿನಾಂಕಗಳಂದು, ಯಾವ ಕಾನೂನಿನ ಅಡಿಯಲ್ಲಿ ಮಾಡಲಾಗಿದೆ ;

(ಇ) ಗ್ರಾಂಟ್ ರೂಲ್ಸ್ ಮೀರಿ ಯಾವ ರೀತಿ ಮಂಜೂರು ಮಾಡಲಾಯಿತು ;

(ಈ) ಅದೇ ಭೂಮಿಯನ್ನು ಡಿ-ನೋಟಿಫೈ ಮಾಡಿದ್ದು, ಸರಿಯೇ ; ಯಾವ ಕಾನೂನಿನ್ವಯ ಡಿ-ನೋಟಿಫೈ ಮಾಡಲಾಯಿತು ?

## ಕಾಲುಬಾಯಿ ರೋಗ ನಿಯಂತ್ರಣ.

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೬೦೯ (೧೮೭೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನಲ್ಲಿ ಕಾಲುಬಾಯಿ ರೋಗದಿಂದ ಮೃತಪಟ್ಟ ಜಾನುವಾರುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಕಾಲುಬಾಯಿ ರೋಗ ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಜ್ಯದಲ್ಲಿರುವ ಪಶು-ಸಂಗೋಪನ ಆಸ್ಪತ್ರೆಗಳ ಸಂಖ್ಯೆ ಎಷ್ಟು ;

(ಈ) ಈ ಆಸ್ಪತ್ರೆಗಳಲ್ಲಿ ಖಾಲಿ ಇರುವ ಪಶು ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ;

(ಉ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತು ನಾಮಫಲಕಗಳು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೬೧೦ (೧೮೭೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಅಧಿಕೃತ ಜಾಹಿರಾತು ನಾಮಫಲಕಗಳ ಸಂಖ್ಯೆ ಎಷ್ಟು ; ಹಾಗೂ ಅನಧಿಕೃತ ಜಾಹಿರಾತು ನಾಮಫಲಕಗಳ ಸಂಖ್ಯೆ ಎಷ್ಟು ;

(ಆ) ೨೦೧೨-೨೦೧೩, ೨೦೧೩-೨೦೧೪ ರಿಂದ ೨೦೧೪-೨೦೧೫ನೇ ಸಾಲಿನಲ್ಲಿ ನಾಮಫಲಕಗಳಿಂದ ಸಂಗ್ರಹಿಸಿದ ಆದಾಯ ಎಷ್ಟು ; ಅನಧಿಕೃತ ನಾಮಫಲಕಗಳನ್ನು ತೆರವುಗೊಳಿಸಿದ ಪ್ರಕರಣಗಳೆಷ್ಟು ; ತೆರವುಗೊಳಿಸಿ ದಂಡ ವಿಧಿಸಿದ ಪ್ರಕರಣಗಳೆಷ್ಟು;

(ಇ) ಅನಧಿಕೃತ ನಾಮಫಲಕದಿಂದ ನಗರ ಪಾಲಿಕೆ ಬೊಕ್ಕಸಕ್ಕೆ ಉಂಟಾದ ಆದಾಯ ನಷ್ಟವೆಷ್ಟು ;

(ಈ) ಅನಧಿಕೃತ ನಾಮಫಲಕಗಳನ್ನು ಅಳವಡಿಸಿದ ಜಾಹಿರಾತು ಕಂಪನಿಗಳ ಮೇಲೆ ನಗರ ಪಾಲಿಕೆ ಕೈಗೊಂಡ ಕ್ರಮಗಳೇನು ; ಯಾವ ಜಾಹಿರಾತು ನಾಮಫಲಕ ಏಜೆನ್ಸಿ ಮೇಲೆ ಕೈಗೊಂಡಿದೆ ಸಂಪೂರ್ಣ ವಿವರ ನೀಡುವುದು ?

## ರಾಜ್ಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಪೊಲೀಸ್ ಸಿಬ್ಬಂದಿಯವರಿಗೆ ಆರೋಗ್ಯ ಭಾಗ್ಯ ಯೋಜನೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೬೧೧ (೧೮೮೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಆರೋಗ್ಯ ಭಾಗ್ಯ ಯೋಜನೆಯನ್ನು ವಿಸ್ತರಿಸಲು ಗೃಹ ಇಲಾಖೆ ಕ್ರಮ ಕೈಗೊಳ್ಳುವುದೆ; ಈ ಪ್ರಸ್ತಾವನೆ ಯಾವ ಹಂತದಲ್ಲಿದೆ ;

(ಆ) ರಾಜ್ಯದಲ್ಲಿರುವ ನಿವೃತ್ತ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು ; ಹಾಗೂ ಅವರಿಗೆ ನೀಡುವ ಸಾಮಾಜಿಕ ಭದ್ರತಾ ಯೋಜನೆಗಳಾವುವು ;

(ಇ) ನಿವೃತ್ತ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗೆ ಕ್ಯಾಂಟೀನ್ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಸ್ತಾವನೆ ಯಾವ ಹಂತದಲ್ಲಿದೆ; ವಿಳಂಬಕ್ಕೆ ಕಾರಣಗಳೇನು ;

(ಈ) ನಿವೃತ್ತ ಪೊಲೀಸ್ ಸಿಬ್ಬಂದಿಗಳು ಶೇಕಡಾ ೯೦% ಅನಾರೋಗ್ಯದಿಂದ ಬಳಲುತ್ತಿರುವ ವಿಚಾರ ಇಲಾಖೆ ಗಮನಕ್ಕೆ ಬಂದಿದೆಯೇ ?

# ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ನಿರುದ್ಯೋಗಿಯವರಿಗೆ ಉದ್ಯೋಗ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೬೧೨ (೧೮೮೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ನಿರುದ್ಯೋಗ ಯುವಕರಿಗೆ ಉದ್ಯೋಗವನ್ನು ದೊರಕಿಸುವ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ರಾಜ್ಯ ಸರಕಾರ ಕೈಗೊಳ್ಳುವ ಕ್ರಮಗಳೇನು ;

(ಆ) ೨೦ಕ್ಕೂ ಹೆಚ್ಚು ತಾಂತ್ರಿಕ ಕಾಲೇಜುಗಳು ಮತ್ತು ಇನ್ನಿತರ ವಿದ್ಯಾಸಂಸ್ಥೆ ಹೊಂದಿರುವ ಈ ಜಿಲ್ಲೆಗೆ ಉದ್ಯೋಗ ಪಡೆಯಲು ಸಹಾಯಕಾರಿಯಾಗುವ ಕಾರ್ಖಾನೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ ;

(ಇ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ MRPL, ONGC, OMPL ವಿಶೇಷ ಆರ್ಥಿಕ ವಲಯ ಸಂಸ್ಥೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಲು ಸರಕಾರ ಆದೇಶಿಸುವುದೇ ;

(ಈ) ರಾಜ್ಯದಲ್ಲಿ ನೂತನವಾಗಿ ಉದ್ಯೋಗ ಸೃಷ್ಟಿಸುವ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಸರಕಾರದ ಮುಂದೆ ಪ್ರಸ್ತಾವನೆ ಇದೆ ? (ವಿವರ ನೀಡುವುದು)

## ಕುದುರೆಮುಖ ಕಬ್ಬಿಣದ ಅದಿರು ಕಂಪನಿ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೬೧೩ (೧೮೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ ರಮಣದುರ್ಗದ ಬ್ಲಾಕ್ ನಂ.೧೩/೧ ರಲ್ಲಿ ಕಾಯ್ದಿರಿಸಿದ ಗಣಿ ಗುತ್ತಿಗೆಯನ್ನು ನೀಡದೇ ಸ್ಥಾವರವು ಸ್ಥಗಿತಗೊಂಡಿರುವ ಬಗ್ಗೆ ಕ್ರಮಕೈಗೊಳ್ಳದೇ ಇರಲು ಕಾರಣವೇನು ;

(ಆ) ಸದರಿ ಸ್ಥಾವರದಲ್ಲಿ ೨೦೦೦ ಮಂದಿ ಖಾಯಂ ಕಾರ್ಮಿಕರು, ೫೦೦೦ ರಷ್ಟು ದಿನಗೂಲಿ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಸ್ಥಿತಿಯಲ್ಲಿರುವುದರಿಂದ ಕಂಪನಿಗೆ ಗಣಿ ಗುತ್ತಿಗೆ ನೀಡುವುದು ಸರ್ಕಾರದ ಜವಾಬ್ದಾರಿಯಲ್ಲವೇ ;

(ಇ) ಎಂ.ಎಂ.ಡಿ.ಆರ್. ಆಕ್ಟ್ ೧೭(ಎ)ರ ಪ್ರಕಾರ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟ ಕಂಪನಿಗೆ ಗಣಿ ಗುತ್ತಿಗೆ ನೀಡಲು ಟೆಂಡರ್ ಕರೆಯದೇ ಗುತ್ತಿಗೆ ನೀಡಲು ಅವಕಾಶ ಇರುವುದರಿಂದ ಉದ್ಯೋಗ ಸೃಷ್ಟಿಸುವ ಕಂಪನಿಗೆ ಅವಕಾಶ ನೀಡದೇ ಇರಲು ಕಾರಣಗಳೇನು ? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಕಾಲೇಜು ಸ್ಥಾಪನೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೧೬೧೪ (೧೮೭೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ;

(ಆ) ರಾಜ್ಯದಲ್ಲಿರುವ ಒಟ್ಟು ಪಶು ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ; ಪ್ರತಿವರ್ಷ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು ;

(ಇ) ರಾಜ್ಯದಲ್ಲಿ ಪಶು ವೈದ್ಯಾಧಿಕಾರಿಗಳ ಕೊರತೆ ಇದೆಯೇ; ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ವೈದ್ಯರ ಸಂಖ್ಯೆ ಎಷ್ಟು ;

(ಈ) ಪಶು ವೈದ್ಯರ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನದಲ್ಲಿದೆಯೋ ; ಇದ್ದರೆ ಸರಿಪಡಿಸಲು ಏನು ಕ್ರಮಕೈಗೊಳ್ಳುವುದು ?

## ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೬೧೫ (೧೮೯೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಡಳಿತ ನ್ಯಾಯ ಮಂಡಳಿಗಳ ಅಧಿನಿಯಮ ೧೯೮೫ರ ಪ್ರಕರಣ ೫(೮) ರನ್ವಯ ಕೆ.ಎ.ಟಿ.ಯ ಹೆಚ್ಚುವರಿ ಪೀಠವನ್ನು ಸ್ಥಾಪಿಸುವ

ಸಂಬಂಧ ಅಧಿಸೂಚನೆ ಹೊರಡಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇರುವ ಸಂಗತಿ ನಿಜವೇ ;

(ಆ) ಕೆ.ಎ.ಟಿ.ಯ ಸದಸ್ಯರನ್ನು ನೇಮಿಸುವ ಪ್ರಸ್ತಾವನೆಯನ್ನು ಮಾತ್ರ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಅವಶ್ಯವಿದೆಯೇ;

(ಇ) ಕೆ.ಎ.ಟಿ. ಯನ್ನು ಬೆಳಗಾವಿಯಲ್ಲಿ ಸ್ಥಾಪಿಸಲು ತಾತ್ವಿಕವಾಗಿ ನಿರ್ಣಯಿಸಿದ ಸಂಗತಿ ನಿಜವೇ;

(ಈ) ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಪತ್ರ ಬರೆದು ಹುದ್ದೆಗಳ ಸೃಜನೆ, ಮಾನ್ಯ ನ್ಯಾಯಾಧೀಶರುಗಳ ಮತ್ತು ಕಛೇರಿ ಸಿಬ್ಬಂದಿ ವರ್ಗದವರ ವೇತನ ಭತ್ಯೆಗಳು ನ್ಯಾಯಾಂಗಗಳ ಸ್ಥಾಪನೆ, ವಾಹನಗಳ ಖರೀದಿ, ಹಾಗೂ ಇತರ ಆವರ್ತಕ, ಅನಾವರ್ತಕ ವೆಚ್ಚಗಳ ಬಗ್ಗೆ ಮಾಹಿತಿ ನೀಡುವಂತೆ ಸರ್ಕಾರ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಪತ್ರ ಬರೆದ ಸಂಗತಿ ನಿಜವೇ ;

(ಉ) ಸರ್ಕಾರದಿಂದ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಯಾವ ದಿನಾಂಕದಂದು ಪತ್ರ ಬರೆಯಲಾಗಿದೆ ; (ವಿವರ ನೀಡುವುದು)

(ಊ) ಕೆ.ಎ.ಟಿ. ಯಿಂದ ಉತ್ತರ ಬಂದಿದೆಯೇ ; ಉತ್ತರ ಬಂದಿಲ್ಲದಿದ್ದಲ್ಲಿ ನೆನಪೋಲೆ ಹಾಕಲು ಕ್ರಮ ಕೈಗೊಳ್ಳಲಾಗುವುದೇ ;

(ಋ) ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪಿಸಲು ಅವಶ್ಯವಿರುವ ಮಾಹಿತಿ ಕೆ.ಎ.ಟಿ. ಯಿಂದ ತರಿಸಿಕೊಂಡು ಅವಶ್ಯವಿರುವ ಹಣವನ್ನು ಈ ವರ್ಷದ ಆಯವ್ಯಯದಲ್ಲಿ ಒದಗಿಸಿ, ಕೂಡಲೇ ಕೆ.ಎ.ಟಿ. ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಎಲ್ಲಾ ಜಾತಿಯ ಕಿರಿಯ ವಕೀಲರಿಗೆ ಐದು ವರ್ಷ ಸ್ಟೈಫಂಡ್ ನೀಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೬೧೬ (೧೮೯೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಯಾವ ಯಾವ ಜಾತಿಯ ಕಿರಿಯ ವಕೀಲರಿಗೆ ಎಷ್ಟೆಷ್ಟು ವರ್ಷ ಸ್ಟೈಫಂಡ್ ಕೊಡಲಾಗುತ್ತಿದೆ ;

(ಆ) ಎಲ್ಲಾ ಜಾತಿಯ ವಕೀಲರಿಗೂ ಸ್ಟೈಫಂಡ್ ಕೊಡದಿರುವ ಸಂಗತಿ ನಿಜವೇ ;

(ಇ) ಬೇರೆ ಜಾತಿಯಲ್ಲೂ ವಕೀಲರು ಸಹ ಬಡವರಿರುವುದಿಲ್ಲವೇ ; ಈ ತಾರತಮ್ಯ ಏಕೆ ; ಇದನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಈ) ಪ್ರತಿ ವರ್ಷ ಎಷ್ಟು ಜನ ವಕೀಲರು ಬೆಂಗಳೂರಿನಲ್ಲಿ ಬಾರ್ ಕೌನ್ಸಿಲಿಂಗ್‌ಗೆ ಹೊಸದಾಗಿ ರಿಜಿಸ್ಟರ್ ಮಾಡುತ್ತಿದ್ದಾರೆ ;

(ಉ) ಹಾಲಿ ಎಷ್ಟು ಜನ ವಕೀಲರು ಬೆಂಗಳೂರು ಬಾರ್ ಕೌನ್ಸಿಲಿಂಗ್‌ನಲ್ಲಿ ರಿಜಿಸ್ಟರ್ ಮಾಡಿಸಿರುವವರು ;

(ಊ) ಹೊಸದಾಗಿ ರಿಜಿಸ್ಟರ್ ಮಾಡಿಸಿದ ಎಲ್ಲಾ ವಕೀಲರುಗಳಿಗೆ (ಎಲ್ಲಾ ಜಾತಿಯ ವಕೀಲರಿಗೆ) ಐದು ಸಾವಿರ ರೂಪಾಯಿಗಳಂತೆ ಪ್ರತಿಯೊಬ್ಬರಿಗೂ ಹಣ ಕೊಟ್ಟರೆ, ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುವುದು ;

(ಋ) ಹೊಸದಾಗಿ ರಿಜಿಸ್ಟರ್ ಆದ ಎಲ್ಲಾ ಕಿರಿಯ ವಕೀಲರಿಗೆ ಮೂರು ವರ್ಷಗಳವರೆಗೆ ಪ್ರತಿ ತಿಂಗಳು ಐದು ಸಾವಿರ ರೂಪಾಯಿಗಳಂತೆ ಸ್ಟೈಫಂಡ್ ಕೊಟ್ಟಲ್ಲಿ ಪ್ರತಿ ವರ್ಷ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುವುದು ;

(ಎ) ಹಾಗಿದ್ದಲ್ಲಿ, (ಪಿ.ಜಿ. ಡಾಕ್ಟರ್‌ರಿಗೆ ಸ್ಟೈಫಂಡ್ ಕೊಡುವ ರೀತಿ) ಎಲ್ಲಾ ಕಿರಿಯ ವಕೀಲರಿಗೂ ಸ್ಟೈಫಂಡ್ ಕೊಡಲು ಪರಿಶೀಲಿಸಲಾಗುವುದೇ ?

## ಕೂಡಲ ಸಂಗಮದ ಶ್ರೀ ಸಂಗಮೇಶ್ವರ ದೇವಸ್ಥಾನದ ಪೂಜೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೬೧೭ (೧೮೯೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದಲ್ಲಿ ಇರುವ ಶ್ರೀ ಸಂಗಮೇಶ್ವರ ದೇವಸ್ಥಾನ ಹಾಗೂ ಐಕ್ಯ ಮಂಟಪದ ಶ್ರೀ ಬಸವೇಶ್ವರ ಪೂಜೆಯನ್ನು ಯಾರು ಮಾಡುತ್ತಿರುವರು ;

(ಆ) ಕೂಡಲ ಸಂಗಮ ಪ್ರಾಧಿಕಾರದ ವತಿಯಿಂದ ಈ ದೇವಸ್ಥಾನಗಳ ಪೂಜಾ ಕಾರ್ಯಕ್ಕಾಗಿ ಅರ್ಚಕರನ್ನು ನೇಮಿಸಲಾಗಿದೆಯೇ;

(ಇ) ಈಗ ಪೂಜಾ ಕಾರ್ಯಕ್ಕೆ ಬದಲಾವಣೆ ಮಾಡಲಾಗುವುದೇ;

(ಈ) ಕೂಡಲ ಸಂಗಮ ಪ್ರಾಧಿಕಾರದ ವತಿಯಿಂದ ಅರ್ಚಕರನ್ನು ನೇಮಿಸುವ ಮೊದಲು ಈ ಪೂಜಾ ಕೈಂಕರ್ಯವನ್ನು ಯಾರು ಮಾಡುತ್ತಿದ್ದರು ?

## ಕೂಡಲ ಸಂಗಮದಲ್ಲಿ ಬರುವ ಭಕ್ತರಿಗೆ ವಾಸಿಸಲು ವಸತಿ ನಿಲಯ ಕಟ್ಟುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೬೧೮ (೧೯೩೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೂಡಲ ಸಂಗಮಕ್ಕೆ ಬರುವ ಭಕ್ತರಿಗೆ ಉಳಿದುಕೊಳ್ಳಲು ಸಾಕಷ್ಟು ವಾಸಸ್ಥಳ ಇಲ್ಲದೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಅಲ್ಲಿ ವಸತಿ ನಿಲಯುವನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ;

(ಇ) ಇದರ ನೀಲಿ ನಕ್ಷೆ ಅಂದಾಜು ವೆಚ್ಚದ ಪಟ್ಟಿ ತಯಾರಿಸಲಾಗಿದೆಯೇ ;

(ಈ) ಈ ಕೆಲಸಕ್ಕೆ ಮುಂದಿನ ವರ್ಷದ ಆಯವ್ಯಯದಲ್ಲಿ ಹಣ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಉ) ಈ ಕ್ಷೇತ್ರಕ್ಕೆ ರಾಜ್ಯ ಹಾಗೂ ಹೊರ ರಾಜ್ಯದಿಂದ ಬಡ ಮತ್ತು ಮಧ್ಯಮ ವರ್ಗದ ಜನರು ಹಾಗೂ ವಿದ್ಯಾರ್ಥಿಗಳು ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯಿಂದ ಅಭಿವೃದ್ಧಿಪಡಿಸಿದ ಎಂ.ಕೆ. ಹುಬ್ಬಳ್ಳಿ ಗಂಗಾಂಬಿಕಾ ಕ್ಷೇತ್ರ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೬೧೯ (೧೯೨೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯಿಂದ (ಬೆಳಗಾವಿ ಜಿಲ್ಲೆ) ಎಂ.ಕೆ ಹುಬ್ಬಳ್ಳಿ ಗಂಗಾಬಿಂಕಾ ಕ್ಷೇತ್ರವನ್ನು ಯಾರು ನಿರ್ವಹಣೆ ಮಾಡುತ್ತಿದ್ದಾರೆ ಹಾಗೂ ಯಾರ ಮೇಲ್ವಿಚಾರಣೆಯಲ್ಲಿ ಇದೆ.

(ಆ) ಈ ಕ್ಷೇತ್ರವನ್ನು ಕಟ್ಟಲು ಎಷ್ಟು ಹಣ ಖರ್ಚಾಗಿದೆ ;

(ಇ) ಬಾಕಿ ಉಳಿದ ಕೆಲಸಕ್ಕೆ ಇನ್ನೂ ಎಷ್ಟು ಹಣ ಬೇಕು, ಕೂಡಲೇ ಬಾಕಿ ಉಳಿದ ಕೆಲಸ ಮುಗಿಸಲಾಗುವುದೇ ;

(ಈ) ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಲಾದ ಇಂಗಳೇಶ್ವರ ಹಾಗೂ ತಂಗಡಗಿ ಕ್ಷೇತ್ರಗಳನ್ನು ಯಾರು ನಿರ್ವಹಣೆ ಮಾಡುತ್ತಿದ್ದಾರೆ ಹಾಗೂ ಯಾರ ಮೇಲ್ವಿಚಾರಣೆಯಲ್ಲಿ ಇದೆ ;

(ಉ) ಈ ಎಲ್ಲಾ ಕ್ಷೇತ್ರಗಳನ್ನು ನಿರ್ವಹಣೆಗಾಗಿ ಸ್ಥಳೀಯ ಸಲಹಾ ಸಮಿತಿಗಳನ್ನು ಮಾಡಲಾಗುವುದೇ ?

## ಅನುಕಂಪದ ಆಧಾರದ ಮೇಲೆ ಬಿ.ಬಿ.ಎಂ.ಪಿ. ನೌಕರಿ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೬೨೦ (೧೮೯೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ ಯಲ್ಲಿ ಅನುಕಂಪದ ಆಧಾರದ ಮೇಲೆ ಎಷ್ಟು ಜನರಿಗೆ ನೌಕರಿ ಸಿಗಬೇಕಿದೆ ; (ವಿವರ ನೀಡುವುದು)

(ಆ) ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಬಿ.ಬಿ.ಎಂ.ಪಿ ಯಲ್ಲಿ ಅನಗತ್ಯ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಪರಿಶಿಷ್ಟ ಜಾತಿಗೆ ಸೇರಿದ ಮೃತ ಪೌರ ಕಾರ್ಮಿಕ ಬಿಲ್ಲೆ ನಂ.೫೮೨೬/ಎ ಮತ್ತು ಬಿಲ್ಲೆ ನಂ.೬೦೨೯/ಎ, ೬೦೨೧/೧೩ ಜಯನಗರ ವಲಯ ಇವರ ಮಕ್ಕಳಿಗೆ ಕಳೆದ ೧೪ ವರ್ಷಗಳಿಂದ ಅನೇಕ ಬಾರಿ ಮನವಿ ಮಾಡಿದರೂ ಅನುಕಂಪದ ಕೆಲಸ ನೀಡದಿರಲು ಕಾರಣವೇನು ; (ವಿವರ ನೀಡುವುದು)

(ಈ) ಈ ಪ್ರಕರಣದ ಸಾಮ್ಯತೆ ಇರುವವರಿಗೆ ಈಗಾಗಲೇ ಅನುಕಂಪದ ಆಧಾರದ ನೌಕರಿ ನೀಡಿದ್ದಾಗಿಯೂ ಸಹ ಬಿಲ್ಲೆ ನಂ. ೫೮೨೬/ಎ ಮತ್ತು ೬೦೨೯/ಎ, ೬೦೨೧/ಬಿ, ಮೃತರ ಮಕ್ಕಳಿಗೆ ಅನುಕಂಪದ ನೌಕರಿ ನೀಡದಿರುವುದು ಸರಿಯಾದ ಕ್ರಮವೇ; (ವಿವರ ನೀಡುವುದು)

(ಉ) ಈ ಎಲ್ಲಾ ಕಾರಣದ ವಾಸ್ತವಿಕ ಅಂಶಗಳಿಂದ ಬಿಲ್ಲೆ ನಂ.೫೮೨೬/ಎ ಮತ್ತು ೬೦೨೯/ಎ ಮೃತರ ಮಕ್ಕಳಿಗೆ ಅನುಕಂಪದ ಆಧಾರದ ನೌಕರಿ ನೀಡಲು ತಗಲುವ ಸಮಯವೇನು ? (ವಿವರ ನೀಡುವುದು)

## ಗೃಹ ರಕ್ಷಕ ದಳದ ಸಿಬ್ಬಂದಿಗೆ ನೀಡುತ್ತಿರುವ ಸೌಲಭ್ಯಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೬೨೧ (೧೯೧೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಗೃಹ ರಕ್ಷಕ ದಳದ ಸಿಬ್ಬಂದಿ ಎಷ್ಟು ; ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ಸದರಿ ಸಿಬ್ಬಂದಿಗಳಿಗೆ ಸರ್ಕಾರ ಒಂದು ದಿನಕ್ಕೆ ನೀಡುವ ವೇತನ ಎಷ್ಟು ;

(ಇ) ಸದರಿ ಸಿಬ್ಬಂದಿಗೆ ವೇತನದ ಜೊತೆಗೆ ಆಹಾರ ಪಡಿತರ ನೀಡುವ ಯೋಜನೆ ಜಾರಿಯಲ್ಲಿದೆಯೇ ;

(ಈ) ಸಿಬ್ಬಂದಿಗೆ ದೊರೆಯಬಹುದಾದ ಇತರ ಸೌಲಭ್ಯಗಳು ಯಾವುದು ; ವಿವರವಾದ ಮಾಹಿತಿ ನೀಡುವುದು ;

(ಉ) ಗೃಹ ರಕ್ಷಕ ದಳದ ಸಿಬ್ಬಂದಿಯ ಜಿಲ್ಲಾ ವರಿಷ್ಠರು ಯಾರು ; ಅವರಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಮೆಟ್ರೋ ರೈಲು ನಿಗಮದ ಉದ್ಯೋಗಿಗಳಿಗೆ ಭವಿಷ್ಯ ನಿಧಿ ಯೋಜನೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೬೨೨ (೧೯೧೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ (BMRCL) ದಲ್ಲಿ ಹಾಲಿ ಎಷ್ಟು ಜನ ಖಾಯಂ ಉದ್ಯೋಗಿಗಳು ಕೆಲಸ ನಿರ್ವಹಿಸುತ್ತಿದ್ದಾರೆ ;

(ಆ) ಸದರಿ ಉದ್ಯೋಗಿಗಳಿಗೆ ಭವಿಷ್ಯ ನಿಧಿ ಯೋಜನೆ (EPF) ಯನ್ನು ಜಾರಿಗೊಳಿಸಲಾಗಿದೆಯೇ ಜಾರಿಗೊಳಿಸಲಾಗಿದ್ದಲ್ಲಿ, ಯಾವ ಯೋಜನೆ ಜಾರಿಯಲ್ಲಿದೆ ;

(ಇ) ಭವಿಷ್ಯ ನಿಧಿ ಯೋಜನೆಯನ್ನು (EPF) ಜಾರಿಗೊಳಿಸದಿರಲು ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು)

(ಈ) ಹಾಲಿ ಜಾರಿಯಲ್ಲಿರುವ ಯೋಜನೆಯಲ್ಲಿ ತಿಂಗಳಿಗೆ ನೌಕರರ ಕೊಡುಗೆ ಶೇಕಡಾವಾರು ಎಷ್ಟು ; ಸಂಸ್ಥೆಯ ಶೇಕಡಾವಾರು ಎಷ್ಟು ? (ವಿವರವಾದ ಮಾಹಿತಿ ನೀಡುವುದು)

## ಪೊಲೀಸ್ ಠಾಣೆಗಳಲ್ಲಿರುವ ವಾಹನಗಳ ಸ್ಥಿತಿಗತಿ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):–**

೧೬೨೩ (೧೮೯೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪೊಲೀಸ್ ಅಧಿಕಾರಿಗಳಿಗೆ ವಾಹನದ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿಜಯಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ವಾಹನ ಒದಗಿಸಿರುವ, ವಾಹನ ಇರದೇ ಇರುವ ಪೊಲೀಸ್ ಠಾಣೆ ಹಾಗೂ ಸಿಬ್ಬಂದಿಗಳ ವಿವರ ನೀಡಿ ;

(ಇ) ವಾಹನ ಒದಗಿಸುವುದಕ್ಕೆ ಹಾಗೂ ಅವುಗಳ ನಿರ್ವಹಣೆಗೆ ಇರುವಂತಹ ನಿಯಮಾವಳಿಗಳು ಹಾಗೂ ಮಾನದಂಡಗಳೇನು ?

## ಪೊಲೀಸ್ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನ ಭತ್ಯೆ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):–**

೧೬೨೪ (೧೮೯೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೊಲೀಸ್ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನ ಶ್ರೇಣಿ ಹಾಗೂ ಭತ್ಯೆಗಳು ತೃಪ್ತಿಕರವಾಗಿಲ್ಲದಿರುವುದು ಸರ್ಕಾರ ಗಮನಕ್ಕೆ ಬಂದಿರುತ್ತದೆಯೇ ;

(ಆ) ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ, ತಮಿಳುನಾಡು ರಾಜ್ಯಗಳ ಸಿಬ್ಬಂದಿ ವೇತನಕ್ಕೆ ಹೋಲಿಕೆಯ ವಿವರ ನೀಡುವುದು ;

(ಇ) ಕರ್ತವ್ಯನಿರತ ಸಂದರ್ಭದಲ್ಲಿ ನಿರ್ವಹಿಸುವ ಕರ್ತವ್ಯನುಸಾರ ಎಷ್ಟು ಭತ್ಯೆಗಳನ್ನು ನೀಡಲಾಗುತ್ತಿದೆ ? (ಪ್ರಯಾಣ ಭತ್ಯೆ, ದಿನ ಭತ್ಯೆ, ಹೊರ ರಾಜ್ಯ ಪ್ರವಾಸ ಭತ್ಯೆ, ಅಪರಿಚಿತ ಶವ ಹೂಳುವ ಭತ್ಯೆ, ಖೈದಿಗಳ ಜೊತೆ ಪ್ರಯಾಣ ಪ್ರವಾಸ ಖೈದಿಗಳ ಊಟದ ಭತ್ಯೆ ಇತ್ಯಾದಿಗಳ ವಿವರ ನೀಡುವುದು)

## ಸಿಂಧಗಿ ನಗರದಲ್ಲಿ ಒಳಚರಂಡಿ ನಿರ್ಮಾಣ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):-**

೧೬೨೫ (೧೮೯೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಾಪುರ ಜಿಲ್ಲೆಯ ಸಿಂಧಗಿ ನಗರದಲ್ಲಿ ಸಮಗ್ರ ಒಳಚರಂಡಿ ನಿರ್ಮಾಣ ಯೋಜನೆಯನ್ನು ರೂಪಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಯಾವಾಗ ರೂಪಿಸಲಾಗುವುದು ;

(ಆ) ರೂಪಿಸಲಾಗಿದ್ದರೆ, ಸದರಿ ಯೋಜನೆಗೆ ಒದಗಿಸಿದ ಹಣ ಎಷ್ಟು ;

(ಇ) ಈ ಯೋಜನೆಯ ಕಾರ್ಯ ಯಾವ ಹಂತದಲ್ಲಿದೆ ;

(ಈ) ಈ ಯೋಜನೆ ಯಾವಾಗ ಪೂರ್ಣಗೊಳ್ಳುವುದು ?

## ರಾಜ್ಯದಲ್ಲಿ Food Park ಗಳ ಸ್ಥಾಪನೆ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):-**

೧೬೨೬ (೧೯೦೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ Food Park ಗಳನ್ನು ಎಲ್ಲೆಲ್ಲಿ ಸ್ಥಾಪಿಸಲು ಕ್ರಮ ಜರುಗಿಸಲಾಗಿದೆ ;

(ಆ) ಪ್ರತಿ Food Park ಗೆ ವಶಪಡಿಸಿಕೊಂಡ ಜಮೀನು ಎಷ್ಟು ; ಪ್ರತಿ ಎಕರೆಗೆ ನೀಡಿದ ಬೆಲೆ ಎಷ್ಟು ;

(ಇ) ಆರಂಭಿಸಲಾದ Food Park ಗಳ ವಿವರ ನೀಡುವುದು ;

(ಈ) ಈಗಾಗಲೇ ನಿರ್ಮಾಣ ಹಂತದಲ್ಲಿರುವ ಹಾಗೂ ನಿರ್ಮಾಣಗೊಳ್ಳಲಿರುವ Food Park ಗಳ ಯಾವುವು ?

## ಕೊಪ್ಪಳ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ವಸಾಹತು ಯೋಜನೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):-**

೧೬೨೭ (೧೯೦೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯಲ್ಲಿ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬಹುದಾದಂತಹ ಮಹತ್ವದ ಯೋಜನೆಯಾದ ಸಣ್ಣ ಕೈಗಾರಿಕಾ ವಸಾಹತು ಯೋಜನೆಗೆ ಚಾಲನೆ ನೀಡಲಾಗಿದೆಯೇ ;

(ಆ) ನೀಡಲಾಗಿದ್ದಲ್ಲಿ, ಯಾವ ಭಾಗದಲ್ಲಿ ಎಷ್ಟು ಎಕರೆ ಭೂಪ್ರದೇಶವನ್ನು ಕಾಯ್ದಿರಿಸಲಾಗಿದೆ ;

(ಇ) ನಿವೇಶನಕ್ಕಾಗಿ ಆಸಕ್ತರಿಂದ ಅರ್ಜಿ ಸಲ್ಲಿಕೆಯಾಗಿವೆಯೇ ; ಆಗಿದ್ದಲ್ಲಿ, ಎಷ್ಟು ಅರ್ಜಿಗಳು ಯಾವ ಯಾವ ದಿನಾಂಕಗಳಂದು ಸಲ್ಲಿಕೆಯಾಗಿವೆ ; (ವಿವರಗಳನ್ನು ನೀಡುವುದು)

(ಈ) ಅರ್ಜಿಗಳನ್ನು ಆಹ್ವಾನಿಸಿದ ನಂತರ ಕ್ರಮಗಳು ನಿಧಾನ ಗತಿಯಲ್ಲಿ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ವಿಳಂಬ ನಿವಾರಣೆಗೆ ಇರುವ ಅಡೆತಡೆಗಳೇನು ; ಯಾವಾಗ ನಿವೇಶನಗಳಿಗೆ ದರ ನಿಗದಿ ಮಾಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ?

## ರಾಜ್ಯದಲ್ಲಿ ೨೦೧೪-೧೫ನೇ ಸಾಲಿನಲ್ಲಿ ನಡೆದ ಹೆದ್ದಾರಿ ದರೋಡೆ ಪ್ರಕರಣಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೬೨೮ (೧೯೦೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನಲ್ಲಿ ರಾಜ್ಯದಲ್ಲಿ ನಡೆದ ಹೆದ್ದಾರಿ ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಸದರಿ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳು ಪತ್ತೆಯಾಗಿವೆ ; ಪತ್ತೆಯಾಗದ ಪ್ರಕರಣಗಳ ಸಂಖ್ಯೆ ಎಷ್ಟು ; ಪತ್ತೆ ಚುರುಕುಗೊಳಿಸುವಲ್ಲಿ ಮತ್ತು ಮುಂಜಾಗ್ರತ ಕ್ರಮಗಳ ಕುರಿತು ಇಲಾಖೆ ಕೈಗೊಂಡ ಕ್ರಮಗಳೇನು ;

(ಇ) ಲೈಂಗಿಕ ಅಲ್ಪಸಂಖ್ಯಾತರುಗಳು ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅವ್ಯಾಹತವಾಗಿ ಹಣ ವಸೂಲಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಇದನ್ನು ತಡೆಯಲು ಇಲ್ಲಿಯವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

(ಉ) ಈ ಹಗಲು ದರೋಡೆಯನ್ನು ನಿಯಂತ್ರಿಸಲು ಸರ್ಕಾರ ರೂಪಿಸಿದ ಯೋಜನೆಗಳಾವುವು ?

## ಪೊಲೀಸ್‌ರಿಗೆ ಪಡಿತರ ಧಾನ್ಯಗಳ ವಿತರಣೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೬೨೯ (೧೯೦೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರತಿ ತಿಂಗಳು ಪೊಲೀಸರಿಗೆ ನೀಡಲಾಗುತ್ತಿರುವ ಪಡಿತರ ಧಾನ್ಯಗಳ ಪ್ರಮಾಣ ಎಷ್ಟು ; (ಪೂರ್ಣ ವಿವರ ನೀಡುವುದು)

(ಆ) ಕಳೆದ ಎರಡು ತಿಂಗಳಿನಿಂದ ಪೊಲೀಸ್ ಇಲಾಖೆಯಲ್ಲಿ ಪಡಿತರ ವಿತರಣೆ ಆಗದಿರಲು ಕಾರಣವೇನು ;

(ಇ) ಸರ್ಕಾರದ ಅನುದಾನದಲ್ಲಿ ಕೊರತೆ ಏನಾದರೂ ಇದೆಯೇ ;

(ಈ) ಕಳೆದ ಎರಡು ತಿಂಗಳಿನಿಂದ ಬಾಕಿ ಇರುವ ಪಡಿತರವನ್ನು ಯಾವಾಗ ವಿತರಣೆ ಮಾಡಲಾಗುವುದು ?

## ಕೆ.ಎಸ್.ಎಫ್.ಸಿ. ಅಧಿಕಾರಿಗಳ ಮೇಲಿನ ಆರೋಪ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–**

೧೬೩೦ (೧೯೦೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ (ಕೆ.ಎಸ್.ಎಫ್.ಸಿ.) ೧೯೯೯ನೇ ಸಾಲಿನಿಂದ ಇದುವರೆವಿಗೂ ಎಷ್ಟು ಮಂದಿ 'ಎ'

ಶ್ರೇಣಿ ಅಧಿಕಾರಿಗಳ ಮೇಲೆ ಆರೋಪಗಳು ಬಂದಿವೆ ; (ವಿವರಗಳೊಡನೆ)

(ಆ) ಆರೋಪಗಳ ಸಂಬಂಧ ಎಷ್ಟು ಮಂದಿ ಅಧಿಕಾರಿಗಳ ಮೇಲೆ ಯಾವ ಯಾವ ದಿನಾಂಕಗಳಲ್ಲಿ ತನಿಖೆಗೆ ಆದೇಶಿಸಲಾಗಿದೆ ; (ಪೂರ್ಣ ವಿವರಗಳೊಡನೆ)

(ಇ) ಇದುವರೆವಿಗೂ ಯಾವ ಅಧಿಕಾರಿಗಳ ವಿರುದ್ಧದ ತನಿಖಾ ವರದಿಗಳು ಯಾವ ದಿನಾಂಕಗಳಂದು ಇಲಾಖೆಗೆ ಸಲ್ಲಿಕೆಯಾಗಿದೆ ; (ಪೂರ್ಣ ವಿವರಗಳೊಡನೆ)

(ಈ) ತನಿಖಾ ವರದಿ ಆಧಾರದ ಮೇಲೆ ಎಷ್ಟು ಮಂದಿ ಅಧಿಕಾರಿಗಳ ಮೇಲೆ ಯಾವ ಯಾವ ದಿನಾಂಕಗಳಂದು ಕ್ರಮ ಕೈಗೊಳ್ಳಲಾಗಿದೆ ; (ವಿವರಗಳೊಡನೆ)

(ಉ) ಸದರಿ ತನಿಖಾ ವರದಿಗಳು ಇಲಾಖೆಗೆ ಸಲ್ಲಿಕೆಯಾಗಿ ಒಂದು ವರ್ಷ ಕಳೆದರೂ ಯಾವುದೇ ಕ್ರಮ ತೆಗೆದುಕೊಳ್ಳದಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ವಿವರಗಳೊಡನೆ)

(ಊ) ತನಿಖಾ ವರದಿ ಸಲ್ಲಿಕೆಯಾಗಿರುವ ಎಲ್ಲಾ ಪ್ರಕರಣಗಳ ಮೇಲೆ ತನಿಖಾ ವರದಿ ಆಧರಿಸಿ ಸರ್ಕಾರ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ?

## ಮಳವಳ್ಳಿ ಕೋರ್ಟ್ ಮೂಲಭೂತ ಸೌಲಭ್ಯಗಳ ಕೊರತೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–**

೧೬೩೧ (೧೯೧೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು ಕೇಂದ್ರದ ಕೋರ್ಟ್ ಸಂಕೀರ್ಣದಲ್ಲಿ ಕಟ್ಟಡ ಮೂಲಭೂತ ಸೌಲಭ್ಯ ಹಾಗೂ ನೌಕರರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕೊರತೆ ಇರುವ ಮೂಲಭೂತ ಸೌಲಭ್ಯಗಳು ಹಾಗೂ ನೌಕರರ ವಿವರಗಳನ್ನು ನೀಡುವುದು ;

(ಇ) ಈ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ಹೊಸದಾಗಿ ಕೋರ್ಟ್ ಸಂಕೀರ್ಣ ನಿರ್ಮಿಸಲು ಸರ್ಕಾರ ಚಿಂತಿಸಿದೆಯೇ ; (ವಿವರಗಳೊಡನೆ)

(ಉ) ಹಾಗಾದರೆ, ಸದರಿ ಯೋಜನೆಯ ವಿವರಗಳನ್ನು ನೀಡುವುದು ?

## ಪೊಲೀಸ್ ಇಲಾಖೆಯ ಹೆಚ್.ಸಿ. ಮತ್ತು ಎ.ಎಸ್.ಐ. ಬಡ್ತಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–**

೧೬೩೨ (೧೯೧೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೋಲೀಸ್ ಇಲಾಖೆಯಲ್ಲಿ ಮುಖ್ಯಪೇದೆ ಹಾಗೂ ಸಹಾಯಕ ಆರಕ್ಷಕ ನಿರೀಕ್ಷಕ (ಎ.ಎಸ್.ಐ.) ಹುದ್ದೆಗಳಿಗೆ ಬಡ್ತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಡ್ತಿ ನೀಡಬೇಕಾಗಿರುವ ಮುಖ್ಯಪೇದೆ ಹಾಗೂ ಸಹಾಯಕ ಆರಕ್ಷಕ ನಿರೀಕ್ಷಕ (ಎ.ಎಸ್.ಐ.) ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು) ಯಾವ ಸಮಯದಿಂದ ಈ ಹುದ್ದೆಗಳು ಖಾಲಿ ಇವೆ ;

(ಇ) ಸದರಿ ಹುದ್ದೆಗಳಿಗೆ ಯಾವ ಕಾಲಮಿತಿಯಲ್ಲಿ ಬಡ್ತಿ ನೀಡಲಾಗುವುದು ;

(ಈ) ಬಡ್ತಿ ನೀಡುವಲ್ಲಿನ ವಿಳಂಬಕ್ಕೆ ಕಾರಣಗಳೇನು ?

## ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-**

೧೬೩೩ (೯೦೯) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಕ್ಟೋಬರ್-೯, ೨೦೧೩ರ ವಿಶೇಷ ಪತ್ರಿಕೆಯಲ್ಲಿ ಪ್ರಕಟವಾಗಿರುವ ಬಿ.ಎಂ.ಆರ್.ಡಿ.ಎ. ವ್ಯಾಪ್ತಿಯ (ಕ್ರ.ಸಂ:ಬಿ.ಎಂ.ಆರ್.ಡಿ.ಎ./ ಎಡಿಟಿಪಿ-೨/ಮಹಾಯೋಜನೆ/ಹೋಯೋಪ್ರಾ/೦೪/ ೨೦೧೨-೧೩, ದಿನಾಂಕ: ೦೩-೧೦-೨೦೧೩) ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಂಬಂಧಿಸಿದಂತೆ, ರಸ್ತೆ ನಿರ್ಮಾಣದ ಮುಖ್ಯ ಯೋಜನೆಯ ಸಂಪೂರ್ಣ ನಕ್ಷೆಯನ್ನು ಒದಗಿಸುವುದು ;

(ಆ) ಸದರಿ ಯೋಜನೆಗೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಸಂಬಂಧ ಕಂದಾಯ ಇಲಾಖೆಗೆ ನಿರ್ದೇಶನ ನೀಡಲಾಗಿದೆಯೇ ; (ವಿವರ ನೀಡುವುದು)

(ಇ) ದೇವನಹಳ್ಳಿ ತಾಲ್ಲೂಕು ಹಾಗೂ ಹೊಸಕೋಟೆ ತಾಲ್ಲೂಕಿನ ಗ್ರಾಮಗಳನ್ನು ಹಸಿರು ವಲಯದಿಂದ (Green Zone) ವಸತಿ ವಲಯಕ್ಕೆ (Yellow Zone) ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ ; (ವಿವರ ನೀಡುವುದು)

(ಈ) ಹಾಗಿದ್ದಲ್ಲಿ, ಸದರಿ ತಾಲ್ಲೂಕುಗಳ ಯಾವ ಯಾವ ಗ್ರಾಮಗಳನ್ನು ಪರಿವರ್ತಿಸಲು ಉದ್ದೇಶಿಸಲಾಗಿದೆ ;

(ಉ) ಯಾವ ಕಾಲಮಿತಿಯಲ್ಲಿ ಪರಿವರ್ತಿಸಲಾಗುವುದು ?

## ರಾಜ್ಯದಲ್ಲಿ ಅಕ್ರಮ ವಲಸೆಗಾರರ ಕುರಿತು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೬೩೪ (೯೯೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯವು ಭಯೋತ್ಪಾದಕರ ಅಡಗು ತಾಣವೆಂದು ಹೆಸರು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಒಟ್ಟು ಎಷ್ಟು ಅಕ್ರಮ ವಲಸೆಗಾರರು ವಾಸವಾಗಿರುತ್ತಾರೆ ; ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಮುಂಬರುವ ದಿನಗಳಲ್ಲಿ ಇವರ ಸಂಖ್ಯೆಯು ದ್ವಿಗುಣ ಹೊಂದಲಿದೆ ಎಂಬ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದರೆ, ಇದನ್ನು ನಿಯಂತ್ರಿಸಲು ಮುಂಜಾಗ್ರತೆಯಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

# ರಾಜ್ಯದಲ್ಲಿ IAS ವೃಂದಕ್ಕೆ Non KAS ವೃಂದದಿಂದ ಬಡ್ತಿ ನೀಡಲು ಇರುವ ಮಾನದಂಡಗಳು.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೬೩೫ (೧೯೨೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ IAS ವೃಂದಕ್ಕೆ Non KAS ವೃಂದದಿಂದ ಪ್ರತಿ ವರ್ಷ ಬಡ್ತಿ ನೀಡಲಾಗುತ್ತಿದೆಯೇ ;

(ಆ) ೨೦೧೧-೧೨ ಹಾಗೂ ೨೦೧೨-೧೩ನೇ ಸಾಲಿನಲ್ಲಿ IAS ಹುದ್ದೆಗಳು ಖಾಲಿ ಇದ್ದಾಗ್ಯೂ Non KAS ಅಧಿಕಾರಿಗಳಿಗೆ ಬಡ್ತಿ ನೀಡದೇ ಇರಲು ಕಾರಣಗಳೇನು ;

(ಇ) ಬಡ್ತಿ ನೀಡಲು ಇರುವ ಮಾನದಂಡಗಳೇನು, ಅದರ ಪ್ರತಿಯನ್ನು ಒದಗಿಸುವುದು ;

(ಈ) ೨೦೧೧-೧೨ನೇ ಸಾಲಿನ ಪೂರ್ವದಲ್ಲಿ ಆಯ್ಕೆ ಪ್ರಕ್ರಿಯೆಗೆ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿರುವ ಸಮಿತಿ ಹಾಗೂ ಯು.ಪಿ.ಎಸ್.ಸಿ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯದ ಪ್ರತಿಗಳನ್ನು ಒದಗಿಸುವುದು ?

## ಪದ್ಮನಾಭನಗರದ ಪೆಟ್ರೋಲ್ ಬಂಕ್ ವೃತ್ತದಲ್ಲಿನ ಫ್ಲೈಓವರ್ ಕಾಮಗಾರಿಯ ವಿಳಂಬದ ಬಗ್ಗೆ.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೬೩೬ (೧೯೩೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೩೫ ಕೋಟಿ ರೂ ವೆಚ್ಚದಲ್ಲಿ ಬೆಂಗಳೂರು ನಗರದಲ್ಲಿನ ಪದ್ಮನಾಭನಗರ ಪೆಟ್ರೋಲ್ ಬಂಕ್ ವೃತ್ತದಲ್ಲಿ ಬಿ.ಬಿ.ಎಂ.ಪಿ ಕೈಗೆತ್ತಿಕೊಂಡಿರುವ ಫ್ಲೈ ಓವರ್ ಕಾಮಗಾರಿಗೆ ಎಷ್ಟು ಸಮಯ ನಿಗದಿಪಡಿಸಲಾಗಿದೆ ;

(ಆ) ನಿಗದಿತ ಕಾಲವಧಿಯಲ್ಲಿ ಕಾಮಗಾರಿ ನಡೆಯದೆ ಇದ್ದು, ಇದರೊಂದಿಗೆ ಈಗಿರುವ ವಾಹನ ದಟ್ಟಣೆ ಇಮ್ಮಡಿಗೊಂಡು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ನಿಧಾನ ಗತಿಯ ಕಾಮಗಾರಿಯಿಂದ ಸಂಚಾರಿ ಸಮಸ್ಯೆ ಹಾಗೂ ಈಗಾಗಲೇ ಆರ್ಥಿಕ ಸಮಸ್ಯೆಯಲ್ಲಿರುವ ಬಿ.ಬಿ.ಎಂ.ಪಿ.ಗೆ ಹೆಚ್ಚಿನ ಹಣಕಾಸಿನ ಹೊರೆಯಾಗಲಿದ್ದು, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಬೆಂಗಳೂರಿನಲ್ಲಿ ಆಟೋ ಪಥ ಯೋಜನೆ ಬಗ್ಗೆ.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೬೩೭ (೧೯೩೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ನಗರದಲ್ಲಿ ಜಾರಿಗೆ ತಂದಿರುವ ಪ್ರತ್ಯೇಕ ಆಟೋ ಪಥ ಯೋಜನೆ ಕಾರ್ಯರೂಪದಲ್ಲಿದೆಯೇ, ಇದ್ದಲ್ಲಿ ಹಾಲಿ ಯಾವ ಯಾವ ರಸ್ತೆಗಳಿಗೆ ಈ ಯೋಜನೆ ಅಳವಡಿಸಲಾಗಿದೆ; ಇತರೆ ರಸ್ತೆಗಳನ್ನು ಈ ವ್ಯಾಪ್ತಿಯಲ್ಲಿ ಯಾವಾಗ ತರಲಾಗುವುದು;

(ಆ) ಇಲ್ಲದಿದ್ದಲ್ಲಿ, ಯಾವಾಗ ಇದನ್ನು ಅಳವಡಿಸಲಾಗುವುದು?

## ಮಡಿಕೇರಿ ನಗರಕ್ಕೆ ಕುಡಿಯುವ ನೀರಿನ ಪೂರೈಕೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೩೮ (೧೯೨೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಡಗು ಜಿಲ್ಲೆಯ ಮಡಿಕೇರಿ ನಗರಕ್ಕೆ ಕುಡಿಯುವ ನೀರಿನ ಯೋಜನೆಯಾದ ಕುಂಡಾ ಮೇಸ್ತ್ರಿ ಯೋಜನೆಗೆ ತಗುಲಿದ ಒಟ್ಟು ಮೊತ್ತವೆಷ್ಟು ;

(ಆ) ಸದರಿ ಯೋಜನೆಯಿಂದ ಮಡಿಕೇರಿ ನಗರಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲಾಗುತ್ತಿದೆಯೆ ;

(ಇ) ಕಳೆದ ತಿಂಗಳಿನಿಂದಲೇ ಮಡಿಕೇರಿ ನಗರದಲ್ಲಿ ಕುಡಿಯುವ ನೀರಿನ ಅಭಾವ ಬಂದಿರುವುದು ನಿಜವೆ, ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಮಡಿಕೇರಿ ನಗರ ಮತ್ತೊಂದು ಕುಡಿಯುವ ನೀರಿನ ಯೋಜನೆಯಾದ ಬೇತ್ರಿ ಯೋಜನೆಯು ಯಾವ ಹಂತದಲ್ಲಿದೆ ಇದು ಪೂರ್ಣಗೊಳ್ಳುವುದು ಯಾವಾಗ ?

## ನೆನೆಗುದಿಗೆ ಬಿದ್ದಿರುವ ಹೊನ್ನೆಕಾಡು ಹಳ್ಳ ಯೋಜನೆ

**ಶ್ರೀಮತಿ ಎ.ವಿ ಗಾಯಿತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೩೯ (೧೯೨೨) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೂಡಿಗೆರೆ ತಾಲ್ಲೂಕಿನ ಕಳಸ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಹೊನ್ನೆಕಾಡು ಹಳ್ಳದ ಯೋಜನೆ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಯೋಜನೆಯ ಕಾಮಗಾರಿಗೆ ಯಾವಾಗ ಚಾಲನೆ ನೀಡಲಾಗಿತ್ತು ಕಾಮಗಾರಿ ನೆನೆಗುದಿಗೆ ಬೀಳಲು ಕಾರಣ ಏನು ;

(ಇ) ಈ ಯೋಜನೆಯ ಅಂದಾಜು ಮೊತ್ತ ಎಷ್ಟು, ಕಾಮಗಾರಿ ಸ್ಥಿತಿಗತಿ ಕುರಿತು ಮಾಹಿತಿ ನೀಡುವುದು ;

(ಈ) ಯೋಜನೆಯ ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ ?

## ಬಳ್ಳಾರಿ ಜಿಲ್ಲೆಯಲ್ಲಿ ಕಲ್ಲುಗಣಿ ಗುತ್ತಿಗೆಗಾಗಿ ಬಂದ ಅರ್ಜಿಗಳು.

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೪೦ (೧೯೨೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯಿಂದ ಹೊಸ ಕಲ್ಲುಗಣಿ ಗುತ್ತಿಗೆಗಾಗಿ ಮತ್ತು ನವೀಕರಣಕ್ಕಾಗಿ ಈವರೆಗೆ ಎಷ್ಟು ಅರ್ಜಿಗಳು ಬಂದಿವೆ ; (ಅರ್ಜಿದಾರರ ಹೆಸರು ಮತ್ತು ಊರು ಕಲ್ಲುಗಣಿಗಳ ಸ್ಥಳಗಳ ವಿವರ ನೀಡುವುದು)

(ಆ) ಈ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ಅನುಮೋದನೆ ನೀಡಲಾಗಿದೆ ;

(ಇ) ಅನುಮೋದನೆ ನೀಡದ ಅರ್ಜಿಗಳ ಸಂಖ್ಯೆ ಎಷ್ಟು, ಅನುಮೋದನೆ ನೀಡದೇ ಇರಲು ಕಾರಣಗಳೇನು? (ಅರ್ಜಿವಾರು ವಿವರ ನೀಡುವುದು)

## ಬಳ್ಳಾರಿ ಜಿಲ್ಲೆಗೆ ಒದಗಿಸಿದ ಮುಜರಾಯಿ ಇಲಾಖೆ ಅನುದಾನ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೪೧ (೧೯೨೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುಜರಾಯಿ ಇಲಾಖೆಯಿಂದ ಕಳೆದ ಎರಡು ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಗೆ ಎಷ್ಟು ಅನುದಾನ ನೀಡಲಾಗಿದೆ; (ವರ್ಷವಾರು ವಿವರ ನೀಡುವುದು)

(ಆ) ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಅನುದಾನ ನೀಡಲಾಗಿದೆ; (ವರ್ಷವಾರು ಮತ್ತು ಜಿಲ್ಲಾವಾರು ವಿವರ ನೀಡುವುದು)

(ಇ) ಕಳೆದ ಎರಡು ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯ ಯಾವ ಯಾವ ದೇವಸ್ಥಾನಗಳಿಗೆ ಅನುದಾನ ಒದಗಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಅನುದಾನ ನೀಡಿದ ದೇವಸ್ಥಾನದ ಕಾಮಗಾರಿಗಳು ಎಷ್ಟು ಕಡೆ ಪೂರ್ಣಗೊಂಡಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಬಳ್ಳಾರಿ ಕೇಂದ್ರ ಕಾರಗೃಹಕ್ಕೆ ಸಿಬ್ಬಂದಿಗಳ ಅವಶ್ಯಕತೆ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೪೨ (೧೯೨೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜೈಲರ್‌ಗಳ ಸಂಖ್ಯೆ ಎಷ್ಟು ; ಅಪರಾಧಿಗಳ ಸಂಖ್ಯೆ ಎಷ್ಟು ;

(ಆ) ಅಪರಾಧಿಗಳ ಸಂಖ್ಯೆಗೆ ಅನುಗುಣವಾಗಿ ಈಗಿರುವ ಸಿಬ್ಬಂದಿ ಸಾಕಾಗುವುದೇ ;

(ಇ) ಇನ್ನು ಹೆಚ್ಚಿನ ಸಿಬ್ಬಂದಿಗಳ ಅವಶ್ಯಕತೆ ಇರುವುದು ನಿಜವೇ, ಹಾಗಿದ್ದಲ್ಲಿ, ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ;

(ಈ) ಈಗಿರುವ ಜೈಲನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಸರ್ಕಾರ ಈವರೆಗೆ ಏನೇನು ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಗದಗ ಜಿಲ್ಲೆಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಪ ವಿಭಾಗಗಳು

**ಶ್ರೀ ಎಸ್.ವ್ಹಿ. ಸಂಕನೂರು (ಪದವೀಧರರ ಕ್ಷೇತ್ರ) :-**

೧೬೪೩ (೧೬೧೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗದಗ ಜಿಲ್ಲೆಯ ತುಂಗಭದ್ರಾ ಕುಡಿಯುವ ನೀರಿನ ಯೋಜನೆ ಮುಖಾಂತರ ಮುಂಡರಗಿ ಮತ್ತು ಗದಗ-ಬೆಟಗೇರಿ ಹಾಗೂ ಮಧ್ಯದಲ್ಲಿ ಬರುವ ಸುಮಾರು ೧೩ ಹಳ್ಳಿಗಳಿಗೆ ಕುಡಿಯುವ ನೀರಿನ ವಿತರಣೆ ಕಾರ್ಯ ನಿರ್ವಹಿಸಲು ಆರಂಭದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಪವಿಭಾಗಗಳ ಸಂಖ್ಯೆ ಎಷ್ಟು ;

(ಆ) ಸದ್ಯ ಕಾರ್ಯನಿರ್ವಹಿಸುತ್ತಿರುವ ಉಪ ವಿಭಾಗಗಳ ಸಂಖ್ಯೆ ಎಷ್ಟು ;

(ಇ) ಗದಗ ಜಿಲ್ಲೆಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಿಭಾಗೀಯ ಕಛೇರಿಯ ಅಡಿಯಲ್ಲಿರುವ ಗದಗ ಉಪವಿಭಾಗ ಕಾರ್ಯಾಲಯವನ್ನು ಎತ್ತಂಗಡಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

F- 8-B/B

(ಈ) ಗದಗ ಉಪವಿಭಾಗ ಕಾರ್ಯಾಲಯವನ್ನು ಎತ್ತಂಗಡಿ ಮಾಡಿದ ನಂತರ ಗದಗ-ಬೆಟಗೇರಿ ಜನರಿಗೆ ಕುಡಿಯುವ ನೀರಿನ ಸರಬರಾಜುನಲ್ಲಿ ತುಂಬಾ ತೊಂದರೆ ಉಂಟಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸದ್ಯ ಗದಗ ಬೆಟಗೇರಿ ನಗರಕ್ಕೆ ೨೦-೨೨ ದಿನಗಳಿಗೆ ಒಮ್ಮೆ ಕುಡಿಯುವ ನೀರು ಸರಬರಾಜು ಆಗಿ ತೊಂದರೆಯಾಗುತ್ತಿದ್ದುದು ನಿಜವೇ ; ನೀರಿನ ವಿತರಣೆ ಸುಧಾರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ?

## ಗದಗ-ಬೆಟಗೇರಿ ನಗರದ ಒಳಚರಂಡಿ ಯೋಜನೆ

**ಶ್ರೀ ಎಸ್.ವ್ಹಿ. ಸಂಕನೂರು (ಪದವೀಧರರ ಕ್ಷೇತ್ರ) :-**

೧೬೪೪ (೧೬೧೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗದಗ-ಬೆಟಗೇರಿ ಅವಳಿ ನಗರಕ್ಕೆ ಒಳಚರಂಡಿ ಯೋಜನೆಯನ್ನು ಯಾವ ವರ್ಷದಲ್ಲಿ ಮಂಜೂರು ಮಾಡಲಾಗಿದೆ ; ಇದರ ಒಟ್ಟು ಯೋಜನಾ ವೆಚ್ಚವೆಷ್ಟು ;

(ಆ) ಈ ಯೋಜನೆ ಪೂರ್ಣಗೊಳಿಸಲು ನಿಗದಿಗೊಳಿಸಿದ ಕಾಲಮಿತಿ ಎಷ್ಟು ;

(ಇ) ಈ ಯೋಜನೆ ಪೂರ್ತಿಗೊಳಿಸುವಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಒಳಗೊಂಡು ಯಾವುದಾದರೂ ಅಡಚಣೆಗಳಿವೆಯೇ ;

(ಈ) ಈ ಯೋಜನೆ ಪೂರ್ಣಗೊಳ್ಳಲು ಬೇಕಾಗಿರುವ ಕಾಲಾವಧಿ ಎಷ್ಟು ?

## ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಗೆಜೆಟೆಡ್–I ಮತ್ತು ಗೆಜೆಟೆಡ್–II ಹುದ್ದೆಗಳ ಭರ್ತಿ

**ಶ್ರೀ ಎಸ್.ವ್ಹಿ. ಸಂಕನೂರು (ಪದವೀಧರರ ಕ್ಷೇತ್ರ) :–**

೧೬೪೫ (೧೯೩೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ೨೦೧೫ರಲ್ಲಿ ಎಷ್ಟು ಗೆಜೆಟೆಡ್–I ಮತ್ತು ಗೆಜೆಟೆಡ್–II ಹುದ್ದೆ ತುಂಬಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ, ಇಲಾಖೆವಾರು ವಿವರಣೆ ನೀಡುವುದು;

(ಆ) ಗೆಜೆಟೆಡ್–I ಮತ್ತು ಗೆಜೆಟೆಡ್–II ಹುದ್ದೆಗಳ ನೇಮಕಾತಿಗಾಗಿ ಎಷ್ಟು ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ;

(ಇ) ಎಷ್ಟು ವರ್ಷಗಳಿಂದ ಈ ಹುದ್ದೆಗಳ ನೇಮಕಾತಿ ಮಾಡಿಕೊಂಡಿರುವುದಿಲ್ಲ;

(ಈ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಿವೃತ್ತಿ, ನಿಧನ ಹಾಗೂ ರಾಜಿನಾಮೆಯಿಂದ

ಖಾಲಿಯಿರುವ ಹುದ್ದೆಗಳನ್ನು ತುಂಬಿಕೊಳ್ಳುವ ಚಿಂತನೆ ಸರ್ಕಾರ ನಡೆಸಿದೇಯೆ, ಹಾಗಿದ್ದಲ್ಲಿ ನೇಮಕಾತಿ ಪ್ರಕ್ರಿಯೆ ಯಾವಾಗ ಪ್ರಾರಂಭಿಸಲಾಗುವುದು ?

**ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆಯುತ್ತಿರುವ ಶಾಲೆ**

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೪೬ (೧೯೩೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ;

(ಆ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿರುವ ಶಾಲೆಗಳಲ್ಲಿ ಮಂಜೂರಾದ ಹುದ್ದೆಗಳಿಗಿಂತ ಕಡಿಮೆ ಶಿಕ್ಷಕರು ಇರುವುದು ಸರ್ಕಾರದ ಗಮನದಲ್ಲಿದೆಯೇ ;

(ಇ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿರುವ ಶಾಲೆಗಳಲ್ಲಿ ಶುಚಿತ್ವವಾಗಿರುವ ಶೌಚಾಲಯಗಳ ಸಂಖ್ಯೆ ವಿದ್ಯಾರ್ಥಿಗಳಿಗನುಗುಣವಾಗಿ ಇವೆಯೇ, ಇಲ್ಲದಿದ್ದ ಪಕ್ಷದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ಹೆಚ್ಚುತ್ತಿರುವ ಕಳವು ಪ್ರಕರಣಗಳು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೪೭ (೧೯೩೩) ಮಾನ್ಯ ಗೃಹ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಿಂದ ರಾಜ್ಯದಲ್ಲಿ ಆದ ಕಳವು ಪ್ರಕರಣಗಳೆಷ್ಟು; ಅವುಗಳಲ್ಲಿ ಎಷ್ಟು ಪತ್ತೆ ಮಾಡಲಾಗಿದೆ ; ಈ ರೀತಿ ಪತ್ತೆಯಾದ ವಸ್ತುಗಳನ್ನು ಎಷ್ಟು ಮಾಲೀಕರಿಗೆ ವಾಪಸ್ ಮಾಡಲಾಗಿದೆ ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಖಾಲಿಯಿರುವ ಸಬ್‌ಇನ್ಸ್‌ಪೆಕ್ಟರ್ ಹಾಗೂ ಕಾನ್‌ಸ್ಟೇಬಲ್‌ಗಳ ಹುದ್ದೆಗಳ ಸಂಖ್ಯೆ ಎಷ್ಟು ; ಹೀಗೆ ಖಾಲಿಯಿರುವ ಹುದ್ದೆಗಳನ್ನು ಶೀಘ್ರವಾಗಿ ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ರಾಜ್ಯದಲ್ಲಿ ಪೊಲೀಸ್ ವಸತಿಗೃಹಗಳ ಕೊರತೆಯಿರುವುದು ಸರ್ಕಾರದ ಗಮನದಲ್ಲಿದೆಯೇ ಹಾಗೂ ಹಾಲಿ ಇರುವ ವಸತಿಗೃಹಗಳ ಶಿಥಿಲ ವ್ಯವಸ್ಥೆಯಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ?

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ಆಗುತ್ತಿರುವ ದೌರ್ಜನ್ಯ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೪೮ (೯೩೫) ಮಾನ್ಯ ಗೃಹ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೫ ವರ್ಷಗಳಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರ ಮೇಲೆ ಎಸಗಿದ ದೌರ್ಜನ್ಯ ಪ್ರಕರಣಗಳೆಷ್ಟು ;

(ಆ) ಹೀಗೆ ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರವು ನೀಡಿರುವ ಪರಿಹಾರದ ಮೊತ್ತವೆಷ್ಟು ;

(ಇ) ಈ ದೌರ್ಜನ್ಯ ಪ್ರಕರಣದಲ್ಲಿ ಕಾರಣರಾದವರ ಮೇಲೆ ಶಿಕ್ಷೆಗೆ ಗುರಿಪಡಿಸಿದವರ ಪ್ರಕರಣಗಳೆಷ್ಟು ?

## ಹಾವೇರಿ ಜಿಲ್ಲೆ ಶಿಗ್ಗಾಂ ತಾಲ್ಲೂಕಿನ ಮಡ್ಲಿ ಗ್ರಾಮದಲ್ಲಿನ ಅಂಬುಜಾ ಫ್ಯಾಕ್ಟರಿಯ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೪೯ (೧೮೦೭) ಮಾನ್ಯ ಮುಖ್ಯಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆ ಶಿಗ್ಗಾಂ ತಾಲ್ಲೂಕಿನ ಮಡ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುಜರಾತ್ ಅಂಬುಜಾ ಫ್ಯಾಕ್ಟರಿ ಯಾವಾಗ ಸ್ಥಾಪನೆಯಾಯಿತು ;

(ಆ) ಈ ಫ್ಯಾಕ್ಟರಿ ಸ್ಥಾಪನೆಗೆ ಮುನ್ನ ಇವರಿಗೆ ವಿಧಿಸಲಾಗಿರುವ ಷರತ್ತುಗಳೇನು ; (ವಿವರ ಒದಗಿಸುವುದು)

(ಇ) ಈ ಫ್ಯಾಕ್ಟರಿಯವರು ಶಿಗ್ಗಾಂ ತಾಲ್ಲೂಕು ಹುಲಸೋಗಿ ಗ್ರಾಮದ ಗೆಂಗೇರಿ ಕೆರೆಯ ಪೋಷಕ ಕಾಲುವೆಯನ್ನು ತಿಂಗಳೊಳಗಾಗಿ ನಿರ್ಮಿಸಿಕೊಡುವ ಭರವಸೆ ನೀಡಿದ್ದರೂ, ಸದರಿ ಕಾಲುವೆ ನಿರ್ಮಿಸಿಕೊಡದಿರಲು ಕಾರಣವೇನು ;

(ಈ) ಸದರಿ ಕೆರೆಗೆ ಪೋಷಕ ಕಾಲುವೆ ನಿರ್ಮಿಸಿಕೊಡದಿರುವುದರಿಂದ ಅಲ್ಲಿನ ರೈತರಿಗೆ ಆಗಿರುವ ತೊಂದರೆಗಳೇನು ; ಪರಿಸರ ಮಾಲಿನ್ಯದ ಮೇಲೆ ಆಗಿರುವ ಪರಿಣಾಮಗಳೇನು ; ನೀರಿಲ್ಲದೆ ಜನ, ಜಾನುವಾರುಗಳಿಗೆ ಆತಂಕದ ಪರಿಸ್ಥಿತಿ ನಿರ್ಮಾಣವಾಗಿದೆಯೇ ;

(ಉ) ನೂರಾರು ಎಕರೆ ಭೂಮಿಗೆ ನೀರಿನ ಸರಬರಾಜು ಇಲ್ಲದೆ ರೈತರು ಫಸಲು ಬೆಳೆಯಲಾಗದೆ ಕಂಗಾಲಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಸದರಿ ಫ್ಯಾಕ್ಟರಿಯವರು ನೀಡಿರುವ ಭರವಸೆಯಂತೆ ಪೋಷಕ ಕಾಲುವೆ ನಿರ್ಮಿಸಿಕೊಡುವ ತನಕ ಸದರಿ ಫ್ಯಾಕ್ಟರಿಯನ್ನು ತಾತ್ಕಾಲಿಕವಾಗಿ ಮುಚ್ಚಲಾಗುವುದೇ ; ಸಮರೋಪಾದಿಯಲ್ಲಿ ಸದರಿ ಪೋಷಕ ಕಾಲುವೆ ನಿರ್ಮಿಸಲು ಸರ್ಕಾರ ಮುಂದಾಗುವುದೇ ?

# ರಾಜ್ಯ ಸರ್ಕಾರದ ನೌಕರರಿಗೆ ಆರೋಗ್ಯ ಯೋಜನೆಯಡಿಯಲ್ಲಿ ಜ್ಯೋತಿ ಸಂಜೀವಿನಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೬೫೦ (೧೩೫೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರದ ನೌಕರರಿಗೆ ಆರೋಗ್ಯ ಯೋಜನೆಯಡಿ ಜ್ಯೋತಿ ಸಂಜೀವಿನಿಯನ್ನು ಸರ್ಕಾರ ಯಾವಾಗಿನಿಂದ ಜಾರಿಗೆ ತಂದಿರುತ್ತದೆ ;

(ಆ) ಈ ಯೋಜನೆಯನ್ನು ಕೆ.ಜಿ.ಐ.ಡಿ. ಖಾತೆ ಹೊಂದಿರುವವರಿಗೆ ಮಾತ್ರ ಅನ್ವಯವಾಗುವಂತೆ ಮಾಡಿರುತ್ತದೆಯೇ ;

(ಇ) ಅರೆ ಸರ್ಕಾರಿ ಸಂಸ್ಥೆಗಳಾದ ಜಯದೇವ ಹೃದ್ರೋಗ ಸಂಸ್ಥೆ, ಹಾಗೂ ಕಿದ್ವಾಯಿ ಆಸ್ಪತ್ರೆ ಮತ್ತು ಅರೆ ಸರ್ಕಾರಿ ಸಂಸ್ಥೆ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆ ಅನ್ವಯಿಸುತ್ತದೆಯೇ ; ಇಲ್ಲದಿದ್ದ ಪಕ್ಷದಲ್ಲಿ ಈ ಯೋಜನೆಗೆ ಸದರಿ ನೌಕರರನ್ನು ಸೇರ್ಪಡಿಸಲು ಕೈಗೊಳ್ಳುವ ಕ್ರಮವೇನು ?

## ಬೆಂಗಳೂರು ರಸ್ತೆ ಅಗಲೀಕರಣದ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೧೬೫೧ (೧೮೨೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ರಸ್ತೆ ಅಗಲೀಕರಣಕ್ಕಾಗಿ ಎಷ್ಟು ಪ್ರಸ್ತಾವಗಳು ಸರ್ಕಾರದ ಮುಂದಿದೆ ;

(ಆ) ಕಳೆದ ३ ವರ್ಷಗಳಿಂದ ಎಷ್ಟು ರಸ್ತೆಗಳನ್ನು ಅಗಲೀಕರಣ ಕಾರ್ಯ ಕೈಗೊಳ್ಳಲಾಗಿದೆ ;

(ಇ) ಉದ್ದೇಶಿತ ರಸ್ತೆ ಅಗಲೀಕರಣ ವಿಳಂಬವಾಗಲು ಕಾರಣವೇನು ?

## ದಿವಂಗತ ಮಾಜಿ ಮುಖ್ಯಮಂತ್ರಿಗಳಿಗೆ ಗೌರವದ ವಿಚಾರ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೧೬೫೨ (೧೯೨೫) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ೧೯೪೭ ರಿಂದ ಇಲ್ಲಿಯವರೆಗೆ ರಾಜ್ಯದ ಮುಖ್ಯ ಮಂತ್ರಿಗಳಾಗಿ ನಿಧನರಾಗಿರುವ ಎಲ್ಲಾ ಮುಖ್ಯಮಂತ್ರಿಗಳಿಗೆ ಅವರ ಜನ್ಮ ದಿನ ಮತ್ತು ಪುಣ್ಯ ದಿನಗಳನ್ನು ಸರ್ಕಾರದ ವತಿಯಿಂದ ಆಚರಿಸುತ್ತಿಲ್ಲವೇಕೆ, ಇದನ್ನು ಅಚರಿಸಲು ಸರ್ಕಾರ ಗಮನಹರಿಸುವುದೆ ?

## ಕಲಬುರಗಿ ಜಿಲ್ಲೆಯಲ್ಲಿ ವಾಹನ ಕಳ್ಳತನ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ) :-**

೧೬೫೩ (೧೮೩೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ನಡೆದ ವಾಹನ ಕಳ್ಳತನ ಪ್ರಕರಣಗಳ ಸಂಖ್ಯೆ ಎಷ್ಟು ; (ಠಾಣೆವಾರು ವಿವರ ಒದಗಿಸುವುದು)

(ಆ) ಇದುವರೆವಗೂ ಪತ್ತೆ ಹಚ್ಚಿರುವ ಮತ್ತು ಪತ್ತೆ ಹಚ್ಚದಿರುವ ವಾಹನ ಪ್ರಕರಣಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಇ) ಇದುವರೆವಿಗೂ ಪತ್ತೆ ಹಚ್ಚಿ ವಾರಸುದಾರರು/ಮಾಲೀಕರಿಗೆ ನೀಡಿರುವ ವಾಹನಗಳ ಸಂಖ್ಯೆ ಎಷ್ಟು ;

(ಈ) ಹಾಗಾದರೆ, ಇದುವರೆವಿಗೂ ಪತ್ತೆ ಹಚ್ಚದಿರಲು ಕಾರಣಗಳೇನು ?

## ಗುತ್ತಿಗೆ ನೌಕರರಿಗೆ ನಿಗಧಿಪಡಿಸಿರುವ ವೇತನ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ) :-**

೧೬೫೪ (೧೮೩೭) ಮಾನ್ಯ ಮುಖ್ಯಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಮಾನ್ಯ ಶಾಸಕರುಗಳ ಆಪ್ತ ಸಹಾಯಕ ನೌಕರರುಗಳ ಸಂಖ್ಯೆ ಎಷ್ಟು ;

(ಆ) ಈ ನೌಕರರುಗಳಿಗೆ ನಿಗಧಿಪಡಿಸಿರುವ ವೇತನ ಮತ್ತು ಇನ್ನಿತರೆ ಭತ್ಯೆಗಳ ಪೂರ್ಣ ಮಾಹಿತಿ ನೀಡುವುದು ;

(ಇ) ಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಮಾನ್ಯ ಶಾಸಕರುಗಳ ಆಪ್ತ ಸಹಾಯಕರುಗಳಿಗೆ ವಿಧಾನಸಭೆ ಮತ್ತು ಪರಿಷತ್ತು ಅಧಿವೇಶನದ ಸಂದರ್ಭದಲ್ಲಿ ದಿನಭತ್ಯೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಹಾಗಿದ್ದಲ್ಲಿ, ಸರ್ಕಾರ ದಿನಭತ್ಯೆ ನೀಡಲು ಕೈಗೊಂಡಿರುವ ಕ್ರಮಗಳೇನು ;

(ಉ) ಹಾಗಿಲ್ಲದಿದ್ದಲ್ಲಿ, ದಿನಭತ್ಯೆ ನೀಡಲು ಸರ್ಕಾರಕ್ಕಿರುವ ಅಡೆ–ತಡೆಗಳೇನು ; ದಿನಭತ್ಯೆ ನಿಡಲು ಸರ್ಕಾರ ಅನುಸರಿಸಬೇಕಾದ ಮಾನದಂಡಗಳೇನು ; (ವಿವರ ಒದಗಿಸುವುದು)

(ಊ) ಈ ಗುತ್ತಿಗೆ ಆಧಾರದಲ್ಲಿ ಮಾನ್ಯ ಸಚಿವರುಗಳ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನದ ವಿವರ ನೀಡುವುದು ?

**ಬಿ.ಡಿ.ಎ. ವತಿಯಿಂದ ಜಮೀನು ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ**

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :–**

೧೬೫೫ (೧೮೪೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹೊಸ ಬಡಾವಣೆಗಳನ್ನು ನಿರ್ಮಿಸುವ ಸಂಬಂಧ ಎಷ್ಟು ಎಕರೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ ;

(ಆ) ವಿವಿಧ ಬಡಾವಣೆಗಳನ್ನು ನಿರ್ಮಿಸುವ ಸಂಬಂಧ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನಲ್ಲಿ ಎಷ್ಟು ಎಕರೆ ಜಾಗವನ್ನು ಡಿ ನೋಟೀಫೈ ಮಾಡಲಾಗಿದೆ ? (ಕಾರಣ ಸಹಿತ ಮಾಹಿತಿಯನ್ನು ಒದಗಿಸುವುದು)

## ಬಿ.ಡಿ.ಎ. ನಿವೇಶನದಾರರಿಗೆ ನಗರ ಜಿಲ್ಲಾಡಳಿತದಿಂದ ನೋಟೀಸ್ ನೀಡಿರುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :-**

೧೬೫೬ (೧೮೪೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿತವಾದ ಬಡಾವಣೆಗಳಲ್ಲಿ ವಾಸವಿರುವ ನಿವೇಶನದಾರರಿಗೆ ಅನಧಿಕೃತ ಒತ್ತುವರಿ ಮಾಡಲಾಗಿದೆ ಎಂದು ನೋಟೀಸ್ ನೀಡಿ ತೆರವುಗೊಳಿಸುತ್ತಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದುವರೆವಿಗೂ ಎಷ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳ ನಿವೇಶನದಾರರಿಗೆ ಬೆಂಗಳೂರು ನಗರ ಜಿಲ್ಲಾಡಳಿತದಿಂದ ನೋಟೀಸ್ ನೀಡಲಾಗಿದೆ ; (ಬಡಾವಣೆಗಳ ವಿವರ ನೀಡುವುದು)

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಬೆಂಗಳೂರು ನಗರದ ಸುತ್ತ ಮುತ್ತ ಯಾವ ಯಾವ ಕೆರೆಗಳನ್ನು ಬಡಾವಣೆಗಳನ್ನಾಗಿ ಪರಿವರ್ತಿಸಿ ನಿವೇಶನಗಳನ್ನು ಹಂಚಲಾಗಿದೆ ; (ವಿವರ ನೀಡುವುದು)

(ಈ) ಈ ರೀತಿ ಮಾಡಲಾದ ಬಡಾವಣೆಗಳಲ್ಲಿ ನಿವೇಶನ ಪಡೆದ ಜನರ ಹಿತ ಕಾಪಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

## ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಡೆದ ಕೊಲೆ, ಸುಲಿಗೆ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು)** :–

೧೬೫೭ (೧೮೪೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ನಡೆದ ಕೊಲೆ, ಕಳ್ಳತನ, ಸುಲಿಗೆ ಪ್ರಕರಣಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಇವುಗಳಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ;

(ಇ) ಪತ್ತೆ ಹಚ್ಚಲಾಗದೆ ಉಳಿದಿರುವ ಪ್ರಕರಣಗಳು ಎಷ್ಟು ; ಪ್ರಕರಣವಾರು ವಿವರ ನೀಡುವುದು ;

(ಈ) ಪ್ರಕರಣಗಳನ್ನು ಪತ್ತೆ ಹಚ್ಚಲು ವಿನೂತನವಾದ ಮೊಬೈಲ್ ಟ್ರ್ಯಾಕಿಂಗ್ ತಂತ್ರಜ್ಞಾನವನ್ನು ಬಳಸಲಾಗುತ್ತಿದೆಯೇ ;

(ಉ) ಹಾಗಿದ್ದರೆ, ಮೊಬೈಲ್ ಟ್ರ್ಯಾಕಿಂಗ್ ತಂತ್ರಜ್ಞಾನವನ್ನು ಬಳಸಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ? (ಪ್ರಕರಣವಾರು ವಿವರ ನೀಡುವುದು)

## ಶಾಲಾ, ಕಾಲೇಜುಗಳ ಹಾಗೂ ದೇವಸ್ಥಾನಗಳ ಪಕ್ಕದಲ್ಲಿ ಮದ್ಯದಂಗಡಿಗಳು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೬೫೮ (೨೦೧೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಬಕಾರಿ ಕಾನೂನಿನ್ವಯ ಶಾಲೆ, ದೇವಸ್ಥಾನಗಳು ಮತ್ತು ಮದ್ಯದಂಗಡಿಗಳ ಮಧ್ಯೆ ಇರುವ ಅಂತರವೆಷ್ಟು ; ಈ ಮಾನದಂಡಕ್ಕಿರುವ ನಿಭಂದನೆಗಳ ಆಧಾರ ಪ್ರತಿ ಒದಗಿಸುವುದು;

(ಆ) ಈ ಕಾನೂನನ್ನು ರಾಜ್ಯದಲ್ಲಿ ಪಾಲಿಸಲಾಗುತ್ತಿದೆಯೇ ;

(ಇ) ಹಾಗಿದ್ದಲ್ಲಿ, ಕಾನೂನು ಉಲ್ಲಂಘನೆ ಮಾಡಿರುವ ಪ್ರಕರಣಗಳೆಷ್ಟು ; ಇವುಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ರಾಜ್ಯದ ನಗರಗಳಲ್ಲಿನ ವಸತಿ ಬಡಾವಣೆಗಳಲ್ಲಿ ನಡೆಸುತ್ತಿರುವ ಹಲವಾರು ಶಾಲಾ ಕಾಲೇಜುಗಳ ಪಕ್ಕದಲ್ಲಿ ಮದ್ಯದಂಗಡಿಗಳು ಕಾರ್ಯನಿರ್ವಹಿಸುತ್ತಿದ್ದು ಇದರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಅಬಕಾರಿ ಇಲಾಖೆಯಲ್ಲಿ ನಿ. ೩೨ರಡಿ ಬಡ್ತಿ ಪಡೆದ ಅಧಿಕಾರಿಗಳು ಮತ್ತು ನೌಕರರ ಮಾಹಿತಿ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೬೫೯ (೨೦೫೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಬಕಾರಿ ಇಲಾಖೆಯಲ್ಲಿ ನಿಯಮ ೩೨ರಡಿಯಲ್ಲಿ ಬಡ್ತಿ ಪಡೆದು ಕೆಲಸ ಮಾಡುತ್ತಿರುವ ಅಧಿಕಾರಿಗಳ, ನೌಕರರ ಸಂಖ್ಯೆ ಎಷ್ಟು ; ಯಾವ ಯಾವ ಅಧಿಕಾರಿಗಳು ಮತ್ತು ನೌಕರರು ಎಷ್ಟು ವರ್ಷಗಳಿಂದ ಈ ನಿಯಮದಡಿ ಬಡ್ತಿ ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ ;

(ಆ) ಈ ನಿಯಮದಡಿ ಬಡ್ತಿ ಪಡೆದವರಿಗೆ ಆರು ತಿಂಗಳು ಮಾತ್ರ ಮುಂದುವರೆಸಲು ಅವಕಾಶವಿದೆ ; ಈ ನಿಯಮದಡಿ ಬಡ್ತಿ ಪಡೆದು ಆರು ತಿಂಗಳ ನಂತರವೂ ಮುಂದುವರೆಸಿರುವ ಅಧಿಕಾರಿಗಳು ಮತ್ತು ನೌಕರರ ಹೆಸರು, ಪದನಾಮದ ವಿವರ ನೀಡುವುದು ; ಯಾವ ಕಾರಣಕ್ಕಾಗಿ ಆರು ತಿಂಗಳುಗಳಿಂದ ಹೆಚ್ಚು ಅವಧಿಗೆ ಮುಂದುವರೆಸಲಾಗಿದೆ ;

(ಇ) ಈ ಅಡ್-ಹಾಕ್ (adock) ವ್ಯವಸ್ಥೆಯಿಂದಾಗಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಡ್ತಿ ಪಡೆಯಲು ವಿಳಂಬ ಆಗುತ್ತಿಲ್ಲವೇ ; ಈ ವಿಳಂಬವನ್ನು ಹೇಗೆ ಸರಿಪಡಿಸಲಾಗುವುದು ?

## ಮದ್ಯದ ಅಂಗಡಿ (ಬಾರ್)ಯ ವಿವರ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೬೬೦ (೨೦೬೬) ಮಾನ್ಯ ಮುಖ್ಯಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಬಕಾರಿ ಇಲಾಖೆ ವ್ಯಾಪ್ತಿಯಲ್ಲಿ ಒಳಪಡುವ CL-2/CL-4/ CL-7/CL-9 ಹಾಗೂ CL-11(c) ಮದ್ಯದ ಅಂಗಡಿ (ಬಾರ್)ಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಮದ್ಯದಂಗಡಿ (ಬಾರ್)ಗಳನ್ನು ತೆರೆಯಲು ಸರ್ಕಾರ ನೀಡಿರುವ ಮಾನದಂಡಗಳೇನು ; (ಸರ್ಕಾರದ ಆದೇಶ ಮತ್ತು ಸುತ್ತೋಲೆಗಳನ್ನು ನೀಡುವುದು)

(ಇ) ಇತ್ತೀಚೆಗೆ Rule-5 (ನಿಯಮ-೫) ಉಲ್ಲಂಘನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಬಂದಿದ್ದರೆ, ಅವುಗಳು ಯಾವುವು ಪೂರ್ಣ ಮಾಹಿತಿ ನೀಡುವುದು)

(ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ-2, ಬೆಂಗಳೂರು-59/ಕಾ.ಸೂ.03515/ 1200 ಪ್ರತಿಗಳು/14-03-15